ಈ ಸಂದರ್ಭದಲ್ಲಿ ತಮಗೆ ತಿಳಿಸಿ ಹೇಳಿ, ಇದಕ್ಕೆ ಉತ್ತರ ಕೊಡತಕ್ಕಂಥ ಸಂಧರ್ಭದಲ್ಲಿ ತಾವು ವಿಷಯಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡಬೇಕೆಂದು ಹೇಳಿ ಸಭಾಧ್ಯಕ್ಷರೆ, ನಿಮಗೆ ನಮಸ್ಕಾರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು. ಒಂದು ನಿಮಿಷ ಒಂದು ಪ್ರಕಟಣೆ ಇದೆ. ಆಮೇಲೆ ಮಾತನಾಡಿ.

4. ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ದಿನಾಂಕ: 01.08.2012 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು : ಮಾತನಾಡಿ.

5. ನಿಯಮ 69ರ ಮೇರೆಗೆ ಸಾರ್ವನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ಡಾ. ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು 61ನೇ ವರ್ಷದ ಸ್ವಾತಂತ್ರ್ಯದ ನಂತರ ಅಭಿನಂದಿಸಲಿಕ್ಕೆ ಬಯಸುತ್ತೇನೆ. ಕಾರಣ ಕೇಂದ್ರ ಮತ್ತು ರಾಜ್ಯಗಳು ಚರ್ಚೆ ಮಾಡಿ, ಸಂವಿಧಾನದ 45–46ನೇ ಕಲಂನಲ್ಲಿ 6 ರಿಂದ 14 ವರ್ಷ ತುಂಬಿರುವ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕಂಥ Directive Principles ಏನಿತ್ತು, ಸಂವಿಧಾನದಲ್ಲಿ, 4ನೇ ಚಾಪ್ಟರ್‌ನಲ್ಲಿ, ಅದನ್ನು ರಾಜ್ಯ ಸರ್ಕಾರಗಳು ಕಡ್ಡಾಯವಾಗಿ ಜಾರಿ ಮಾಡಬಹುದು, ಮಾಡದೇ ಇರಬಹುದು ಎಂದು State subject ಆಗಿ ಅದನ್ನು ಪರಿಗಣಿಸಿ ಅಂದಿನ ಸಂವಿಧಾನದ ಪಿತಾಮಹಾರಾದ ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರು ಶಿಕ್ಷಣದ ಮಹತ್ವದ ಬಗ್ಗೆ, ಸರ್ವಾಂಗೀಣ ಅಭಿವೃದ್ಧಿ ಮತ್ತು ಬೆಳವಣಿಗೆ ಮತ್ತು ಜೀವನದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದಕ್ಕೆ ಇಂಥ ಒಂದು ಮಹತ್ತರವಾದಂಥ ವಿಷಯವನ್ನು ಸಂವಿಧಾನದ 45,

46ನೇ Indian Constitution ನಲ್ಲಿ Free and Compulsory education to the population age group 6 to 14 ಎಂದು ಹೇಳಿ ಮಾಡಿದರು. ಅದು ಆದಮೇಲೆ, ಸ್ವಾತಂತ್ರ್ಯದ ಪೂರ್ವದಲ್ಲಿ 1600ನೇ ಇಸವಿಯಲ್ಲಿ ಬ್ರಿಟಿಷರು East India company ಯನ್ನು ಕಲ್ಕತ್ತಾದಲ್ಲಿ ಪ್ರಾರಂಭ ಮಾಡಿ ತಮ್ಮ ವ್ಯಾಪಾರಕ್ಕೋಸ್ಕರ ಭಾರತ ದೇಶಕ್ಕೆ ಬಂದಾಗ, ಇಲ್ಲಿಯ ಸಾಂಪ್ರದಾಯಿಕ ಬದುಕನ್ನು ಅರ್ಥಮಾಡಿಕೊಂಡು ಶಿಕ್ಷಣವನ್ನು 10:2:3ರ ಅನುಪಾತದಲ್ಲಿ ಇವರಿಗೆ ಗುಮಾಸ್ತರಾಗಿ, ಕಾರಕೂನರಾಗಿ ಅವರ ಕೈಕೆಳಗಿನ ಅಧಿಕಾರಿಗಳಾಗಿ ಕೆಲಸ ಮಾಡಲಿಕ್ಕೆ East India Company ಆವತ್ತು ಶಿಕ್ಷಣವನ್ನು ಪ್ರಾರಂಭ ಮಾಡಿತು.

ಭಾರತ ದೇಶದ ಗುಲಾಮಗಿರಿಯ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡ ಮೇಲೆ ಇಲ್ಲಿಯ ಜಾತಿ ಮತ್ತು ಧರ್ಮದ ಮೂಢನಂಬಿಕೆಗಳ ಅಧ್ಯಯನವನ್ನು ತಿಳಿದುಕೊಂಡ ಮೇಲೆ ನಮ್ಮ ವ್ಯಾಪಾರ, ವಹಿವಾಟು ಮತ್ತು ಸಂಪತ್ತಿನ ಸಂಗ್ರಹಣಾ ವಸಾಹತು ಸಾಮ್ರಾಜ್ಯಶಾಹಿ ಹಿಡಿತ ಮತ್ತು ಅದರ ಪ್ರಭಾವವನ್ನು ಬಳಸಿಕೊಳ್ಳುವುದಕ್ಕೆ ಇಂಥ ಒಂದು ನೀತಿಯನ್ನು 1600ನೇ ಇಸವಿಯಲ್ಲಿ East India Company ಯವರು ಮಾಡಿದರು. ಅದು ಆದ ಮೇಲೆ ಮಾನ್ಯ ಅಧ್ಯಕ್ಷರೇ, Lord Macaulay ಭಾರತದ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಿ, ಅವರಿಗೆ ಉದ್ಯೋಗಗಳನ್ನು ಕೊಡುವುದಕ್ಕೆ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯನ್ನು ತರುವಂಥ ಪ್ರಯತ್ನವನ್ನು ಮಾಡಿದರೂ ಕೂಡ, ಅಂದು ಭಾರತ ದೇಶದಲ್ಲಿ All India Service ಇರಲಿಲ್ಲ. Indian Civil Service ಇತ್ತು, ಅದರಲ್ಲಿ ಸುಭಾಷ್ ಚಂದ್ರ ಬೋಸ್‌ರವರು ಆ ಪರೀಕ್ಷೆಯಲ್ಲಿ ಪಾಸಾಗಿ interview ಗೆ ಹೋದಾಗ ಅವರ ಮುಂದೆ ಅವರು Oral questions ಅನ್ನು ಕೇಳುತ್ತಾರೆ. Is Indian soldiers are dishonest? ಎನ್ನುವ ಮಾತನ್ನು ಕೇಳಿದಾಗ ಸ್ವಾಭಿಮಾನಿ ಮತ್ತು ದೇಶದ ಮಹಾನ್ ಸ್ವಾತಂತ್ರ್ಯ ಸೇನಾನಿ ದೇಶಪ್ರೇಮಿಯಾದಂಥ ಸುಭಾಷ್‌ಚಂದ್ರ ಬೋಸ್‌ರವರು ಬ್ರಿಟಿಷರ ಪ್ರಶ್ನೆಗೆ ಒಪ್ಪಿಕೊಂಡು ಹೇಳಿದ್ದರೆ ICS ಅವತ್ತು ಅವರಿಗೆ ಮಂಜೂರಾಗುತ್ತಿತ್ತು. ಆದರೆ ಅವರ ಪ್ರಶ್ನೆಯನ್ನು ಒಪ್ಪಿಕೊಳ್ಳದೇ, ಸುಭಾಷ್‌ಚಂದ್ರ ಬೋಸ್‌ರವರು Indian Soldiers are *honest* ಎಂದು ಹೇಳಿದ ಮೇಲೆ ICS ನಲ್ಲಿ ಅವರನ್ನು fail ಮಾಡುತ್ತಾರೆ.

ಅವರು ಇದಾದ ಮೇಲೆ ಮೂಢನಂಬಿಕೆ ಮತ್ತು ಮೌಢ್ಯಗಳನ್ನು ತುಂಬಿರುವಂಥ ಭಾರತ ದೇಶದ ಧಾರ್ಮಿಕ ಮತ್ತು ಜಾತಿ ಆಧಾರಿತ ಬದುಕಿನ ನಡವಳಿಕೆಗಳು ತಿಳಿದಂಥ ಅಂದಿನ ಭಾರತದ ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾಯಿಸುವಲ್ಲಿ ಬ್ರಿಟಿಷ್ ಗೌರ್ನರ್ ಜನರಲ್ ಲಾರ್ಡ್ ಡಾಲ್ ಹೌಸಿ ಮತ್ತು ಲಾರ್ಡ್ ಕರ್ಜನ್‌ರವರು ಭಾರತ ದೇಶದ ಸಾಮಾಜಿಕ ಬದುಕನ್ನು ಬದಲಾವಣೆ ಮಾಡುವುದಕ್ಕೆ ಸುಧಾರಕರಾಗಿ ಅವರು ಭಾರತ ದೇಶದಲ್ಲಿ ಶಿಕ್ಷಣದ ನೀತಿಯನ್ನು ಬದಲಾವಣೆ ಮಾಡುವ ದೊಡ್ಡ ನಿರ್ಧಾರಗಳನ್ನು ಮಾಡಿದರು. ಅದಕ್ಕೆ ರಾಜಾರಾಮ್ ಮೋಹನ್ ರಾಯ್ ರವರು ಲಾರ್ಡ್ ಡಾಲ್ ಹೌಸಿ ಮತ್ತು ಲಾರ್ಡ್ ಕರ್ಜನ್‌ರವರಿಗೆ ಬೆಂಬಲವಾಗಿ ನಿಂತರು. ಕಾರಣ ರಾಜಾರಾಮ್ ಮೋಹನ್ ರಾಯ್‌ರವರ ಅಣ್ಣ ತೀರಿ ಹೋದ ಮೇಲೆ ಹೆಂಡತಿ ವಿಧವೆಯಾದರು, ವಿಧವೆ ಆದ ಮೇಲೆ ಅಂದಿನ ಸತಿ ಪದ್ಧತಿಯಂತೆ ಅವರು ಪ್ರಾಣ ತ್ಯಾಗ ಮಾಡಿದ ಘಟನೆಯನ್ನು ನೋಡಿ ಇಂಥ ಮೂಢನಂಬಿಕೆ, ಇಂಥ ಧರ್ಮ ಆಧಾರಿತ ಬದುಕು ಇಡಿ ಭಾರತ ದೇಶದ ಜನರ ಜೀವನವನ್ನು ಹೊಸಕಿ ಹಾಕಿಬಿಡುತ್ತದೆಂದು ಹೇಳಿ, ಅಂಥ ಸಮಾಜ ಸುಧಾರಕರಿಗೆ ರಾಜಾರಾಮ್ ಮೋಹನ್ ರಾಯ್‌ರವರು ಬೆಂಬಲವಾಗಿ ನಿಂತು, ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವಂಥ ಲಾರ್ಡ್ ಡಾಲ್ ಹೌಸಿ ಮತ್ತು ಲಾರ್ಡ್ ಕರ್ಜನ್‌ರವರಿಗೆ ಬೆಂಬಲವಾಗಿ ನಿಂತು ಸುಧಾರಣೆಗಳನ್ನು ಮಾಡುವ ಪ್ರಯತ್ನಗಳನ್ನು ಮಾಡಿದರು. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಸಂವಿಧಾನದ ಮೂಲಕ ನಿರ್ದೇಶನ ತತ್ವಗಳನ್ನು ಕೊಟ್ಟು, ನಾನು ಈಗಾಗಲೇ ಹೇಳಿದ ರೀತಿಯಲ್ಲಿ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೆ ಉಚಿತವಾಗಿ, ಕಡ್ಡಾಯವಾಗಿ ಕೊಡಬೇಕು, ಅದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ಹೇಳಿ ಮಾಡಿದ ಮೇಲೆ ನಾವು 2011ನೇ Census ನಲ್ಲಿ ಸುಮಾರು ಈಗ ತಾನೇ ಬಿಡುಗಡೆಯಾಗಿರುವಂಥ Literacy programmeನಲ್ಲಿ Census Commissioner ಶ್ರೀ ಚಂದ್ರಮೌಳಿಯವರು ಹೇಳಿದ್ದಾರೆ, 9.2% rate of Literacy raise ಆಗಿದೆ, 74.04% according to data of the 2001 Census released on Thursday ಎಂದು ಹೇಳಿ ವರದಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರೇ, ತಮಗೆ ಗೊತ್ತಿದೆ, 1964–66 ರಲ್ಲಿ ದೇಶದಲ್ಲಿ ಕೊಠಾರಿ ಕಮಿಷನ್ ನೇಮಕವಾಯಿತು. ಆ ಸಮಿತಿಯಲ್ಲಿ ನಮ್ಮ ಧಾರವಾಡದ ಒಬ್ಬ ಮಹಿಳೆಯರು ಕೂಡಾ ಒಬ್ಬ ಸದಸ್ಯರಾಗಿದ್ದರು. ಸುಲಗಾಬಾಯಿ ಪಾಲಂದಿಕರ್, she was the member of Kothari Commission, ಈ ಕಮಿಷನ್‌ನ ವರದಿ ಜೀವನದ oriented ನಮಗೆ ಏನೇನು ಬೇಕು, ಉದ್ಯೋಗಕ್ಕೆ, ವಿಕಾಸಕ್ಕೆ, ಸಾಮರಸ್ಯದ ಬದುಕಿಗೆ ಮತ್ತು ಸೌಹಾರ್ದಯುತ ವಾತಾವರಣಕ್ಕೆ ಎನ್ನುವಂಥ ಅನೇಕ ಸಲಹೆಗಳನ್ನು ಕೊಠಾರಿ ಕಮಿಷನ್ ದೇಶಕ್ಕೆ ಕೊಟ್ಟಿತು. ಇದನ್ನು Bible of Education ಎಂದು India ದಲ್ಲಿ ಕರೆಯುತ್ತಾರೆ. Kothari Commission ವರದಿಯನ್ನು The Bible of Education ಎಂದು, ಶಿಕ್ಷಣದ ಬೈಬಲ್ ಎಂದು ಕರೆಯುತ್ತಿದ್ದಾರೆ. ಇದರಲ್ಲಿ ನಮ್ಮ ಧಾರವಾಡದ ಮಹಿಳೆ ಶ್ರೀಮತಿ ಸುಲಗಾಬಾಯಿ ಪಾಲಂದಿಕರ್‌ರವರು ಇದ್ದದ್ದು ನಮ್ಮೆಲ್ಲರಿಗೂ ಕೂಡಾ ಹೆಮ್ಮೆ ತರುವಂಥದ್ದು.

ಮಾನ್ಯ ಅಧ್ಯಕ್ಷರೇ, 1993ನೇ ಇಸವಿಯಲ್ಲಿ ಕರ್ನಾಟಕದಲ್ಲಿ ದಿವಂಗತ ಬಿ. ರಾಚಯ್ಯನವರು ಶಿಕ್ಷಣ ಸಚಿವರಾಗಿದ್ದಾಗ ಒಂದು ಶಿಕ್ಷಣದ ಬಿಲ್‌ನ್ನು ತಂದರು. ಆ ಬಿಲ್ಲಿನ ಮುಖಾಂತರ ಮಕ್ಕಳಿಗೆ ಶಿಕ್ಷಣ ಕೊಡುವುದು ಪೋಷಕರ ಜವಾಬ್ದಾರಿ, ಅದು ಆದ್ಯ ಕರ್ತವ್ಯ ಎಂದು ಹೇಳಿ ಅಂಥ ಒಂದು ಕಾಯಿದೆಯನ್ನು ಕೊಟ್ಟರೂ ಕೂಡಾ, ಇನ್ನೂ ನಮ್ಮ ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ದೇಶದಲ್ಲಿ ಕೊಡುವುದಕ್ಕೆ ಸಾಧ್ಯವಾಗದ ಹಿನ್ನೆಲೆಯಲ್ಲಿ ನಾವು ಅನೇಕ ಮೂಢನಂಬಿಕೆಗಳನ್ನು, ಮೌಢ್ಯಗಳನ್ನು ಮತ್ತು ಕೀಳು ತರಹದ ನಡವಳಿಕೆಗಳನ್ನು ಕಾಣುತ್ತಿದ್ದೇವೆ. ನಮ್ಮ ಟಿ.ವಿ.ಗಳು, ಮಾಧ್ಯಮಗಳನ್ನು ನೋಡಿದರೆ, ಟಿ.ವಿ ಹಾಕಿದ ತಕ್ಷಣ ಎಲ್ಲರ ಭವಿಷ್ಯವನ್ನು ಹೇಳುತ್ತಿರುತ್ತಾರೆ. ಯಾವುದೇ ಚಾನೆಲ್ ತಗೊಳ್ಳಿ, ಎಲ್ಲಾ MLA ಗಳು, ಅಧಿಕಾರಿಗಳು ಅವರ ಮನೆಯ ಬಾಗಿಲುಗಳನ್ನು, ಕಿಟಕಿಗಳನ್ನು, ಅಡುಗೆ ಮನೆಯನ್ನು, Toilet ನ್ನು Change ಮಾಡಬೇಕು ಎಂದು ಹೇಳುತ್ತಾರೆ. ವಾಸ್ತು, Vaasthu is an Engineering Science, ಸೂರ್ಯ ಹುಟ್ಟಿದಾಗ ಬೆಳಕು ಹೇಗೆ ಮನೆ ಒಳಗೆ ಬಂದು reflect ಆಗಬೇಕು ಎನ್ನುವುದು it is Physics, ನಾವು ಅಡುಗೆ ಮನೆಯಲ್ಲಿ ಅಡುಗೆ ಮಾಡುವಾಗ ಸಾಂಬಾರ್ ಒಗ್ಗರಣೆ ಹಾಕಿದಾಗ ಮನೆ ವಾತಾವರಣವನ್ನು ಅದು ಒಗ್ಗರಣೆ ಬಂದು ಅಲ್ಲಿರುವಂಥ ಜನರಿಗೆ ನೆಗಡಿ,

ಕೆಮ್ಮು ಆಗದೇ, ಆ ಘಾಟು ಮನೆಯಲ್ಲಿ ಪ್ರವೇಶ ಮಾಡದೇ ಆಚೆಗೆ ಹೇಗೆ ಹೋಗಬೇಕು, toilet ಗೆ ಹೋದಾಗ ಅಲ್ಲಿ ನಾವು ಮಲ–ಮೂತ್ರ ವಿಸರ್ಜನೆ ಮಾಡಿದರೆ ಅಲ್ಲಿರುವಂಥ ದುರ್ನಾತ ಮನೆ ವಾತಾವರಣದಲ್ಲಿ ಹೇಗೆ ಆಚೆಗೆ ಹೋಗಬೇಕು, ಮತ್ತು ಗಾಳಿ ಬೀಸಿದಾಗ ಬರುವಂಥ oxygen ಒಳಗೆ ಬಂದು, ನಾವು ಬಿಡುವಂಥ ಇಂಗಾಲ ಆಮ್ಲ, oxygen ನೊಂದಿಗೆ ಬೆರೆಯದೇ ಹೇಗೆ ಆಚೆ ಹೋಗಬೇಕು, Its purely 100% Science, an Engineering technology, ಇದನ್ನು ಹೇಳುತ್ತಾರೆ ಅಂದರೆ ಮುಖ್ಯ ಮಂತ್ರಿಗಳು, ಅವರ ಹೆಂಡತಿ, ಮಕ್ಕಳು, ಮಂತ್ರಿಗಳು, ಎಂ.ಎಲ್.ಎ ಗಳು ಎಲ್ಲರೂ ಇದನ್ನು ಶುರು ಮಾಡಿದ್ದಾರೆ, without understanding the science & technology. It is because of ignorance, it is because of illiteracy, ಇದನ್ನು ನಾನು ಏಕೆ ಹೇಳುವುದಕ್ಕೆ ಬಯಸುತ್ತೇನೆಂದರೆ ಶಿಕ್ಷಣದ ಮಹತ್ವನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ನಮ್ಮನ್ನು ಕಣ್ಣು ತೆರೆಸಬೇಕಾದಂಥ ಮಾಧ್ಯಮಗಳು ಮತ್ತು Electronic media ಗಳು ಕೂಡ ದುರುಪಯೋಗ ಮಾಡುವುದರ ಜೊತೆಗೆ ಸಂವಿಧಾನಕ್ಕೆ ವಿರುದ್ಧವಾಗಿ ಇವು ಕೂಡ ನಡೆದುಕೊಳ್ಳುತ್ತಿದ್ದಾವೆ. ಅದಕ್ಕೆ ಈ ಬಿಲ್ಲನ್ನು ತಯಾರು ಮಾಡಿದಂಥ ಅತ್ಯಂತ ಪ್ರಮುಖ ಪಾತ್ರ ವಹಿಸಿದಂಥ ಭರತಾಂಬ ಅವರು educationist, who rooted the bill arguing that sharing social responsibility should be seen as a privilege not as a burden. ಈ education ಬಿಲ್ಲನ್ನು Fundamental Right ಎಂದು ಮಾಡಿದ್ದಾರೆ, draft ಮಾಡುವಾಗ ಪ್ರಮುಖ ಪಾತ್ರ ವಹಿಸಿದ್ದಾರೆ, The Principal Modern School, Latha Vidyanathan and Barathamba, New Delhi ಇವರು ಹೇಳಿರುವುದು, ಇದು ಒಂದು Social responsibility, sharing social responsibility ಶಿಕ್ಷಣ ಕೊಡುವಂಥದ್ದು sharing social responsibility for the entire nation, but it is not a burden ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದೊಂದು ಅತ್ಯಂತ ಮಹತ್ತರವಾದ ಬಿಲ್ಲು, ಇದರಲ್ಲಿ ಗ್ರೀಕ್ ದೇಶದ ಬಗ್ಗೆ ನಿಮಗೆ ಗೊತ್ತಿದೆ, ನಾಗರಿಕತೆಯನ್ನು ಹೇಳಿಕೊಟ್ಟಂಥ ದೇಶ, ಪ್ಲೇಟೋ ಏನು ಹೇಳಿದ್ದಾರೆಂದರೆ, A Philosopher must be a King, A King must be a Philosopher. They are all Global thinkers. Bismarck, Berhard shaw, Plato & some other people, they are all global thinkers, A Philosopher shall must be a King, A King must be a Philosopher, ಗ್ರೀಕ್ ದೇಶದಲ್ಲಿ ಮಕ್ಕಳನ್ನು ಅಲ್ಲಿ ಸರ್ಕಾರದ ಗೋಡೌನ್‌ನಲ್ಲಿ ಇಟ್ಟುಕೊಂಡು ಸಾಕಿ ಬೆಳೆಸಿ ಶಾಲೆಗೆ ಕಳುಹಿಸುತ್ತಿದ್ದರು.

ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮಲ್ಲಿ ಶಿಕ್ಷಣದಿಂದ ವಂಚಿತರಾಗಿರುವ. ಮಕ್ಕಳು ಈಗ ನಮ್ಮ ಸರ್ಕಾರದ census ಪ್ರಕಾರ ಹೇಳಿದ್ದಾರೆ. 82% literacy ಮಂಗಳೂರಿನಲ್ಲಿ, 54% literacy ಯಾದಗಿರಿಯಲ್ಲಿದೆ. ಇನ್ನು ಬಳ್ಳಾರಿ, ರಾಯಚೂರು, ಬಿಜಾಪುರ, ಚಾಮರಾಜನಗರ ಜಿಲ್ಲೆಗಳಲ್ಲಿ ನೋಡಿ. ಶಿಕ್ಷಣದಿಂದ ಏನಾಗುತ್ತದೆ. Secondary and Tertiary activities, ಅವರಿಗೆ ಗೌರವಯುತವಾಗಿ ಬದುಕುವ ಪೂರಕ ವಾತಾವರಣ ಅಲ್ಲಿ ಸೃಷ್ಟಿ ಮಾಡಲು ಅವಕಾಶವಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಚರ್ಚೆ ಮಾಡಿ ನೀವು ದುಡ್ಡು ಕೊಡಿ ಎಂದರೆ ಅಗುವುದಿಲ್ಲವೆಂದು ಹೇಳಿದ್ದಾರೆ. Ultimately, the Human Resources, Development Ministry, 55 ಸಾವಿರ ಕೋಟಿ ರೂ.ಗಳನ್ನು ಪ್ರತಿ ವರ್ಷ ಖರ್ಚು ಮಾಡುತ್ತೇವೆಂದು ಹೇಳಿದೆ. Planning Commission ಮುಂದೆ Finance Department ಚರ್ಚೆ ಮಾಡಿ they asked State Government for their share. ಅವರಿಗೆ ಆಗುವುದಿಲ್ಲ ಕಷ್ಟ ಇದೆ ಎಂದು ಹೇಳಿದ ಮೇಲೆ, Human Resources Development Ministry 55 ಸಾವಿರ ಕೋಟಿ ರೂ.ಗಳನ್ನು ಪ್ರತಿ ವರ್ಷ ಮಕ್ಕಳಿಗೆ ಶಿಕ್ಷಣ ಕೊಡಲು ಕೊಡುತ್ತಿದೆ. ಈ ಬಿಲ್ಲನ್ನು ಮಾಡುವಾಗ ಏನೇನು ಕೊಟ್ಟಿದ್ದಾರೆಂದರೆ, Compulsory Education to every child, it is a boost to the Country's education sector. 25% reservation ಕೊಡುವಾಗ this type of children for the neighbourhood at the entry level, the government will reimburse the expenditure incurred by schools. No donation or capitation, Interviewing the child or parents as part of the screening process. The Bill also prohibits physical punishment. Expulsion, detention of a child, deployment of teachers for non-education purposes. Running a school without recognition will attract a penal action. ಮಾನ್ಯ ಅಧ್ಯಕ್ಷರೆ, important promises to children would become a fundamental right. Important promises to the children by RTE, it should be a fundamental right. It would be legally enforceable duty of the Centre and the state to provide free and compulsory education. It is the duty of Centre and the State to provide free and compulsory education and it is an enforceable duty of the centre and the State Governments. ಮಾನ್ಯ ಅಧ್ಯಕ್ಷರೇ, ಇಂತಹ ಒಂದು ಮಹತ್ತರವಾದ ಕಾಯಿದೆಯನ್ನು ಜಾರಿ ಮಾಡುವಾಗ ಸರ್ಕಾರ ತುಂಬ ಎಚ್ಚರಿಕೆಯಿಂದ ಮತ್ತು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಈ ಬಿಲ್ಲಿನ ಪ್ರಕಾರ 1 ಲಕ್ಷ 12 ಸಾವಿರ ಮಕ್ಕಳಿಗೆ 25%. ಇದರಲ್ಲಿ ಮೂರು ತರಹದ್ದು ನಡೆಯುತ್ತದೆ. Government, Aided and unaided schools. ಒಂದು ಶಾಲೆಯಿಂದ 1 ಕಿ.ಮೀ, 2 ಕಿ.ಮೀ. 3 ಕಿ.ಮೀ. ದೂರದಲ್ಲಿ ಶಾಲೆಗಳಿರಬೇಕು, neighbourhood ಅಂತ. 1 ಲಕ್ಷ 12 ಸಾವಿರ ಮಕ್ಕಳಿಗೆ ಆರ್.ಟಿ.ಇ. ಮುಖಾಂತರ ಖಾಸಗಿ ಶಾಲೆಗಳಲ್ಲಿ ಕಡ್ಡಾಯ Admissions ಕೊಡಬೇಕು. It is a direction given by the Hon'ble Supreme Court of India, the apex court. 2009 ರಲ್ಲಿ ಕಾಯಿದೆ ಆಗಿದ್ದು, ಸುಪ್ರೀಂ ಕೋರ್ಟಿನಿಂದ direction ಈಗ ಬಂತು. ಬಂದ ತಕ್ಷಣವೇ cabinet has reviewed. The State Cabinet immediately reviewed and it has started acting. 1 ಲಕ್ಷ 12 ಸಾವಿರ ಮಕ್ಕಳಲ್ಲಿ, 40 ಸಾವಿರ ಮಕ್ಕಳಿಗಷ್ಟೆ ಕೊಟ್ಟಿದ್ದಾರೆ. ಇಲ್ಲಿ ನೋಡಿ ಹಿಂದಿನ ಬೆಂಚಿನಲ್ಲಿ ಕೂರಿಸುವುದು, hair cut ಮಾಡುವುದು, RTE Act ನಲ್ಲಿ discrimination ಮಾಡುವುದಕ್ಕೆ ಬರುವುದಿಲ್ಲ. ಆ ತರಹ ಮಾಡಲಿಕ್ಕೆ ಬರುವುದಿಲ್ಲ. 1998, 2000, 2001 ರಲ್ಲಿ Human Rights Commission ಜೊತೆ ಚರ್ಚೆ ಮಾಡಿದೆವು ಕರ್ನಾಟಕದಲ್ಲಿ. Untouchability problems ಅನ್ನು International levelಗೆ ತೆಗೆದುಕೊಂಡು ಹೋಗಿ ಚರ್ಚೆ ಮಾಡಬೇಕು ಅಂತ. ಜೋಹಾನ್ಸ್ ಬರ್ಗ್‌ಗೆ ತೆಗೆದುಕೊಂಡು ಹೋಗಬೇಕು ಅಂತ. Apartheid, segregation, colonialisim, untouchability all these things should be discussed in the international forum. ಇಂತಹ ಒಂದು ಮಹತ್ತರವಾದ

ಬಿಲ್ ಅನ್ನು ಕೇಂದ್ರದ NDA Government has started preparing this Bill. Before moving the Bill, it has lost its government in the election. Subsequently the UPA Government formulated and the Parliament has passed. Parliament means; the entire members of the Parliament, they've passed this Bill unanimously. It is a social obligation of the entire nation. 100 ಕ್ಕೆ 100 ಸಾಕ್ಷರತೆಯನ್ನು ಸಾಧಿಸುವುದಕ್ಕೋಸ್ಕರ our secondary & Tertiary sectors are going to be improved. ನಮಗೆ ಯಾವ ಒಂದು ಮುಕ್ತವಾದ ಮಾರ್ಗ ಬೇಕು, ನಮ್ಮ ಬದುಕಿಗೆ ಏನು ಬೇಕು, ಅದನ್ನು ಆಯ್ಕೆ ಮಾಡಲಿಕ್ಕೆ ಮತ್ತು harmonious atmosphere ನಲ್ಲಿ ಬದುಕುವುದು ಹೇಗೆ ಎಂಬ ಒಂದು ಅತ್ಯಂತ ಮಹತ್ತರವಾದ ವಿಷಯ ಈ ಕಾಯ್ದೆಯಲ್ಲಿ ಇದೆ. ಕೆಲವರಿದ್ದಾರೆ ಕೊಳಕು ಮನಸ್ಸುಗಳು. ಖಾಸಗಿ ಶಾಲೆಗಳಲ್ಲಿ reservation ಕೊಟ್ಟು ಬಡ ಮಕ್ಕಳನ್ನು ಕೊಳಚೆ ಪ್ರದೇಶದ ಮಕ್ಕಳನ್ನು ಸೇರಿಸಿಕೊಂಡರೆ, ಕೊಳಚೆ ನೀರು ಸಮುದ್ರದಲ್ಲಿ ಬಂದು ಸಮುದ್ರದ ನೀರೆಲ್ಲಾ ಕೊಳಕಾಗುತ್ತದೆಂಬ ಉದ್ಧಟತನದ ಮಾತುಗಳು they attract penalization. ಇಂತಹ ಒಂದು ನಿಲುವುಗಳಿಂದ ಭಾರತ ದೇಶದ ಸ್ವಾತಂತ್ರದ ಮೂಲ ಉದ್ದೇಶಕ್ಕೆ ಧಕ್ಕೆ ಆಗುತ್ತದೆ. ಮತ್ತು ಭಾರತ ದೇಶದ ಜನರು ಮೌಢ್ಯಗಳನ್ನು, ಧರ್ಮ ಮೀರಿದ ನಡವಳಿಕೆಗಳನ್ನು ಜಾತ್ಯಾತೀತವಾದ ಬದುಕನ್ನು ನಡೆಸಲಿಕ್ಕೆ ಮುಕ್ತವಾಗಿ ಒಂದು ದೊಡ್ಡ ಅವಕಾಶ ನಮ್ಮ ದೇಶಕ್ಕೆ ಬಂದಿರುವುದರಿಂದ 61 ವರ್ಷಗಳ ನಂತರ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕಂಡಂತಹ ಕನಸು ಎಲ್ಲರಿಗೂ ಶಿಕ್ಷಣವನ್ನು ಕೊಡಬೇಕು. ಶಿಕ್ಷಣವೇ ನಮ್ಮ ಬದುಕಿನ ಮೂಲ ವಿಕಾಸಕ್ಕೆ ಮತ್ತು ಸಾಮರಸ್ಯದ ಬದುಕಿಗೆ ಕಾರಣ ಎಂದೇನು ವ್ಯಾಖ್ಯಾನ ಮಾಡಿದ್ದರು ಅದನ್ನು ಸಾರ್ಥಕಪಡಿಸಿಕೊಳ್ಳಲಿಕ್ಕೆ ಈ ಕಾಯಿದೆಯನ್ನು ಸುದಪಯೋಗ ಮಾಡಬೇಕು. ಸರ್ಕಾರದ ಜವಾಬ್ದಾರಿ ಇದೆ. ಸಮುದಾಯದ ಜವಾಬ್ದಾರಿ ಇದೆ. ಪ್ರತಿನಿಧಿಗಳು ಮತ್ತು ರಾಜಕೀಯ ಪಕ್ಷಗಳು, ಧಾರ್ಮಿಕ ಕೇಂದ್ರಗಳ ಎಲ್ಲರ ಜವಾಬ್ದಾರಿ ಸಾಮಾಜಿಕವಾಗಿ ಇರುವುದರಿಂದ ಇದು ಒಂದು credit ಸಿಗುವುದು ಸುಯೋಗ ಎಂದು ನಾನು ಭಾವಿಸಿ ಈ ಕಾಯಿದೆಯಲ್ಲಿ ಏನಿತ್ತು ಕೇವಲ 40% ಅಷ್ಟನ್ನೇ ಪ್ರಾರಂಭ ಮಾಡಿದೆ ಕೇಂದ್ರ ಸರ್ಕಾರ. ಇದರಲ್ಲಿ ICS, 1937 ನಲ್ಲಿ ಗಾಂಧೀಜಿಯವರು

Universal Education ಪ್ರತಿಪಾದನೆ ಮಾಡಿದ್ದರು. ಇನ್ನು 2004 ರಲ್ಲಿ ಕೇಂದ್ರ ಸರ್ಕಾರ ದೇಶದಲ್ಲಿ ಎಲ್ಲರಿಗೂ ಒಂದೇ ರೀತಿಯ ಶಿಕ್ಷಣ ಕೊಡಬೇಕು ಎಂದು ಏನು ಮಾಡಿದೆ ಅದಕ್ಕೆ ನಾನು ಬೆಂಬಲವನ್ನು ಕೊಡುತ್ತೇನೆ. ಅದನ್ನು ಮಾಡಬೇಕು. ನಾವೆಲ್ಲಾ ಭಾರತೀಯರು ಒಂದು. ನಾವೆಲ್ಲಾ ಮಾನವರು. ಎಂಬ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಶಿಕ್ಷಣದ ಮೂಲಕ ಸಾಧ್ಯವಿದೆ. ಆ ಕೆಲಸವನ್ನು ಮಾಡಬೇಕೆಂದು ಹೇಳಿ, ಶಿಕ್ಷಣದಲ್ಲಿ ಕೇಸರೀಕರಣವನ್ನು, ಜಾತಿವಾದವನ್ನು, ಧರ್ಮ ಆಧಾರಿತ ಬದುಕನ್ನು ನಿರೂಪಣೆ ಮಾಡದೆ ವೈಜ್ಞಾನಿಕವಾಗಿ ಮನುಷ್ಯನ ವಿಕಾಸಕ್ಕೆ this is the greatest investment. ವ್ಯಕ್ತಿಗೆ ಮತ್ತು ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ಅದು ಕೊಡುತ್ತದೆಂಬ ವಿಶ್ವಾಸ, ನಂಬಿಕೆ ಎಲ್ಲರಿಗೂ ಇರಬೇಕು. ಆ ರೀತಿಯಲ್ಲಿ Right to Education Act Bill 61 ವರ್ಷದ ನಂತರ ಬಂದು Fundamental right ಆಗಿರುವುದು ಅತ್ಯಂತ ಸ್ವಾಗತಾರ್ಹ ವಿಷಯ. ಇಡೀ ರಾಜ್ಯದ ಜನರು, ಸಮುದಾಯಗಳು ಮತ್ತು ಪ್ರತಿನಿಧಿಗಳು ಎಲ್ಲಾ ಮಕ್ಕಳಿಗೆ 18 ವರ್ಷದವರೆಗೆ ಶಿಕ್ಷಣ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯ. Puberty starts, reproduction life starts at 18 ಅಲ್ಲಿಯ ತನಕ ಕೊಡಬೇಕೆಂಬುದು ನನ್ನ ಒತ್ತಾಯ. ಆದುದರಿಂದ ಇಂತಹ ಮಹತ್ತರವಾದ ಕಾಯಿದೆಯಲ್ಲಿ ಯಾರೂ ಕೂಡಾ ಇದನ್ನು ನಿರ್ಲಕ್ಷ್ಯ, ನಿರಾಕರಣೆ ಮಾಡದ ರೀತಿಯಲ್ಲಿ RTE ಕಾನೂನುಗಳ ಮುಖಾಂತರ ಏನೇನು ಕ್ರಮ ತೆಗೆದು ಕೊಳ್ಳಬೇಕೆಂದು ನಿಮಗೆಲ್ಲ ಶಕ್ತಿಯನ್ನು ಕೊಟ್ಟಿದ್ದಾರೆ. Discrimination. ಇಲ್ಲ. ಹಿಂದಿನ ಬೆಂಚಿನಲ್ಲಿ ಕೂರಿಸುವಂತಿಲ್ಲ. ಕಳಪೆ ಊಟ ತಂದಿದ್ದೀಯ ಎನ್ನುವಂತಿಲ್ಲ. ಇವತ್ತು ಕೂಡಾ ಶ್ರೇಷ್ಠ ನ್ಯಾಯಾಲಯ ಇದನ್ನು serious ಆಗಿ ತೆಗೆದುಕೊಂಡಿದೆ. PLI ನಲ್ಲಿ ಯಾರೋ ಹಾಕಿದ್ದಾರೆ. Oxford ಸಂಸ್ಥೆಯ ನಡವಳಿಕೆಯ ಬಗ್ಗೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

I hate and condemn all these type of attitudes. ಮಾನ್ಯ ಉಪಾಧ್ಯಕ್ಷರೆ, ಆ ಒಂದು Right to Education Bill ನಮ್ಮ ರಾಜ್ಯ ಮತ್ತು ದೇಶದ 120 ಕೋಟಿ ಜನರನ್ನು ಸಾಕ್ಷರತರನ್ನಾಗಿ ಮಾಡಿ ವೈಜ್ಞಾನಿಕ ಮತ್ತು

ಜಾತ್ಯಾತೀತವಾದಂತಹ ನಿಲುವನ್ನು ಪಡೆದು ಸಮಾಜಕ್ಕೆ ಮತ್ತು ವ್ಯಕ್ತಿಗತವಾಗಿ ದೊಡ್ಡ ಕೊಡುಗೆಯಾಗಿ ಭಾರತ ದೇಶ ಸಶಕ್ತವಾಗಿ ಹೊರಹೊಮ್ಮಲಿ ಎಂದು ಹಾರೈಸಿ ಈ ಒಂದು ಬಿಲ್ ಅನ್ನು ಯಶಸ್ವಿಯಾಗಿ ಜಾರಿ ಮಾಡಬೇಕು. ಯಾವುದರಲ್ಲೂ ಲೋಪ ಆಗದೇ, ತಪ್ಪಾಗದೇ, ಯಾರೂ ನುಣುಚಿ ಕೊಳ್ಳುವುದಕ್ಕೆ ಅವಕಾಶ ಕೊಡಬಾರದೆಂದು ಹೇಳಿ ತಮ್ಮ ಮೂಲಕ ರಾಜ್ಯ ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

ಉಪಾಧ್ಯಕ್ಷರು : ಡಾ: ಮಾಲಕರೆಡ್ಡಿ, ಈ ಬಿಲ್ ಬಗ್ಗೆ ಸಿಗ್ನೇಟರೀಸ್, ಮಾನ್ಯ ಜಯಚಂದ್ರ ಅವರು. ಮಾನ್ಯ ನರೇಂದ್ರ ಬಾಬು ಅವರು. ಮಾನ್ಯ ಮಂತ್ರಿಗಳು ಉತ್ತರ ಕೊಡಿ. ಮಾನ್ಯ ನರೇಂದ್ರ ಬಾಬು ಅವರು ಬಂದರು. ಅವರು ಮಾತನಾಡಲಿ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮೀ ಲೇಔಟ್) : ಸನ್ಮಾನ್ಯ ಉಪಾಧ್ಯಕ್ಷರೆ, ಏನು ಇವತ್ತು RTE ಬಗ್ಗೆ ಬಹಳ ಪ್ರಮುಖವಾದಂತಹ ವಿಚಾರದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ. ಇವತ್ತು ಶಿಕ್ಷಣ ಎನ್ನತಕ್ಕದ್ದು ಸ್ವಾತಂತ್ರ್ಯ ಬಂದ ನಂತರ ಬಹುಶಃ ಹೆಚ್ಚು ಮಹತ್ವವನ್ನು ಪಡೆದಿದೆ. ಎಲ್ಲರಿಗೂ ಸಮಪಾಲು, ಸಮಬಾಳ್ವೆ ಎಂದು ಹೇಳಿ ಏನು ಸಂವಿಧಾನದಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿತು? ಬಹಳಷ್ಟು ಜನ ಇವತ್ತು ತಮ್ಮ ಕುಲಕಸುಬನ್ನು ಹೊರತುಪಡಿಸಿ ವಿದ್ಯೆಯನ್ನು ಕಲಿಯಲಿಕ್ಕೆ ಜನ ಮುಂದೆ ಬರುತ್ತಿದ್ದಾರೆ. ನನಗೆ ಈ ಸಂದರ್ಭದಲ್ಲಿ ನೆನಪಾಗುವುದು ಎಂದರೆ ಶಾಲೆಯಲ್ಲಿ ನಾವು ಕಲಿಯುವಾಗ ಒಂದು ಏಕಲವ್ಯನ ಕಥೆಯನ್ನು ಓದಿದ್ದೆವು. ಬಹುಶಃ ಏಕಲವ್ಯನ ಕಥೆ ಇವತ್ತು ಎಷ್ಟು ಪ್ರಸ್ತುತ? ಬಹುಶಃ ಉಳ್ಳವರಿಗೆ ಶಿಕ್ಷಣ ಅಥವಾ ಉಳ್ಳವರಿಗೇ ಉತ್ತಮವಾದ ಶಿಕ್ಷಣ ಎನ್ನತಕ್ಕದ್ದು ತೊಡೆದು ಹಾಕತಕ್ಕಂತಹ ಇದೊಂದು ಪ್ರಯತ್ನವೆಂದು ಹೇಳಿ ನಾನಾದರೂ ಭಾವಿಸುತ್ತೇನೆ. ತಮ್ಮಲ್ಲಿ ಚೂಡಾರತ್ನ ಒಂದು ಕಡೆ ಹೇಳುತ್ತಾನೆ. "ಮಕ್ಕಳಿಗೆ ತಂದೆ ಬಾಲ್ಯದೊಳ್ ಅಕ್ಕರೆಯ ವಿದ್ಯೆಯಂ ಕಲಿಸದಿರ್ದೊಡೆ ಲಕ್ಕದೊಳಗಿರಲು ಕೆಡಗುಂ ಚೂಡಾರತ್ನ" ಎಂಬ ಮಾತನ್ನು ಹೇಳುತ್ತಾರೆ. ಇವತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಆಗಲೇ ಮಾನ್ಯ ಡಾ: ಮಹದೇವಪ್ಪನವರು ಮಾತನಾಡುತ್ತಾ ಶಿಕ್ಷಣದಲ್ಲಿ ಅಥವಾ ನಮ್ಮ ದೇಶದ ಶಿಕ್ಷಣ ಪದ್ಧತಿಯಲ್ಲಿ ಆಗಿರತಕ್ಕಂತಹ ಕ್ರಾಂತಿಕಾರಕ ಬೆಳವಣಿಗೆಗಳನ್ನು ಉಲ್ಲೇಖ ಮಾಡುತ್ತಾ ಹೋದರು. ಇವತ್ತು

Right to Education ಎನ್ನತಕ್ಕದ್ದು ಅವಕಾಶ ಕೊಟ್ಟಿರತಕ್ಕಂತಹ ಯುಪಿಎ ಸರ್ಕಾರ, ಆ ನಿರ್ಧಾರವನ್ನು ತೆಗೆದುಕೊಂಡು ರಾಜ್ಯ ಸರ್ಕಾರಗಳು ಅನುಷ್ಠಾನ ಮಾಡಲಿಕ್ಕೆ ಒತ್ತಾಯ ತಂದಿದ್ದರೂ ಸಹ ಅಥವಾ mandatory ಕಡ್ಡಾಯ ಮಾಡಬೇಕಾಗಿದ್ದರೂ ಸಹ ನನ್ನ ದೃಷ್ಟಿಯಲ್ಲಿ ಇದು ಯಾರ ಔದಾರ್ಯವೂ ಅಲ್ಲ, ಯಾರ ಕರುಣೆಯೂ ಅಲ್ಲ. ಇದು ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಹುಶಃ ನಾನು ಓದುತ್ತಿದ್ದೆ. ಇತಿಹಾಸವನ್ನು ಮೆಲುಕು ಹಾಕಿ ನೋಡಿದಾಗ ನನಗೆ “Hunter Commission ನಲ್ಲಿ ಉಲ್ಲೇಖ ಮಾಡುತ್ತಾರೆ. ಸ್ವಾತಂತ್ರ ಚಳುವಳಿಯಲ್ಲಿ ಸಹ ಎಲ್ಲ ಮಕ್ಕಳಿಗೂ ಸಹ ಶಿಕ್ಷಣ ಸಿಗಬೇಕು ಎನ್ನತಕ್ಕದ್ದು ನಮ್ಮ ಪೂರ್ವಿಕರ, ನಮ್ಮ ಸ್ವಾತಂತ್ರ್ಯ ಸೇನಾನಿಗಳ ಆಶಯ ಆಗಿತ್ತು. 1872 ರಲ್ಲಿ ಕೈಗಾರಿಕಾ ಕ್ರಾಂತಿ ಆದಾಗಲೂ ಸಹ ನಂತರ ಜ್ಯೋತಿ ಭಾಯ್‌ಫುಲೆ ಅವರು ಬಹುಶಃ upto 4th standard ಉಚಿತ ಶಿಕ್ಷಣ ತರಬೇಕು ಎನ್ನತಕ್ಕ ಒಂದು ಪ್ರಯತ್ನ ಮಾಡುತ್ತಾರೆ, ಒತ್ತಾಯ ಮಾಡುತ್ತಾರೆ ಮತ್ತು ಗಾಂಧೀಜಿಯವರು ಸಹ ಪ್ರಸ್ತಾವನೆ ಮಾಡುತ್ತಾರೆ. ಗೋಪಾಲಕೃಷ್ಣ ಗೋಖಲೆಯವರು 1911ರಲ್ಲಿ ಒಂದು ವೈಕ್ತಿಕ ಮಸೂದೆಯನ್ನು ಮಂಡಿಸುತ್ತಾರೆ. ನಾನು ಸ್ವಾತಂತ್ಯ ಪೂರ್ವದ ವಿಚಾರ ಹೇಳುತ್ತಿರುವುದು. ಆಗ ಸುಮಾರು 1100 ಜನ ಮಹಾರಾಜರುಗಳು, ಸಣ್ಣ ಪುಟ್ಟ ರಾಜರುಗಳು ಅದನ್ನು ವಿರೋಧ ಮಾಡುತ್ತಾರೆ. ಅದರ ನೇತೃತ್ವ ವಹಿಸುವುದು ದರ್ಭಾಂಗ್ ನ ಮಹಾರಾಜ. ಅವರು ಅದರ ನೇತೃತ್ವ ವಹಿಸಿ ಎಲ್ಲರಿಗೂ ವಿದ್ಯೆ ಕೊಟ್ಟು ಬಿಟ್ಟರೆ ನಮ್ಮ ತೋಟಗಳಲ್ಲಿ, ಗದ್ದೆಗಳಲ್ಲಿ ಕೆಲಸ ಮಾಡುವವರು ಯಾರು? ಶಿಕ್ಷಣ ಎನ್ನತಕ್ಕದ್ದು ಕಡ್ಡಾಯ ಮಾಡುವುದು ಸರಿಯಲ್ಲ ಎನ್ನತಕ್ಕದ್ದನ್ನು ವಿರೋಧ ಮಾಡುತ್ತಾರೆ. ನಾನು ಏಕೆ ಇದನ್ನು ಉಲ್ಲೇಖ ಮಾಡುತ್ತೇನೆ? ಉದಾಹರಣೆ ಕೊಡುತ್ತೇನೆ ಎಂದು ಹೇಳಿದರೆ ಬಹುಶಃ ಶಿಕ್ಷಣ ಎಲ್ಲರಿಗೂ ಬೇಕು ಎನ್ನತಕ್ಕ ಹೋರಾಟದ ಹಿಂದೆ ತ್ಯಾಗ ಇದೆ, ಬಲಿದಾನ ಇದೆ, ಮಹತ್ವಾಕಾಂಕ್ಷೆ ಇದೆ. ಇವತ್ತು ಒಬಾಮಾರವರೂ ಸಹ ಬೆಂಗಳೂರಿನ ಮಕ್ಕಳು ಇರಬಹುದು ಅಥವಾ ಭಾರತ ದೇಶದ ಮಕ್ಕಳ ಶಿಕ್ಷಣದ ಬಗ್ಗೆ ಗಾಬರಿ ಆಗುತ್ತಾರೆ. ಇವತ್ತು ಉನ್ನತ ಶಿಕ್ಷಣ ಪಡೆದಿರತಕ್ಕಂತಹ ಐ.ಟಿ. ಇರಬಹುದು, ಬಿ.ಟಿ. ಇರಬಹುದು ಅಥವಾ ಶಿಕ್ಷಣದಲ್ಲಿ ಪಾಂಡಿತ್ಯವನ್ನು ಪಡೆದಿರತಕ್ಕಂತಹ ಮಕ್ಕಳು ಇರಬಹುದು. ಇವತ್ತು Indian Institute of Science ನಿಂದ ಹೊರಗಡೆ ಬರತಕ್ಕಂತಹ ವಿದ್ಯಾರ್ಥಿಗಳ ಜ್ಞಾನಾರ್ಜನೆ ಬಗ್ಗೆ

ಇಡೀ ವಿಶ್ವವೇ ಬೆಕ್ಕಸ ಬೆರಗಾಗುತ್ತದೆ ಮತ್ತು ನಾವು ಹೆಮ್ಮೆ ಪಡುತ್ತೇವೆ. ಇವತ್ತು ಉನ್ನತ ಶಿಕ್ಷಣದಲ್ಲಿ ಹಲವಾರು ಸುಧಾರಣೆಗಳು ಆಗಿವೆ. ಆದರೆ ಪ್ರಾಥಮಿಕ ಶಿಕ್ಷಣ 6 ವರ್ಷದಿಂದ 14 ವರ್ಷದವರೆಗೂ ಕಡ್ಡಾಯವಾಗಿ ಶಿಕ್ಷಣವನ್ನು ಉಚಿತವಾಗಿ ಕೊಡಬೇಕು. ಅದರ ಜವಾಬ್ದಾರಿ ಇವತ್ತು ನಮ್ಮೆಲ್ಲರದ್ದೂ ಆಗಿದೆ ಎನ್ನತಕ್ಕದ್ದನ್ನು ನಾನು ಉಲ್ಲೇಖ ಮಾಡುತ್ತೇನೆ. ಬಹುಶಃ ನಾನು ನೋಡುತ್ತಿದ್ದೆ Article 51- Fundamental Duties ನಲ್ಲಿ 51(K) ನಲ್ಲಿ ಹೇಳುತ್ತಾರೆ. ..who is a parent or guardian to provide opportunities for education to his child or as the case may be, between the age of 6 & 14 ಇದು ನಮಗೆ ನಿಜವಾಗಲೂ ಒಂದು ವರ. ನಾನೂ ಸಹ ಸರ್ಕಾರಿ ಶಾಲೆಯಲ್ಲಿ ಕಲಿತಂಥ ವಿದ್ಯಾರ್ಥಿ. ನಾನೂ ಸಹ 9ನೇ ತರಗತಿಯವರೆಗೆ ಸರ್ಕಾರಿ ಶಾಲೆಯಲ್ಲಿ ಕಲಿತಂಥವನು. 9ರ ನಂತರ ನಾನು ಖಾಸಗಿ ಶಾಲೆಯಲ್ಲಿ ಕಲಿತಂಥವನು. ಇವತ್ತು ಶಿಕ್ಷಣ ಎನ್ನತಕ್ಕಂತಹದ್ದು ಎಲ್ಲರೂ ಸಹ ನಿಜವಾಗಲೂ ಹೇಳಬೇಕು ಎಂದರೆ ಒಂದು ರೀತಿ ಶಿಕ್ಷಣವನ್ನು ಕೊಡಬೇಕು ಎಂಬ ಅಭಿಪ್ರಾಯ ಉಳ್ಳವರು. ಇವತ್ತು ಸಹ ಬೆಂಗಳೂರು ನಗರದಲ್ಲಿ ಮಾರ್ಕೆಟ್‌ನಲ್ಲಿ L.N.Charities ಎಂದು ಇದೆ. ಮಲ್ಲೇಶ್ವರಂನಲ್ಲಿದೆ. ಬಹಳಷ್ಟು ಜನ ಖಾಸಗಿಯಲ್ಲಿ ಒಳ್ಳೊಳ್ಳೆಯ ವಿದ್ಯೆ ಕೊಡುವುದಕ್ಕೋಸ್ಕರ ನಿಜವಾಗಲೂ ಹಿಂದೆ ಎಷ್ಟೆಷ್ಟು ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಾಯಿತು. ನಾನು ಬೆಳಗಾಂಗೆ ಹೋದಾಗ KLE Society ನಲ್ಲಿ ಎಕರೆಗಟ್ಟಲೆ ಜಮೀನುಗಳು, ಎಷ್ಟೆಷ್ಟು ದಾನಶೂರರು, ದಾನಿಗಳು ಇದ್ದರು ಎಂದು ಹೇಳಿ ನಾನು ಆ KLE ಸಂಸ್ಥೆಗೆ ಹೋದಾಗ ಶಿಕ್ಷಣಕ್ಕೋಸ್ಕರ ಎಷ್ಟು ಮಹತ್ವವನ್ನು ಕೊಟ್ಟರು ಎಂದು ಗೊತ್ತಾಯಿತು. ಎಷ್ಟೆಷ್ಟೋ ಜನ ಆಸ್ತಿಗಳನ್ನೇ ಬರೆದು ಕೊಟ್ಟಿದ್ದಾರೆ. ಆದರೆ ಇವತ್ತು ಬಹಳ ದುರಂತ ಎಂದರೆ ಶಿಕ್ಷಣ ವ್ಯಾಪಾರೀಕರಣ ಆಗುತ್ತಾ ಇರತಕ್ಕದ್ದು. ಅಂದರೆ ವ್ಯಾಪಾರೀಕರಣ ತಪ್ಪು ಎಂದು ಹೇಳುತ್ತಿಲ್ಲ. ಪ್ರಾಥಮಿಕ ಶಿಕ್ಷಣವೂ ಸಹ ಇವತ್ತು ವ್ಯಾಪಾರೀಕರಣ ಆಗುತ್ತಿರುವ ಬಗ್ಗೆ ನಾವು Right to Education ಅನ್ನುಬಳಸುವ ದಿಕ್ಕಿನಲ್ಲಿ ಯಶಸ್ವಿಯಾಗುವುದು ಬಹಳ ಅವಶ್ಯಕವಾಗಿ ಬೇಕಾಗಿದೆ. ನಾನು ಯೋಚನೆ ಮಾಡುತ್ತಿದ್ದೆ. ನನ್ನ ಮಗ ಒಂದನೇ ತರಗತಿಗೆ ಹೋಗಬೇಕಾದರೆ ಬಹುಶಃ Pre-Nursery, LKG, UKG ಗೆ ಹೋಗಿ ಒಂದನೇ ಕ್ಲಾಸಿಗೆ ಹೋಗುತ್ತಾನೆ. ಒಂದನೇ ಕ್ಲಾಸಿಗೆ ಹೋಗುವಾಗ ಒಂದು

ಕರ್ಸಿವ್ ರೈಟಿಂಗ್‌ವರೆಗೂ ಕಲಿತಿರುತ್ತಾನೆ. Education Task Force (ಶಿಕ್ಷಣ ಕಾರ್ಯಪಡೆ) ಎಂದು ಹೇಳಿ ನನ್ನ ಕ್ಷೇತ್ರದಲ್ಲಿ ಸುಮಾರು 15 ವರ್ಷಗಳಿಂದ ಹೇಗೆ how to upgrade, how to strengthen the teaching technique, learning technique in private and Corporation schools ಎಂದು ಹೇಳಿ ನಾವೊಂದು ಪ್ರಯೋಗ ಮಾಡಿ ನೋಡಿದೆವು. ಬಹುಶಃ ನಮ್ಮಲ್ಲಿ ಮಕ್ಕಳದ್ದು ಏನೂ ತಪ್ಪಿಲ್ಲ. ವ್ಯವಸ್ಥೆಯಲ್ಲಿ ತಪ್ಪು ಮತ್ತು ಶಿಕ್ಷಣವನ್ನು ವ್ಯಾಪಾರೀಕರಣ ಮಾಡುತ್ತಿರತಕ್ಕದ್ದರ ಬಗ್ಗೆ ಕಟ್ಟೆಚ್ಚರವನ್ನು ವಹಿಸತಕ್ಕ ಅಗತ್ಯ ಇದೆ ಎಂದು ಹೇಳಿ ನಾನು ಭಾವಿಸುತ್ತೇನೆ. ನಿಜವಾಗಲೂ ನಾವು Right to Education ಸರಿಯಾಗಿ ಬಳಸಬೇಕು. ಅವರೇನೂ ಉಚಿತವಾಗಿ ಕೊಡುವುದಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪರ್ಯಾಯವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ 70:30 ಅನುಪಾತದಲ್ಲಿ ಒಂದು ವಿದ್ಯಾರ್ಥಿಗೆ ಇಷ್ಟು ಎಂದು ಹೇಳಿ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ಈ ಶಿಕ್ಷಣ ಸಂಸ್ಥೆಗಳು ಬಹುಶಃ ಅವರು ಮಾಡುತ್ತಿರತಕ್ಕಂತಹ fees slab ಗಳು. ಅವರು ಮಾಡುತ್ತಿರತಕ್ಕಂತಹ slab ಗಳನ್ನು ನೀವು ನಂಬುತ್ತೀರೋ ಇಲ್ಲವೋ? LKG ಗೆ Pre-Nursery ಗೆ 35 ರಿಂದ 40 ಸಾವಿರ ರೂಪಾಯಿ ಒಂದು ಮಗುವಿಗೆ ಖಾಸಗಿ ಸಂಸ್ಥೆಯಲ್ಲಿ ಕಟ್ಟಬೇಕಾಗಿದೆ. ಇವತ್ತು ಎಲ್.ಕೆ.ಜಿ.ಗೆ ಎಷ್ಟು ಕಟ್ಟುತ್ತಾರೆ? ಒಂದು ಶಾಲೆಗೆ ಒಂದು ಲಕ್ಷ ರೂಪಾಯಿ ವರ್ಷಕ್ಕೆ ಕಟ್ಟಬೇಕು. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಲಕ್ಷ ರೂಪಾಯಿ ಕಟ್ಟಬೇಕು ಮತ್ತು ಒಂದನೇ ಕ್ಲಾಸಿನಿಂದ 9ನೇ ಕ್ಲಾಸ್‌ವರೆಗೂ ಬಹುಶಃ monthly fees structure ಕೇಳಿದರೆ ನಮಗೆ ನಿಜವಾಗಲೂ ಭಯ ಆಗುತ್ತದೆ ನಾನು ಖಂಡಿತವಾಗಿ ಹೇಳುತ್ತೇನೆ ಪ್ರಾಮಾಣಿಕವಾಗಿ ದುಡಿಯತಕ್ಕಂಥವರು ಇಷ್ಟೊಂದು ಶುಲ್ಕ ಕಟ್ಟಲು ಕಷ್ಟವಾಗುತ್ತದೆ. ಯಾರೋ ವ್ಯಾಪಾರ ಮನೋಭಾವದವರು, ವ್ಯಾಪಾರಿಗಳು ಅಥವಾ ಹಣ ಅನಾಯಾಸವಾಗಿ ಬರತಕ್ಕವರು ಮಾತ್ರ ಅಂತಹ ಮಕ್ಕಳಿಗೆ ಅಂತಹ ಶಿಕ್ಷಣವನ್ನು ಕೊಡಲಿಕ್ಕೆ ಸಾಧ್ಯ ಆಗುತ್ತದೆ. ಬಹುಶಃ ಈ Right to Education ಎಂದರೆ ಕೇವಲ 25% ಮೀಸಲಾತಿ ಕೊಡತಕ್ಕದ್ದು ಮಾತ್ರ ಅಲ್ಲ. ಅದರ ಆಶಯ, ಅದರ ಉದ್ದೇಶ, ಅದರ ದೂರದೃಷ್ಟಿ ಇರತಕ್ಕದ್ದು. ಶಿಕ್ಷಣ ಸಂಸ್ಥೆಯಲ್ಲಿರತಕ್ಕಂತಹ ಶಿಕ್ಷಕರು ಇರಬಹುದು. ಬಹುಶಃ ಎಷ್ಟು ಜನ ಶಿಕ್ಷಕರಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

ಸರ್ಕಾರಿ ಸಂಬಳ ಕೊಡುತ್ತಿದ್ದಾರೆಂದು ಪ್ರಶ್ನೆ ಹಾಕಿಕೊಂಡರೆ ಇಡೀ ವ್ಯವಸ್ಥೆಯನ್ನು ನೋಡಿ ನಾವು ತಲೆತಗ್ಗಿಸಬೇಕಾಗುತ್ತದೆ. ಯಾವ ರೀತಿಯಾಗಿ 5 ಸಾವಿರ, 6 ಸಾವಿರ ರೂಪಾಯಿ ಸಂಬಳ ಕೊಟ್ಟು, ಇವರನ್ನು ಯಾವ ರೀತಿ 24 ಗಂಟೆಯಲ್ಲಿ 10 ರಿಂದ 15 ಗಂಟೆ ಟೈಮ್ ದುಡಿಸಿಕೊಳ್ಳುತ್ತಾರೆ ಎನ್ನುವುದನ್ನೂ ನೋಡುತ್ತಿದ್ದೇವೆ. ಇವತ್ತು Right to Education ನಲ್ಲಿ infrastructure ಇರಬಹುದು, toilet facilities ಇರಬಹುದು. ಕುಡಿಯುವ ನೀರಿನ ವ್ಯವಸ್ಥೆ ಇರಬಹುದು. ಬೇಕಾಗಿರತಕ್ಕಂತಹ ಎಲ್ಲಾ ಮೂಲಭೂತ ಸೌಕರ್ಯಗಳನ್ನು mandatory ಯಾಗಿ ಕೊಡತಕ್ಕಂತಹದ್ದು ಮತ್ತು ಮಕ್ಕಳಿಗೆ ಬಹಳ ಹತ್ತಿರವಾಗಿ ಐದನೇ ಕ್ಲಾಸ್‌ನವರು ಇಷ್ಟು ಡಿಸ್ಟೆನ್ಸ್‌ನಲ್ಲಿರಬೇಕು, ಎಂಟನೇ ಕ್ಲಾಸ್‌ನವರು ಇಷ್ಟು ಡಿಸ್ಟೆನ್ಸ್‌ನಲ್ಲಿರಬೇಕು, ಇಷ್ಟು ವ್ಯಾಪ್ತಿಯಲ್ಲಿದ್ದಾಗ ಮಾತ್ರ ಈ ಶಿಕ್ಷಣವನ್ನು ಕೊಡಲಿಕ್ಕೆ, ಉತ್ತಮವಾದ ವ್ಯವಸ್ಥೆ ಕೊಡಲಿಕ್ಕೆ ಸಾಧ್ಯ ಎನ್ನತಕ್ಕದ್ದು ಖಂಡಿತವಾಗಲೂ ಆ ವ್ಯವಸ್ಥೆ ಇದೆ. ಇವತ್ತು Article 21 ರಲ್ಲಿ ಜೀವಿಸುವ ಹಕ್ಕು ಅಥವಾ ಮೂಲಭೂತವಾದ ಹಕ್ಕು ಅಥವಾ ನಿರ್ದೇಶಿತ ತತ್ವಗಳು ಎನ್ನತಕ್ಕದ್ದನ್ನು ನಾವು ತಿಳಿದುಕೊಂಡಿದ್ದೇವೆ. ಕೇವಲ ಜೀವಿಸುವ ಹಕ್ಕಲ್ಲ. ಘನತೆಯಿಂದ ಜೀವಿಸತಕ್ಕ ಹಕ್ಕು, ಗೌರವದಿಂದ ಜೀವಿಸತಕ್ಕಂತಹದ್ದು. ಇವತ್ತು ಶಿಕ್ಷಣದ ಹಕ್ಕಿನ ಜೊತೆಯಲ್ಲಿ ಬದುಕುವ ಹಕ್ಕಿನ ಜೊತೆಯಲ್ಲಿ ಶಿಕ್ಷಣ ಹಕ್ಕನ್ನೂ ಕೊಡತಕ್ಕಂತಹ ಜವಾಬ್ದಾರಿಯಿಂದ ಕೇಂದ್ರ ಸರ್ಕಾರ ಬಹುಶಃ ಇದನ್ನು ತರಬೇಕಾದರೆ ಎಷ್ಟು ವಿರೋಧ ಇತ್ತು? ಖಾಸಗಿ ಶಿಕ್ಷಣ ಸಂಸ್ಥೆಗಳವರು ಸುಪ್ರೀಂ ಕೋರ್ಟ್‌ವರೆಗೂ ಹೋದರು. ಅಲ್ಲಿ ಹೇಳಾದ ಮೇಲೆ ಬಹುಶಃ ಇದನ್ನು ತರಾತುರಿಯಲ್ಲಿ ರಾಜ್ಯ ಸರ್ಕಾರ ಮಾಡಲಿಕ್ಕೆ ಪ್ರಯತ್ನ ಮಾಡಿತು. ನಾನು ಕೇಳಿ ನೋಡಿದೆ, ಏಕೆ ಈ ಗೊಂದಲ ನಾನು ಖಂಡಿತವಾಗಿಯೂ ಈ ಬಗ್ಗೆ ಗಮನ ಹರಿಸಿದ್ದೇನೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಶಿಕ್ಷಣ ಸಂಸ್ಥೆಗಳು ಬರುತ್ತವೆ, ನನ್ನ ಹಳೆಯ ಕ್ಷೇತ್ರ ಮತ್ತು ಈಗಿನ ಕ್ಷೇತ್ರದಲ್ಲಿ ಎಷ್ಟು applications ಬಂದವು? ಅದರಲ್ಲಿ ಎಷ್ಟು ಸೀಟು ಕೊಟ್ಟರು? ಅದರಲ್ಲಿ ಎಷ್ಟು reservation ಸಿಕ್ಕಿತು ಎನ್ನುವುದನ್ನು monitor ಮಾಡಲಿಕ್ಕೆ ನನ್ನ ಸ್ನೇಹಿತರೊಬ್ಬರ ಸಹಾಯದಿಂದ task-force ಮುಖೇನ ಕೂಟವೊಂದನ್ನು ಮಾಡಿದ್ದೇನೆ. ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಬಹುಶಃ ನಮ್ಮಲ್ಲಿದ್ದಂತೆ ಅವರಲ್ಲೂ ಗೊಂದಲವಿದೆ. ಕೆಲವರು ನವೆಂಬರ್‌ನಲ್ಲೇ admissions ಮಾಡಿ ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಕೆಲವರು

ಮೊದಲೇ applications ಕೊಟ್ಟು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ನಿಮಗೆ ಗೊತ್ತು, ಕೆಲವೊಂದು ಶಿಕ್ಷಣ ಸಂಸ್ಥೆಗಳಲ್ಲಿ application ತೆಗೆದುಕೊಳ್ಳುವುದಕ್ಕೆ ಹಿಂದಿನ ದಿವಸ ರಾತ್ರಿ Cricket Match ಗೆ ticket ತೆಗೆದುಕೊಳ್ಳುವುದಕ್ಕೆ ಅಥವಾ Cinema ticket ತೆಗೆದುಕೊಳ್ಳುವುದಕ್ಕೆ ನಿಂತುಕೊಂಡಂತೆ ಹೋಗಿ ಜನ ನಿಂತುಕೊಳ್ಳಬೇಕು, ಇಂತಹ ವ್ಯವಸ್ಥೆ ಇದೆ. ಪಕ್ಕದಲ್ಲೇ ಮನೆ ಇರುತ್ತದೆ. ಆ ಶಾಲೆಯಲ್ಲಿ ಮಕ್ಕಳಿಗೆ admissions ಸಿಗುವುದಿಲ್ಲ. ಇಂತಹ ಅನುಭವ ಬಹುಶಃ ಮಂತ್ರಿಗಳಿಗೆ ಆಗಿರಬಹುದು, ಪತ್ರಿಕಾ ಸ್ನೇಹಿತರಿಗೆ ಆಗಿರಬಹುದು. ಇಂತಹ ಅನುಭವ ಬೆಂಗಳೂರು ನಗರ ಇರಬಹುದು ಅಥವಾ ಮೈಸೂರು ನಗರ ಇರಬಹುದು, ಎಲ್ಲಾ ಕಡೆಗೂ ಆಗಿದೆ. ಈಗ ಅದು ನೆಲಮಂಗಲಕ್ಕೂ ವ್ಯಾಪಿಸಿಬಿಟ್ಟಿದೆ. ನಾನು ನೋಡಿದ್ದೇನೆ. ನೆಲಮಂಗಲದಲ್ಲಿ ಇತ್ತೀಚೆಗೆ ಒಳ್ಳೊಳ್ಳೆಯ ಶಾಲೆಗಳು ಬಂದಿವೆ. ಅಲ್ಲೂ ಬೆಂಗಳೂರಿನಲ್ಲಿಯ ಪರಿಸ್ಥಿತಿಯೇ ಇದೆ. ಪಕ್ಕದಲ್ಲೇ ಇರುವ ಶಾಲೆಗಳಿಗೆ ಸೇರಿಸಬೇಕೆಂದರೆ ಅದಕ್ಕೆ 20 ಶಿಫಾರಸ್ಸುಗಳನ್ನು ಮಾಡಬೇಕು. ಪಕ್ಕದಲ್ಲೇ ಮನೆ ಇರುತ್ತದೆ. ಈ ಶಿಕ್ಷಣದ ಮೂಲಭೂತ ಹಕ್ಕನ್ನು ಕಡ್ಡಾಯವಾಗಿ ಮಾಡುವುದರ ಜೊತೆಗೆ, ಇವತ್ತು ಆ ಮಕ್ಕಳಿಗೆ ಬೇಕಾಗಿರತಕ್ಕಂಥ ಮತ್ತು ಆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಕೊಟ್ಟಂತಹ ಮಕ್ಕಳಿಗೆ gap ಅನ್ನು fill up ಮಾಡತಕ್ಕಂಥ ಕೆಲಸ ಆಗಬೇಕಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ನಾನು ಆಗಲೇ ಉದಾಹರಣೆ ಕೊಟ್ಟೆ. ನಮ್ಮ ಮತ್ತು ನಿಮ್ಮ ಮಕ್ಕಳು First Standard ಗೆ ಬರಬೇಕಾದರೆ ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ನಾನು consult ಮಾಡಿದೆ. ನಿಮ್ಮ ಕೊರತೆಯೇನು? ನೀವು ಕೊಡಲಿಕ್ಕೆ ಏಕೆ ಹಿಂಜರಿಯುತ್ತೀರಿ? ಎಂದೆ. ಇಲ್ಲ, ಆ ಮಕ್ಕಳಿಗೂ, ಈ ಮಕ್ಕಳಿಗೂ gap ಇದೆ ಎಂದರು. ನಾನು ಹೇಳಿದ ಹಾಗೆ, ಆ ಮಕ್ಕಳು ಬಾಲವಾಡಿ stage ನಿಂದ ಒಂದನೇ ಕ್ಲಾಸ್‌ಗೆ ಬರುತ್ತಾರೆ, ಅಂಗನವಾಡಿ stage ನಿಂದ ಒಂದನೇ ಕ್ಲಾಸ್ ಗೆ ಬರುತ್ತಾರೆ. ಆ ಮಕ್ಕಳಿಗೆ ಅಕ್ಷರ, ಕಾಗುಣಿತ, Tables ಇವೆಲ್ಲಾ ಕಲಿಸುವುದು ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಬಹುಶಃ ಆ gap ಅನ್ನು fill up ಮಾಡಬೇಕೆಂದರೆ, ಎಲ್ಲೆಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿವೆಯೋ ಅಲ್ಲಿ ಶಿಶುವಿಹಾರಗಳನ್ನು supplement ಮಾಡಬೇಕು. ನಾನೂ ಶಿಶುವಿಹಾರದಲ್ಲೇ ಕಲಿತವನು, ನನಗೆ ಇನ್ನೂ ಚೆನ್ನಾಗಿ ಜ್ಞಾಪಕವಿದೆ.

ಶಿಶುವಿಹಾರ ಎನ್ನತಕ್ಕಂಥ concept ಇವತ್ತು ಹೋಗಿಬಿಟ್ಟಿದೆ. ಈಗ ಅಂಗನವಾಡಿಗಳು ಎಂದಾಗಿವೆ. ಆ ಶಿಶುವಿಹಾರಗಳನ್ನು ಮತ್ತೆ ತರತಕ್ಕಂಥ ಪ್ರಯತ್ನ ಆಗಬೇಕು. ಇಲ್ಲದಿದ್ದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ. There will be wide gap. As it is ನಮ್ಮ ಬೆಂಗಳೂರು ನಗರದಲ್ಲೇ State syllabus, Central syllabus, ICSE syllabus, International syllabus, ಏನು ಸ್ವಾಮಿ ಇದು? ಎಷ್ಟು ವರ್ಗದ ಮಕ್ಕಳನ್ನು ನಾವು ಸೃಷ್ಟಿ ಮಾಡಲಿಕ್ಕೆ ಹೊರಟಿದ್ದೇವೆ ಎನ್ನುವುದನ್ನು ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ನಾಳೆ ದಿವಸ ಆ ಮಕ್ಕಳು ಏನಾಗುತ್ತಾರೆ? ನಾಳೆ ದಿವಸ ಆ ಮಕ್ಕಳ ಪರಿಸ್ಥಿತಿಯೇನು? ಇದರಲ್ಲಿ ಸಮಾನ ಹಕ್ಕನ್ನು ತರಬೇಕು ಎನ್ನತಕ್ಕಂಥ ಪ್ರಯತ್ನದ ನಿಟ್ಟಿನಲ್ಲಿ 1986ರಲ್ಲೇ ಸಮಾನ ಶಿಕ್ಷಣ ಮತ್ತು ಗುಣಮಟ್ಟದ ಶಿಕ್ಷಣದ ಬಗ್ಗೆ ಮಾನ್ಯ ರಾಜೀವ್ ಗಾಂಧಿಯವರು ಪಾರ್ಲಿಮೆಂಟ್‌ನಲ್ಲಿ ಮಾತನಾಡಿದ್ದಾರೆ. ನಾನು ಇದನ್ನು ಏಕೆ ಉಲ್ಲೇಖ ಮಾಡುತ್ತೇನೆ ಎಂದರೆ, ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಅನಿವಾರ್ಯ. ಇವತ್ತು ಸಿದ್ಧಗಂಗಾ ಮಠ ಇರಬಹುದು, ಬಾಲಗಂಗಾಧರ ನಾಥ ಸ್ವಾಮಿಯವರ ಶಿಕ್ಷಣ ಸಂಸ್ಥೆಗಳು ಇರಬಹುದು, ಹಲವರು ಮಠ ಮಾನ್ಯಗಳು ಇವತ್ತೂ ಸಹ ಉಚಿತವಾಗಿ ಶಿಕ್ಷಣ ಕೊಡತಕ್ಕ ದಿಕ್ಕಿನಲ್ಲಿ ಕೆಲಸ ಮಾಡುತ್ತಿವೆ. ಆದರೆ ಕೆಲವರು education ಅನ್ನು ವ್ಯಾಪಾರ ಮಾಡಿಕೊಂಡಿದ್ದಾರೆ. ನಾನು ನಿಮಗೊಂದು ಉದಹರಣೆ ಕೊಡುತ್ತೇನೆ. ನಾನು ಒಬ್ಬರಿಗೆ ಶಿಫಾರಸ್ಸು ಮಾಡಿ PU College ಗೆ admission ಗೆ ಕಳುಹಿಸಿದೆ. ಬಹುಶಃ ಎಷ್ಟು donation ತೆಗೆದುಕೊಂಡಿರಬಹುದು? ನಾನು ಹೇಳುವುದೇನೆಂದರೆ, ಮಲ್ಲೇಶ್ವರಂನ ಶಿಕ್ಷಣ ಸಂಸ್ಥೆಯೊಂದು 60 ಸಾವಿರ ರೂ. ಗಳ donation ತೆಗೆದುಕೊಂಡಿದ್ದಾರೆ. ಅದರ ಹೆಸರನ್ನು ನಾನಿಲ್ಲಿ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನೀವು ಕೇಳಿದರೆ ಬೇಕಾದರೆ ಆಮೇಲೆ ನಾನು ಬಂದು ಹೇಳುತ್ತೇನೆ. 60 ಸಾವಿರ ರೂ. ಗಳನ್ನು ಅವರು ತೆಗೆದುಕೊಂಡಿದ್ದಾರೆ. PUC admission ಗೆ 2 ಲಕ್ಷ ರೂ.ಗಳ ವರೆಗೂ ತೆಗೆದುಕೊಳ್ಳುವಂತಹ ಶಿಕ್ಷಣ ಸಂಸ್ಥೆಗಳಿವೆ. ಏನಾಗಿದೆ ಇವರಿಗೆ? ಅದೇ ಮಕ್ಕಳಿಂದ, ಅದೇ ಪೋಷಕರಿಂದ, civic amenities site ತೆಗೆದುಕೊಂಡು, ಸಂಪೂರ್ಣವಾಗಿ ಕಟ್ಟಿ, ಇವತ್ತು ವ್ಯಾಪಾರ ಮಾಡಿ, ಬೆಂಗಳೂರು–ಮೈಸೂರು ರೋಡ್‌ನಲ್ಲಿ ಆಸ್ತಿ ಮಾಡುವುದಕ್ಕೆ, ನೆಲಮಂಗಲ–ತುಮಕೂರು ರೋಡ್‌ನಲ್ಲಿ

ಆಸ್ತಿ ಮಾಡುವುದಕ್ಕೆ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ. ದಯವಿಟ್ಟು ಈ Right to Education ಅನ್ನತಕ್ಕಂಥದ್ದು, ಕೇವಲ ಮುಂದಿನ ದಿನಗಳಲ್ಲಿ 14 ವರ್ಷದಿಂದ upto PUC ವಿಸ್ತರಿಸುವಂಥದ್ದು ಆಗಬೇಕು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಇದರಿಂದ ಬಹುಶಃ ಹೇಳುತ್ತೇನೆ. ಜನ ಸಾಮಾನ್ಯರೂ ಸಹಾ ಶಿಕ್ಷಣದಲ್ಲಿ ಉನ್ನತ, ಉತ್ತಮವಾದ ವ್ಯವಸ್ಥೆಯಲ್ಲಿ ಕಲಿಯಲಿಕ್ಕೆ ಸಾಧ್ಯ? ನಮ್ಮ area ದಲ್ಲಿ ಎಲ್ಲಾ ಖಾಸಗಿ ಶಾಲೆಗಳೂ civic amenities sites ತೆಗೆದುಕೊಂಡಿವೆ. ಮಹಾಲಕ್ಷ್ಮೀ ಲೇಔಟ್‌ನಲ್ಲಿ ಕ್ಲಬ್ ವೊಂದಿದೆ, ಆ ಕ್ಲಬ್‌ನ ಪಕ್ಕದಲ್ಲೇ ಸರ್ಕಾರಿ ಶಾಲೆಗೆಂದು ಜಾಗವೊಂದನ್ನು ಬಿಟ್ಟಿದ್ದರು. ಸನ್ಮಾನ್ಯ ಶಿಕ್ಷಣ ಸಚಿವರಿಲ್ಲ, ಅವರಿಗೆ ಹಲವಾರು ಸಾರಿ ಈ ಬಗ್ಗೆ ಹೇಳಿದ್ದೇನೆ. ಅವರಿಗೆ ಚೆನ್ನಾಗಿ ಗೊತ್ತಿದೆ. ನಾನು ಬಹಳ ಹೋರಾಟ ಮಾಡಿ, ಹುಡುಕಿದೆ. ಮಹಾಲಕ್ಷ್ಮೀ ಲೇಔಟ್‌ನಲ್ಲಿ Government School ಕಳೆದ 35 ವರ್ಷಗಳಿಂದ ನಡೆಯುತ್ತಿದೆ. ಆ ಸ್ಕೂಲ್ ಆನೇಕಲ್ ಶಾರದ ಎಂಬ ಒಬ್ಬ retired teacher ಮನೆಯಲ್ಲಿ ನಡೆಯುತ್ತಿದೆ. ಅಲ್ಲಿ 300 ಮಕ್ಕಳಿದ್ದರೆ ಸ್ವಾಮಿ. ಆ 300 ಮಕ್ಕಳು ಆ ಮನೆಯ Bedroom and Drawing room ನಲ್ಲೇ ಓದುತ್ತಿದ್ದಾರೆ. ನಾನು ಅದನ್ನು ನೋಡಿ, ಯೋಚನೆ ಮಾಡಿ, ಮಾನ್ಯ ಸುರೇಶ್ ಕುಮಾರ್‌ರವರೂ ಅಲ್ಲಿ ಶಾಸಕರಾಗಿದ್ದರು, ನಾನಾದರೂ ಶಾಸಕನಾದ ಮೇಲೆ ಅದಕ್ಕೊಂದು ನೆಲೆಗಟ್ಟು ಒದಗಿಸ ಬೇಕೆಂದು, ಕೊನೆಗೆ ಇಡೀ area map ಹುಡುಕಿದೆ. ಅಲ್ಲಿ ಸರ್ಕಾರಿ ಶಾಲೆಗೆಂದು ಕ್ಲಬ್ ಪಕ್ಕದಲ್ಲಿ ಸುಮಾರು ಕಾಲು ಎಕರೆ ಜಮೀನು ಬಿಟ್ಟಿದ್ದರು. ಅಲ್ಲಿ ಹೋಗಿ ನೋಡಿದೆ, ಅದು ಖಾಲಿ ಇತ್ತು. ಅಲ್ಲಿ ಒಂದೇ ಒಂದು typewriting institute ಇತ್ತು. ನಾನು ಯೋಚನೆ ಮಾಡಿದೆ, ಇಲ್ಲಿ typewriting institute ಗೆ ಕೊಟ್ಟಿದ್ದಾರೆ, ಆದರೆ ಇಲ್ಲಿ ನಮ್ಮ ಸರ್ಕಾರಿ ಶಾಲೆ Private building ನಲ್ಲಿ ನಡೆಯುತ್ತಿದೆ ಎಂದು ಯೋಚನೆ ಮಾಡಿದೆ. ಕೊನೆಗೆ ಏನು ಮಾಡಿದೆ ಎಂದರೆ, CITB ಯ map ಎಲ್ಲಾ ತರಿಸಿ, ನಾನು ಯಾವುದೇ ಕಾರಣಕ್ಕೂ ಇದನ್ನು further renewal ಮಾಡಬೇಡಿ ಎಂದೆ. ಒಬ್ಬ ರಾಷ್ಟ್ರ ಪ್ರಶಸ್ತಿ ಪಡೆದ ಮೇಷ್ಟ್ರಿಗೆ ಅದು ಅಲಾಟ್ ಆಗಿತ್ತು. ನಾನು ಇದನ್ನು ಏನಾದರೂ ಮಾಡಿ, ಸರ್ಕಾರಿ ಶಾಲೆಗೆ ಕೊಟ್ಟುಬಿಡಿ ಎಂದೆ. ಈಗ ಎಷ್ಟು ಜಾಗದಲ್ಲಿ typewriting institute ನಡೆಯುತ್ತಿದೆಯೋ, ಅಷ್ಟು ಅಗಲ ಜಾಗ ಬಿಟ್ಟು, ಇನ್ನು ಮಿಕ್ಕಿದ್ದನ್ನು ನಮ್ಮ ಸರ್ಕಾರಿ ಶಾಲೆಗೆ

ಕೊಡಿ ಎಂದೆ. 25 ಲಕ್ಷ ರೂ.ಗಳನ್ನು Education Department ನಿಂದ ಹಣ ಬಿಡುಗಡೆ ಮಾಡಿಸಿ, ಕಟ್ಟಿಸಿದೆವು. ಕಟ್ಟಿಸಿದ ಮೇಲೆ, ಅದನ್ನು resolution ವೊಂದನ್ನು ಮಾಡಿ ನಮಗೆ ಕೊಟ್ಟರು. ಆಮೇಲೆ building ಗೆ 25 ಲಕ್ಷ ರೂ.ಗಳನ್ನು ನಮ್ಮ department ನವರು ಕೊಟ್ಟರು. ಅಲ್ಲಿ ಶಾಲೆ ಕಟ್ಟಬೇಕೆಂದು ಎಷ್ಟು ಒತ್ತಾಯ ಮಾಡಿದರೂ, SDMC ಕಟ್ಟಬೇಕೇ? Land Army ಕಟ್ಟಬೇಕೇ? ಇದೇ ಜಿಜ್ಞಾಸೆಯಲ್ಲಿ ಒಂದೂವರೆ ವರ್ಷ ತಡೆದರು. ಎರಡನೇ ವರ್ಷಕ್ಕೆ ಅವನು BDA resolution quash ಮಾಡಿಸಿದ. ನಿಜವಾಗಿ ಏನು ಸರ್ಕಾರಿ ಶಾಲೆಗೆ ದಕ್ಕಬೇಕಾಗಿತ್ತೋ, ಆ ಜಾಗ ಇವತ್ತು ದಕ್ಕಲಿಲ್ಲ. ಕಳೆದ 4 ವರ್ಷಗಳಿಂದ ಅದರ ಬಗ್ಗೆ ಹೋರಾಟ ಮಾಡುವಂತಹ ಅನಿವಾರ್ಯತೆ ಬಂದಿದೆ. ಏಕೆ ಇದನ್ನು ನಾನು ಉಲ್ಲೇಖ ಮಾಡಿದೆ ಎಂದರೆ, ಇವತ್ತು ಶಿಕ್ಷಣದ ಬಗ್ಗೆ ನಾವು ಹೆಚ್ಚಿನ ಒತ್ತನ್ನು ಕೊಡತಕ್ಕಂಥ ಅವಶ್ಯಕತೆ ಇದೆ. ಇವತ್ತು ಸಂವಿಧಾನದಿಂದ ದಕ್ಕಿರತಕ್ಕ ಈ ಅವಕಾಶವನ್ನು ಬಳಸಿ ಕೊಳ್ಳಬೇಕು. ಆಗಲೇ ಮಾತನಾಡಿರುವವರು ಬಹಳ ಚೆನ್ನಾಗಿ ಹೇಳಿದರು. ಇವತ್ತು ನಾವು mid-day meals ಕೊಡುತ್ತೇವೆ, Uniforms ಕೊಡುತ್ತೇವೆ, Books ಕೊಡುತ್ತೇವೆ, ಶಿಕ್ಷಣ ಮೂಲಭೂತಕ್ಕೆ ಬೇಕೋ, ಏನು ಬೇಕೋ, ಆ ಎಲ್ಲಾ ರೀತಿಯ ಪ್ರೋತ್ಸಾಹಕ್ಕೆ ಕೊಡುತ್ತಿದ್ದೇವೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಹುಶಃ ಮೂಲ ಉದ್ದೇಶ ಶಿಕ್ಷಣ ಕೊಡಬೇಕು ಎನ್ನುವಂಥದ್ದೇನಿದೆ, ಆ ಶಿಕ್ಷಣದ ಹಕ್ಕು ಸಾಕಾರ ಆಗಬೇಕು ಎನ್ನುವಂತಿದ್ದರೆ, ಅನಿವಾರ್ಯವಾಗಿ ಇದನ್ನು ಕಡ್ಡಾಯ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಆ gap ಅನ್ನು ಸರಿಪಡಿಸತಕ್ಕಂಥ ಒಂದು ಸುಧಾರಣಾ ಕ್ರಮ ಆಗಬೇಕು. ಆಗ ಮಾತ್ರ ಎಲ್ಲರಿಗೂ ಶಿಕ್ಷಣ ಸಿಗುತ್ತದೆ. ಸರ್ಕಾರವೇ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ. ನಾವು ಅವರಿಗೂ supplement ಮಾಡುತ್ತಾ, ಅವರಲ್ಲಿ ಇರತಕ್ಕಂಥ ಕೊರತೆಯನ್ನು ನೀಗುತ್ತಾ, RTE ಯನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಲಿಕ್ಕೆ ಪ್ರಯತ್ನ ಮಾಡೋಣ ಎಂದು ಹೇಳುತ್ತೇನೆ. ಇವತ್ತು ಮಕ್ಕಳ ಆಯೋಗದ ಬಗ್ಗೆ UN ಜೊತೆಗೆ ಒಡಂಬಡಿಕೆಯಾಗಿದೆ, ಅದನ್ನು ನಾವು ಮರೆಯುವುದು ಬೇಡ. ಮೂಲಭೂತ ಶಿಕ್ಷಣ ಕೊಡುತ್ತೇವೆ ಎನ್ನುವಂತಹ ಒಡಂಬಡಿಕೆಯಾಗಿದೆ. ಅದನ್ನು ನಾವು ಅನುಷ್ಠಾನಗೊಳಿಸಬೇಕೆಂದರೆ, ನಾವು ಇದನ್ನು ಅನಿವಾರ್ಯವಾಗಿ ಜಾರಿಗೆ

ತರಬೇಕಾಗಿದೆ. Central school ಗಳ ಬಗ್ಗೆ ಹೇಳುವುದಾದರೆ, ಬಹಳಷ್ಟು ಜನ ಶಾಸಕರುಗಳಿದ್ದಾರೆ, ನಮ್ಮ area ದಲ್ಲೂ ಸುತ್ತಮುತ್ತ ಸಾಕಷ್ಟು central schools ಇವೆ. ಆದರೆ MLA ಗಳೇನಾದರೂ ಒಂದು ಲೆಟರ್ ಕಳುಹಿಸಿದರೆ, admission ಕೊಡುವುದಿಲ್ಲ. MP letter ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಾನು ಕೇಳುತ್ತೇನೆ. Central school ಗಳಲ್ಲಿ ನಮ್ಮ ಮಕ್ಕಳಿಗೂ ಅವಕಾಶ ಕೊಡಿ. ನಮ್ಮ area ದಲ್ಲೇ ಇರುವಂತಹ ಶಾಲೆಗಳಲ್ಲಿ ಒಬ್ಬ ಶಾಸಕ ಹೇಳಿದರೂ ಸೀಟು ಕೊಡುವುದಿಲ್ಲ. RTE ಬಂದ ಮೇಲಾದರೂ ಬಹುಶಃ ನಮ್ಮ ಸ್ಥಳೀಯ ಮಕ್ಕಳಿಗೆ ಸಿಗತಕ್ಕಂಥ ಅವಕಾಶ ಸಿಗಲಿ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿಯೇ ಮಕ್ಕಳ ಹಕ್ಕು ಕಾಯ್ದೆ ಇದೆ. ಆ ಕಾಯಿದೆಯ ಹಿನ್ನೆಲೆಯಲ್ಲಿ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು, ಮಾನ್ಯ ಡಾ. ಮಹದೇವಪ್ಪ ರವರು ಮತ್ತು ಮಾನ್ಯ ನರೇಂದ್ರ ಬಾಬುರವರು ಸಾಕಷ್ಟು ರೀತಿಯ ಬೆಳಕನ್ನು ಚೆಲ್ಲಿದ್ದಾರೆ. ಆದರೆ ನಾನು ಈ ಸಂದರ್ಭದಲ್ಲಿ ಒಂದೇ ಒಂದು ಅಂಕಿ ಅಂಶವನ್ನು ಮಾತ್ರ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಕಾಯ್ದೆ 2009 ರಲ್ಲೇ ಜಾರಿಗೆ ಬಂದಿತ್ತು. ಅದು ಸರ್ವೋಚ್ಛ ನ್ಯಾಯಾಲಯದ ಮುಂದಿತ್ತು. ಅದರ ತೀರ್ಪು ಬರುವುದು ಸ್ವಲ್ಪ ವಿಳಂಬವಾಯಿತು. ಅದು ಆದರೂ ಕೂಡ, ಈ ಕಾಯ್ದೆಯನ್ನು ಜರಿಗೆ ತರಬೇಕು ಎನ್ನುವುದರ ಬಗ್ಗೆ ನೀವು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿದ್ದೀರಿ? ನಿಮ್ಮ ಕಳಕಳಿ ಬಗ್ಗೆ ನಮಗೆ ಸ್ವಲ್ಪ ಶಂಖೆ ಮೂಡುತ್ತದೆ. ಆ ಕಾರಣಕ್ಕೋಸ್ಕರ ಈ ಅಂಕಿ ಅಂಶಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ Karnataka Right to Education Act and Compulsory Education Rules, 2012ನ್ನು ನೀವು Notification ಮಾಡಿದ್ದು 28.4.2012ರಲ್ಲಿ. ನೀವು 25% ನ್ನು ಈ ಖಾಸಗಿ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳತಕ್ಕಂಥ ಬಗ್ಗೆ ಅಧಿಸೂಚನೆ ಹೊರಡಿಸಿದ್ದು 21.5.2012 ರಲ್ಲಿ, ಪ್ರವೇಶ ಪಡೆಯಲು ಶಾಲೆಗಳಿಗೆ ಅರ್ಜಿ ಸಲ್ಲಿಸುವುದಕ್ಕೆ ಪೋಷಕರಿಗೆ ನೀವು ಅವಕಾಶ ಕೊಟ್ಟ ಕೊನೆಯ ದಿನಾಂಕ: 25. ಕೇವಲ 4 ದಿವಸಗಳಲ್ಲಿ

parents ಗೆ ಇದಕ್ಕೆ ಅರ್ಜಿ ಹಾಕಬೇಕೆಂಬುದು ಎಷ್ಟರಮಟ್ಟಿಗೆ ಗೊತ್ತಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ನೀವು rules ಮಾಡಿದ್ದೇ ಸ್ವಲ್ಪ ತಡವಾಗಿ. Rules ಅನ್ನು ಸ್ವಲ್ಪ ಒಂದೂ ಅಥವಾ ಒಂದೂವರೆ ತಿಂಗಳು ಮುಂಚಿತವಾಗಿ ಮಾಡಿದ್ದರೆ, ಬಹುಶಃ ನಿಮಗೆ ಈ ಕೊರತೆ ಕಾಣುತ್ತಿರಲಿಲ್ಲ. ಆದರೆ ಮಕ್ಕಳನ್ನು ಆಯ್ಕೆ ಮಾಡಬೇಕಾದಂತಹ ಅವಧಿಯನ್ನು ನೀವು ಎಲ್ಲಿಯವರೆಗೂ ಕೊಟ್ಟಿರಿ ಎಂದರೆ, ಅದು ದಿನಾಂಕ: 30.5.2012. ಐದು ದಿವಸ ಮಾತ್ರ ನೀವು ಟೈಮ್ ಕೊಡುತ್ತೀರಿ. ಅದಕ್ಕೆ ನಿಮಗೆ ಶಿಕ್ಷಣಾಧಿಕಾರಿಯವರು ಅನುಮೋದನೆ ಮಾಡಬೇಕಾಗಿರತಕ್ಕ ದಿನಾಂಕ: 10.6.2012. ನಿಮ್ಮ ಈ ಎಲ್ಲಾ ಪ್ರಕ್ರಿಯೆಯೂ ನಡೆದಿರುವಥಂದ್ದು, ಕೇವಲ ಒಂದೂವರೆ ತಿಂಗಳು ಮಾತ್ರ ಈ ರೀತಿ ತರಾತುರಿಯಲ್ಲಿ ಮಾಡಿದ್ದು ಮತ್ತು ಇದಕ್ಕೆ ಹೆಚ್ಚು ಪ್ರಚಾರವನ್ನು ಕೊಡದಿರ ತಕ್ಕಂಥ ಹಿನ್ನೆಲೆಯಲ್ಲಿ ನಿಮಗೆ ಸೀಟುಗಳ ಕೊರತೆ ಬಿತ್ತು. ಈ ಕಾಯ್ದೆಯ ಉದ್ದೇಶದಂತೆ ನೀವು ಕಾನೂನು ಪ್ರಕಾರ ಏನು ತರಬೇಕೋ, ಅದೆಲ್ಲವನ್ನೂ ತಂದಿದ್ದೀರಿ. ಆ ರೀತಿ ತಂದಿದ್ದನ್ನು ಅನುಷ್ಠಾನ ಮಾಡಬೇಕಾದಾಗ ಸ್ವಲ್ಪ ತಡವಾಯಿತು ಎಂಬ ಕಾರಣಕ್ಕೋಸ್ಕರ ಏನು ತೊಂದರೆಯಾಯಿತು ಎನ್ನುವುದು ನಿಮಗೆ ಗೊತ್ತಿದೆ. ಎಷ್ಟು ಮಕ್ಕಳಿಗೆ ಇದರ ಸೌಲಭ್ಯ ಸಿಗಬೇಕಾಗಿತ್ತೋ ಎಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಆಸೆ ಅಥವಾ ಆಕಾಂಕ್ಷೆ ಏನಿತ್ತೋ, ಅಷ್ಟು ಅವರಿಗೆ ಸಿಗಲಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಹೇಳಬೇಕಾದರೆ, ನನ್ನ ಕ್ಷೇತ್ರದಲ್ಲಿ 33 ಶಾಲೆಗಳು ಬರುತ್ತಿವೆ.

ಅದಕ್ಕೆ ನಿಗದಿಯಾಗಿದ್ದಂತಹ ಸೀಟುಗಳು ಎಂದರೆ 282. ಅರ್ಜಿಗಳು ಬಂದಿದ್ದೇ 220. ಆದರೆ ಅದೆಲ್ಲಾ ದಾಖಲಾತಿ ಆಗಿ ಸೀಟು ಉಳಿದಿದ್ದು ಎಷ್ಟು ಅಂದರೆ 62. ಕಾರಣ ಏನೆಂದರೆ ಇದೆಲ್ಲಾ ದಾಖಲಾತಿ ಆದ ಮೇಲೆ ಪೋಷಕರಿಗೆಲ್ಲಾ ಗೊತ್ತಾಗುತ್ತಿತ್ತು. ಆಮೇಲೆ ಅರ್ಜಿಗಳನ್ನು ಹಾಕುವುದಕ್ಕೆ ಪ್ರಯತ್ನಗಳನ್ನು ಪಟ್ಟರು. ಅದಕ್ಕೆ ಸರಿಯಾದಂತಹ ಮಾಹಿತಿಗಳನ್ನು ಇವತ್ತು ಜನಗಳಿಗೆ ಸಾರ್ವಜನಿಕವಾಗಿ ಯಾವ ರೀತಿಯಲ್ಲಿ ಮಾಹಿತಿಯನ್ನು ಕೊಡಬೇಕಾಗಿತ್ತೋ ಅದನ್ನು ಕೊಡುವುದರಲ್ಲಿ ನೀವು ವಿಫಲರಾಗಿದ್ದೀರಿ. ಆ ಕಾರಣದಿಂದಾಗಿ ಇಷ್ಟು ಕೊರತೆ ಬೀಳಲು ಸಾಧ್ಯವಾಯಿತು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಸೀಟನ್ನು ನೀವು ಕೊಡಬೇಕಾಗಿದ್ದು. Admission ಆಗಿದ್ದು ಕೇವಲ 40 ಸಾವಿರ ಎಂದು ಹೇಳಿದರೆ ನಿಜವಾಗಲೂ ಕೂಡ ಅಷ್ಟರಮಟ್ಟಿಗೆ ಆ ಮಕ್ಕಳಿಗೆ ವಂಚನೆ ಆಗಿದೆ ಎಂದು ನನ್ನ ಅಭಿಪ್ರಾಯ. ಏಕೆ ವಿಳಂಬ

ಆಯಿತು ಎಂದು ನಮಗೆ ಅರ್ಥ ಆಗುವುದಿಲ್ಲ. ದಯಮಾಡಿ ಇನ್ನು ಮುಂದಾದರೂ ಕೂಡ ಈಗಾಗಲೇ ಸಾಕಷ್ಟು ರೀತಿಯಲ್ಲಿ ಪ್ರಕ್ರಿಯೆ ಪ್ರಾರಂಭ ಆಗಿರತಕ್ಕ ಹಿನ್ನೆಲೆಯಲ್ಲಿ ಮುಂದಿನ ವರ್ಷ ಅದಕ್ಕೆ 100 ಕ್ಕೆ 100 ರಷ್ಟು ದಾಖಲಾತಿ ಆಗಬೇಕು. ಕೊಟ್ಟಿರತಕ್ಕಂತಹ ಅವಕಾಶವನ್ನು ಮಕ್ಕಳಿಗೆ ಮೀಸಲಿಡುವಂತಹ ಅವಕಾಶ ಕೂಡ ಆಗಬೇಕು. ನಾನು ಈಗ ಅಲ್ಲಿ ಇಲ್ಲಿ ಪತ್ರಿಕೆಯಲ್ಲಿ ನೋಡುತ್ತಿದ್ದೇನೆ. ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿರತಕ್ಕವರು ತಾರತಮ್ಯಗಳನ್ನು ಮಾಡುತ್ತಿರತಕ್ಕದ್ದು ಪತ್ರಿಕೆಗಳಲ್ಲಿ ಕೂಡ ವರದಿ ಆಗಿರುತ್ತದೆ. ಅದು ಅಕ್ಷಮ್ಯ ಅಪರಾಧ ಮಾಡಿರತಕ್ಕಹದ್ದು. ಕೆಲವರು ಕೋರ್ಟ್‌ನಲ್ಲಿಯೂ ಕೂಡಾ ದಾಖಲಾತಿಯನ್ನು ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ಅದನ್ನು immediate ಆಗಿ ಆರೋಪ ಬಂದಂಥ ಹಿನ್ನೆಲೆಯಲ್ಲಿ ಆ ತನಿಖೆ ಆಗಬೇಕು. ಇವತ್ತು ಶಿಕ್ಷಣ ಅಧಿಕಾರಿಗಳು ಇರುತ್ತಾರೆ. ನಿಮ್ಮ ಉನ್ನತ ಅಧಿಕಾರಿಗಳಿಂದ ಇವತ್ತು ವಿಚಾರಣೆ ಮಾಡಿಸಿ ಅವರಿಗೆ ತಕ್ಕ ಶಾಸ್ತಿಯನ್ನು ಮಾಡತಕ್ಕಂಥ ರೀತಿಯಲ್ಲ, ಕಾರ್ಯ ಆಗಬೇಕು. ಕಾನೂನಿನಲ್ಲಿ ಅವಕಾಶವನ್ನು ನೀವು ಮಾಡಿದ್ದೀರಿ. ಅದರ ಹಿನ್ನೆಲೆಯಲ್ಲಿ ಶಿಕ್ಷಣ ಕ್ರಮವನ್ನು ತೆಗೆದುಕೊಂಡಾಗ ಆ ಮಕ್ಕಳ–ಮಕ್ಕಳ ಮಧ್ಯದಲ್ಲಿ ಇರತಕ್ಕಂಥ ಆ ತಾರತಮ್ಯವನ್ನು ಮತ್ತು ಆ discrimination ಅನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಅದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಶಿಕ್ಷಣ ಸಚಿವರು ಉತ್ತರ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಮತ್ತು ಅತಿ ಜರೂರಾದಂತಹ ವಿಷಯದ ಬಗ್ಗೆ ಶಿಕ್ಷಣದ ಹಕ್ಕು ಕಾಯಿದೆಯನ್ನು ಕಡ್ಡಾಯಗೊಳಿಸಿರುವಂತಹ ವಿಷಯದ ಬಗ್ಗೆ ಇದುವರೆಗೆ ಹಿರಿಯರಾದ ಶ್ರೀಯುತ ಶ್ರೀನಿವಾಸ ಪ್ರಸಾದ್ ರವರು, ಉಪನಾಯಕರಾದ ಶ್ರೀಯುತ ಜಯಚಂದ್ರರವರು, ಡಾ: ಮಹದೇವಪ್ಪನವರು ಮತ್ತು ಶ್ರೀಯುತ ನರೇಂದ್ರಬಾಬುರವರು ಸುದೀರ್ಘವಾಗಿ ತಮ್ಮ ಭಾವನೆ, ಅಭಿಪ್ರಾಯಗಳೆಲ್ಲವನ್ನೂ ಇಲ್ಲಿಮಂಡಿಸಿದ್ದರೆ. ಬಹಳ ಒಳ್ಳೆಯ ರೀತಿಯಲ್ಲಿ ವಿಷಯಗಳೆಲ್ಲವನ್ನೂ ಪ್ರಸ್ತಾಪಿಸಿರುವ ಬಗ್ಗೆ ನಾನು ಅವರೆಲ್ಲರಿಗೂ ಅಭಿನಂದಿಸುತ್ತೇನೆ. ಈ ಸದನದಲ್ಲಿ ಶಿಕ್ಷಣ ಕ್ಷೇತ್ರದ ವಿಷಯದಲ್ಲಿ ತಾವುಗಳು ಹೆಚ್ಚು ಆಸಕ್ತಿ,

ಜವಾಬ್ದಾರಿಗಳನ್ನು ತೆಗೆದುಕೊಂಡು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ನಾನು ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇನೆ. ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರೂ ಸಹ ಈಗಾಗಲೇ ನಮ್ಮ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಈ ಕಾಯಿದೆಯನ್ನು ಜಾರಿಗೊಳಿಸುವುದಕ್ಕೆ ತಮ್ಮೆಲ್ಲರ ಆಸಕ್ತಿಯನ್ನು, ಜವಾಬ್ದಾರಿಯನ್ನು ತೆಗೆದುಕೊಂಡು ಕಾಳಜಿ ಪೂರ್ವಕವಾಗಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಗಳಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದರ ಬಗ್ಗೆ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ಸಹ ನಾನು ಅಭಿನಂದಿಸುತ್ತೇನೆ. ನನಗೆ ಇವತ್ತು ಈ ವಿಷಯ ಇಲ್ಲಿ ಚರ್ಚೆಯಗುತ್ತಿರುವುದರ ಬಗ್ಗೆ ಬಹಳ ಸಂತೋಷವೆನಿಸಿದೆ. ನಮ್ಮ ಜವಾಬ್ದಾರಿಗಳನ್ನು ನಾವು ಹೆಚ್ಚು ಮಾಡಿಕೊಳ್ಳುವಂಥ ಒಂದು ಮಹತ್ವದ ಸಂದರ್ಭಗಳು ಇವೆಲ್ಲವೂ. ಅ ಸಂದರ್ಭಗಳನ್ನು ತಾವುಗಳು ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದರ ಮೂಲಕ ಅವಕಾಶವನ್ನು ದೊರಕಿಸಿ ಕೊಟ್ಟಿದ್ದೀರಿ. ಇನ್ನೊಂದು ಬಹಳ ಸಂತೋಷದ ವಿಷಯವೆಂದರೆ, ನಾವು ಯಾರ ಬಗ್ಗೆ, ಯಾರ ಭವಿಷ್ಯದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೋ, ಆ ಮಕ್ಕಳೇ ಇಲ್ಲಿ ಸಾಕ್ಷಿದಾರರಾಗಿ ಕುಳಿತಿದ್ದರೆ. ಸಾಕಷ್ಟು ಜನ ತಾವುಗಳು ಮಾತನಾಡುವಾಗ ಬಂದು ಕೇಳಿ ಹೋಗಿದ್ದಾರೆ. ಈಗಲೂ ಸಹ ಉಪಸ್ಥಿತರಿದ್ದಾರೆ. ನಮ್ಮೆಲ್ಲರ ಬಹಳ ಜವಾಬ್ದಾರಿಯುತವಾದಂಥ ಕರ್ತವ್ಯ, ಹೊಣೆಗಾರಿಕೆಯೆಂದರೆ, ಆ ಮಕ್ಕಳ ಭವಿಷ್ಯವನ್ನು ಒಂದು ಅತ್ಯುತ್ತಮವಾದಂಥ ರೀತಿಯಲ್ಲಿ, ಪರಿಪೂರ್ಣವಾದ ರೀತಿಯಲ್ಲಿ ಸರ್ವಾಂಗೀಣವಾಗಿ ಅವರ ವ್ಯಕ್ತಿತ್ವವನ್ನು ಅಭಿವೃದ್ಧಿ ಮಾಡಿಸಬೇಕು. ಇದು ನಮ್ಮ ಗಮನವಾಗಬೇಕು. ಶಿಕ್ಷಣ ಕ್ಷೇತ್ರ ಅನೇಕ ಸಂದರ್ಭಗಳಲ್ಲಿ ಏನಾಗಿದೆ ಎಂದರೆ, ನಾನು ವಿಧಾನ ಪರಿಷತ್ತಿನಲ್ಲಿ, ವಿಧಾನ ಸಭೆಗಳಲ್ಲಿ ನೋಡುತ್ತೇನೆ, ಸಮಾಜದಲ್ಲಿ ಹೊರಗೆ ನೋಡುತ್ತೇನೆ. ನಮ್ಮ ಇಲಾಖೆ ಅಥವಾ ಸರ್ಕಾರದಲ್ಲಿ ಆ ಮಗುವನ್ನು ಕೇಂದ್ರೀಕರಿಸಿ ಯಾವ ಶಿಕ್ಷಣ ವ್ಯವಸ್ಥೆ ರೂಪಿತವಾಗಬೇಕೋ, ಅದರ ಬದಲು ಇನ್ನೆಲ್ಲೆಲ್ಲೋ, ಯಾವ ಯಾವುದೋ ವಿಷಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ಶಿಕ್ಷಣದಲ್ಲಿ ನಮ್ಮೆಲ್ಲರ ಬಹಳ ಮುಖ್ಯವಾದಂಥ ಕೇಂದ್ರ ಯಾವುದೆಂದರೆ, ಆ ಮಗು. ಆ ಮಗುವಿಗೆ ಆ ತರಗತಿಯೊಳಗೆ ಆ ಶಿಕ್ಷಕರಿಂದ ಹೇಗೆ ಅಲ್ಲಿ ಪಾಠವಾಗುತ್ತಿದೆ? ಅದು ಎಷ್ಟು ಪರಿಣಾಮಕಾರಿಯಾಗಿ ಆಗುತ್ತಿದೆ? ಅದು ಹೇಗೆ ನಿಜವಾಗಿ ಯಾವ ವಿಷಯವನ್ನು ಹೇಗೆ ಆ ಮಗುವಿನ ಮನದಾಳದಲ್ಲಿ ಮೂಡುವಂತೆ, ಅವರ ವ್ಯಕ್ತಿತ್ವಗಳು ವಿಕಸನವಾಗುವುದಕ್ಕೆ ಕಾರಣವಾಗುತ್ತಿದೆ ಎನ್ನುವುದರ ಬಗ್ಗೆ

ಕೇಂದ್ರೀಕರಿಸಿ ನಾವು ಕೆಲಸ ಕಾರ್ಯಗಳನ್ನು ಮಾಡಬೇಕು. ಅದಕ್ಕೆ ನಮ್ಮ ಆಗ್ರಹ, ಜವಾಬ್ದಾರಿ ಇರಬೇಕು. ಅದಕ್ಕೆ ಬೇಕಾದಂಥ ಪ್ರಯತ್ನಗಳನ್ನು ನಾವೆಲ್ಲ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ನಾವು ಮುಂದೆ ಹೋಗೋಣ. ಮಗುವೇ ನಮ್ಮ ಶಿಕ್ಷಣದ ಕೇಂದ್ರಬಿಂದು. ನಮ್ಮೆಲ್ಲರ, ಸರ್ಕಾರದ ಜವಾಬ್ದಾರಿ ಆ ಮಗುವಿನದು. ಒಂದೊಂದು ಮಗುವಿನಲ್ಲಿರುವಂತಹ ಎಲ್ಲಾ ರೀತಿಯ ಸಾಮರ್ಥ್ಯಗಳನ್ನು ಗುರುತಿಸಿ ಪ್ರೋತ್ಸಾಹಿಸುವುದೇ ನಮ್ಮೆಲ್ಲರ ಜವಾಬ್ದಾರಿ, ಕರ್ತವ್ಯ ಎನ್ನುವಂಥದ್ದು ಬಹಳ ಮುಖ್ಯವಾದಂಥ ಅಂಶವಾದರೆ ಬಹುಶಃ ನಮ್ಮ ಮೇಲಿನ ಬಹಳ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಸಾಧ್ಯ ಎನ್ನುವುದನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಿರಿಯರು ಮಾತನಾಡುವಾಗ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದರು. ಶಿಕ್ಷಣ ಬ್ರಿಟಿಷರು ಬರುವುದಕ್ಕಿಂತ ಮೊದಲು, ಬಂದನಂತರ ಏನಾಗಿದೆ, ಹೇಗಾಗಿದೆ ಇತ್ಯಾದಿ ಪ್ರಸ್ತಾಪಿಸಿದರು. ನಾನು ಎಲ್ಲಾ ಸಂಗತಿಗಳನ್ನು ಪುನರಪಿ ಇಲ್ಲಿ ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಒಂದು ಮಾತ್ರ ಬಲವಾಗಿ ನಂಬಿರುವಂತಹ ವಿಷಯವನ್ನು ಇಲ್ಲಿ ಹೇಳಲೇಬೇಕು. ದುರ್ದೈವದಿಂದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಭಾರತೀಯರಾಗಿ ಯಾವ ಪರಿವರ್ತನೆಯನ್ನು ತರುವುದಕ್ಕೆ, ಯಾವ ಕಾಳಜಿ, ಜವಾಬ್ದಾರಿಯನ್ನು ಸ್ವಾತಂತ್ರ್ಯ ನಂತರದ ಭಾರತದಲ್ಲಿ ನಿರ್ವಹಿಸಬೇಕಿತ್ತೋ, ಅದನ್ನು ನಿರ್ವಹಿಸಿಲ್ಲ ಎನ್ನುವಂತಹದು ನನ್ನ ಸ್ಪಷ್ಟವಾದಂಥ ಮಾತಿದು. ನನ್ನ ನಂಬಿಕೆ ಇದು. ಏಕೆ ಎಂದು ಕೇಳಬಹುದು. ಕೇವಲ ಸಾಕ್ಷರತಾ ಪ್ರಮಾಣ ಹೆಚ್ಚಿದೆ, ಕಡಿಮೆ ಇದೆ ಎನ್ನುವಂಥ ವಿಷಯಕ್ಕೆ ಮಾತ್ರ ಎಂದು ನಾನು ಹೇಳುವುದಿಲ್ಲ. ಅನೇಕ ಕಾರಣಗಳಿಗೋಸ್ಕರವಾಗಿ ಇದನ್ನು ಉಲ್ಲೇಖಿಸುವುದಕ್ಕೆ ಬಯಸುತ್ತಿದ್ದೇನೆ. ಬ್ರಿಟಿಷರು ಹಾಕಿಕೊಟ್ಟಂಥ ಈ ಶಿಕ್ಷಣ ವ್ಯವಸ್ಥೆಯ ಕಾರಣದಿಂದ ಏನಾಗಿದೆ? ಶಿಕ್ಷಣ ಎಂದರೆ ಅದು ಉದ್ಯೋಗಕ್ಕೆ ಮಾತ್ರ ಲಿಂಕ್ ಆಗಿರುವ ಸಂದರ್ಭ ಬಹಳ ದೊಡ್ಡ ಪ್ರಮಾಣದಲ್ಲಿ ಕಾಣುತ್ತಿದ್ದೇವೆ. ಆದರೆ ಶಿಕ್ಷಣ ಕೇವಲ ಉದ್ಯೋಗಕ್ಕೆ ಅಲ್ಲ. ಶಿಕ್ಷಣ ಆ ಮಗುನಲ್ಲಿರುವಂತ ಅನೇಕ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಅವನ ಒಂದು ವ್ಯಕ್ತಿತ್ವ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಆಗುವುದಕ್ಕೆ ನಿಜವಾಗಿ ಭಾರತೀಯರಾಗಿ ನಾವು ನಂಬಿರುವುದು ಶಿಕ್ಷಣ. ಶಿಕ್ಷಣ, ಅದೊಂದು ಸಂಸ್ಕಾರವಾಗಿ, ಆ ಮಗುವಿನ ಜೀವನದ ದೃಷ್ಟಿಕೋನವೇ ಇಲ್ಲಿ ಸ್ಪಷ್ಟ ಆಗಬೇಕು. ಅದು ಶಿಕ್ಷಣವಾಗಬೇಕು. ಜೀವನ ಏಕೆ? ನಮ್ಮ ಕರ್ತವ್ಯ, ಹೊಣೆಗಾರಿಕೆಗಳೇನು? ನಮ್ಮ ಸಾಮಾಜಿಕ, ರಾಷ್ಟ್ರೀಯ

ಜವಾಬ್ದಾರಿಗಳು ಏನು? ಇದೆಲ್ಲವೂ ಶಿಕ್ಷಣದಿಂದ ಬಹಳ ಸ್ಪಷ್ಟಗೊಳ್ಳಬೇಕು. ಆದರೆ ಆ ಬ್ರಿಟಿಷರು ಹಾಕಿಕೊಟ್ಟಂತಹ ಶಿಕ್ಷಣದ ವ್ಯವಸ್ಥೆ, ಕಾರಣದಿಂದಾಗಿ ಶಿಕ್ಷಣ ಎಂದರೆ ಒಂದು ಉದ್ಯೋಗಕ್ಕೆ ಎನ್ನುವ equation ರೆಡಿಯಾಗಿದೆ. ಇದರಿಂದ ನಾವು ಹೊರಬರಬೇಕು. ಶಿಕ್ಷಣ ಉದ್ಯೋಗವನ್ನೂ ಕೊಡಬೇಕು. ಶಿಕ್ಷಣ ನಮಗೆ ಒಂದು ಆತ್ಮವಿಶ್ವಾಸವನ್ನು ಕೊಡಬೇಕು. ಧೈರ್ಯ ಕೊಡಬೇಕು. ಶಿಕ್ಷಣ ಜಗತ್ತಿನ ಎಲ್ಲಾ ಸವಾಲನ್ನು ಎದುರಿಸುವುದಕ್ಕೆ ಬೇಕಾದಂಥ ಮಾನಸಿಕತೆಯನ್ನು ಕೊಡಬೇಕು. ಹತ್ತು ಹಲವು ದೃಷ್ಟಿಕೋನದಲ್ಲಿ ನಾವು ಹೇಳಬಹುದು. ಆದರೆ ನಿಜವಾದ ಶಿಕ್ಷಣ ಉದ್ಯೋಗಕ್ಕೆ ಎಂದು ಆಗಬಾರದು. ಅದು de-link ಆಗಲೇಬೇಕು. ಆ ಒಂದು ಸ್ಥಿತಿಯನ್ನು ತರುವುದಕ್ಕೆ ನಾವು ಅನೇಕ ರೀತಿಯಲ್ಲಿ ನಮ್ಮ ಪ್ರಯತ್ನವನ್ನು ಮುಂದುವರಿಸಬೇಕಾದಂಥ ಅಗತ್ಯತೆ ಇದೆ. ಆ ಪ್ರಯತ್ನವನ್ನು ನಾವೆಲ್ಲ ಜೊತೆ ಸೇರಿ ಹೀಗೆಯೇ ಇನ್ನಷ್ಟು ವಿಸ್ತಾರವಾಗಿ ಚರ್ಚಿಸುತ್ತಾ, ನಾವು ಮುಂದುವರೆಸೋಣ. ನಾನು ಆ ವಿಷಯಕ್ಕೆ ಇನ್ನೂ ಹೆಚ್ಚು ಹೋಗುವುದಕ್ಕೆ ಬಯಸುವುದಿಲ್ಲ. ಇವತ್ತು ವಿಶೇಷವಾಗಿ ನಮ್ಮ ಹಿರಿಯರಾದಂತಹ ಶ್ರೀನಿವಾಸ ಪ್ರಸಾದ್‌ರವರು ನಮ್ಮ ಈ ಒಂದು ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯನ್ನು ಜಾರಿಗೊಳಿಸುತ್ತಿರುವಂತಹ ಸಂದರ್ಭದಲ್ಲಿ ಆಗುತ್ತಿರುವಂಥ ಕೆಲವಾರು ಒಳ್ಳೆಯ ಸಂಗತಿಗಳನ್ನು ತಾವು ಉಲ್ಲೇಖಿಸಿದ್ದೀರಿ, ಹಾಗೆಯೇ ಕೆಲವಾರು ದೋಷಗಳು, ನ್ಯೂನತೆಗಳು ಏನಿವೆ ಎಂಬುದನ್ನು ತಾವುಗಳು ಮಾತನಾಡುವಾಗ ಉಲ್ಲೇಖಿಸಿದ್ದೀರಿ. ಇದರಲ್ಲಿ ಮುಖ್ಯವಾಗಿ ಬರುವುದು ಏನೆಂದರೆ ವಿಳಂಬವಾಯಿತು. ನಾವು ಈ ಕಾಯಿದೆಯನ್ನು ಜಾರಿಗೊಳಿಸುವುದಕ್ಕೆ ಜಯಚಂದ್ರ ರವರು ವಿಳಂಬವಾಯಿತೆಂದು ಹೇಳಿದ್ದೀರಿ. ಹಾಗಾಗಿ ಶೇ. 25 ರಷ್ಟು ಸೀಟಲ್ಲಿ 1 ಲಕ್ಷ ಸೀಟನ್ನು ಕೊಡಬೇಕಾದುದು ಕೇವಲ ಒಂದು 50 ಸಾವಿರದಷ್ಟು, ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಒಂದು 50 ಪರ್ಸೆಂಟಷ್ಟು ಯಶಸ್ಸಗಿದ್ದೇವೆ. ಇನ್ನು 50 ಪರ್ಸೆಂಟ್ ಯಶಸ್ಸು ಅಗಿಲ್ಲ. ಯಾಕೆಂದರೆ ಸರ್ಕಾರಲ್ಲಿ ನೀವು ತಡವಾಗಿ ಈ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದ್ದೀರೆಂದು ಹೇಳಿದರು. ಹಾಗೆ ನಾನು ಮಾತನಾಡಿದರೆ ಅಥವಾ ಹೇಳಿದರೆ ನಾನು ಬೇರೆ ಹೇಳುತ್ತೇನೆ. ಮಹದೇವಪ್ಪನವರು ಮಾತನಾಡುತ್ತಾ ಹೇಳಿದಿರಿ ಎಂದು ಕಾಣುತ್ತದೆ. ಈ ಕಾಯಿದೆ ಬರುವುದಕ್ಕೆ 2009 ರವರೆಗೆ ಕಾಯಬೇಕಾಯಿತು ಸ್ವಾತಂತ್ರ್ಯ ಬಂದ ಮೇಲೆ, ಈ ಕಾಯಿದೆ ಯಾವತ್ತೋ ಕೇಂದ್ರ ಸರ್ಕಾರದಲ್ಲಿ

ಜಾರಿಗೊಳ್ಳಬೇಕಾಗಿತ್ತು. ನಮ್ಮೆಲ್ಲರ ಅಪೇಕ್ಷೆ ಇತ್ತು, ನಿರೀಕ್ಷೆ ಇತ್ತು. ಅಟಲ್ ಬಿಹಾರಿ ವಾಜಪೇಯಿಯವರು ಹೇಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಜಾರಿಗೆ ತಂದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಬದಲಾವಣೆ, ಕಾಂತ್ರಿಕಾರಕ ಚಟುವಟಿಕೆ, ಶಾಲೆ ನಮ್ಮದು ಎನ್ನುವಂಥ ಅಭಿಮಾನ, ಸುಂದರ ಶಾಲೆಯಾಗುವಂಥ ಏನು ಒಂದು ಚಟುವಟಿಕೆಯನ್ನು ನಡೆಸಿದರೋ, ಹಾಗೆ ಈ ಕಾಯಿದೆ ಯಾವತ್ತೋ ಜಾರಿಗೆ ಬರಬೇಕಾಗಿತ್ತು. ಆದರೆ ತಡವಾಗಿಯಾದರೂ ಒಳ್ಳೆಯ ಕಾಯಿದೆ 2009ರಲ್ಲಿ ಯು.ಪಿ.ಎ. ಸರ್ಕಾರ ತಂದಿದೆ. ನಾನು ಅದನ್ನು ಅಭಿನಂದಿಸುತ್ತೇನೆ. ಯಾಕೆಂದರೆ, ತಡವಾಗಿ ಆದರೂ ತಂದರು. ಇನ್ನೂ ತರದೇ ಮತ್ತೆ ಕಾಲ ವಿಳಂಬ ಮಾಡದೇ ಅದನ್ನು ತಂದಿದ್ದಾರೆ. 2009ರಲ್ಲಿ ಬಂದ ನಂತರದಲ್ಲಿ, 2010 ಏಪ್ರಿಲ್‌ನಿಂದ ಅದು ಜಾರಿಗೊಳ್ಳಬೇಕು ಎನ್ನುವಂತಹ ಆಶಯವನ್ನು ಕೇಂದ್ರ ಸರ್ಕಾರ ಹೇಳಿತು. ನಾವೂ ಸಹ 2010 ರಿಂದಲೇ ಇದಕ್ಕೆ ಬೇಕಾದಂಥ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಿದ್ದೇವೆ. ಅಗತ್ಯವಾದಂಥ ಪ್ರಚಾರ ಅಥವಾ ಜನಜಾಗೃತಿ ಅಥವಾ ಇಲಾಖೆಯಲ್ಲಿ ಯಾವ ಯಾವ ಸಂದರ್ಭದಲ್ಲಿ ಏನೇನು ಕಾರ್ಯಚಟುವಟಿಕೆಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿದ್ದೇವೆ. ಅಗತ್ಯವಾದಂಥ ಆದೇಶಗಳೆಲ್ಲವನ್ನೂ ಹೊರಡಿಸಿದ್ದೇವೆ.

2010 ರಿಂದ ಪ್ರಾರಂಭವಾಗಿದೆ. ಆದರೆ ಸುಪ್ರೀಂಕೋರ್ಟ್‌ನಲ್ಲಿ ಒಂದು ಕೇಸ್ ಇತ್ತು. ಶೇಕಡ 25% ರಷ್ಟು ಖಾಸಗಿ ಶಿಕ್ಷಣ ಸಂಸ್ಥೆ ಕೊಡಬೇಕು ಬೇಡ ಎನ್ನುವುದರ ಬಗ್ಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಎಲ್ಲರೂ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಫೈಲ್ ಮಾಡಿದ್ದರು. ನಾವು ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಫೈಲ್ ಮಾಡಿ ಬಂದ ತೀರ್ಮಾನವನ್ನು ದೇಶದಾದ್ಯಂತ ಶಿಕ್ಷಣ ಕ್ಷೇತ್ರದಲ್ಲಿರುವವರು ನಾವೆಲ್ಲರೂ ಅದು ಏನಾಗುತ್ತದೋ ಎಂದು ಕಾಯುತ್ತಿದ್ದೆವು. ಅದು ಎನಾಗುತ್ತದೋ ಎನ್ನುವುದರ ಮೇಲೆ ಮುಂದಿನ ಪ್ರಕ್ರಿಯೆ ನಾವು ಮಾಡಬೇಕಾದ ಅಗತ್ಯ ಇದೆ ಎನ್ನುವಂಥದ್ದು ನಮಗೆ ಗೊತ್ತಿರುವಂಥದ್ದು. ಹಾಗಾಗಿ ನಾವು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ್ನು ಕಾಯುತ್ತಿದ್ದೆವು. ಅದರ ಮಧ್ಯದಲ್ಲಿಯೇ ಸಾಕಷ್ಟು ಜನ ಜಾಗೃತಿ ಚಟುವಟಿಕೆಗಳನ್ನು ನಡೆಸಿದ್ದೇವೆ. ತಮಗೆ ಗೊತ್ತಿದೆ, ಕಳೆದ ವರ್ಷದ ಜುಲೈ 5 ಮತ್ತು ಈ ವರ್ಷದ ಜುಲೈ 5ಕ್ಕೆ ಶಾಲೆಗಾಗಿ ನಾವು ನೀವು ಕಾರ್ಯಕ್ರಮವನ್ನು ಮಾಡಿದ್ದೇವೆ. ನೀವೆಲ್ಲರೂ ಭಾಗವಹಿಸಿದ್ದೀರಿ. ಬಹಳ ಸಂತೋಷವಾಗಿದೆ. ನಿಮ್ಮೆಲ್ಲರ ಸಕ್ರಿಯ ಭಾಗವಹಿಸುವಿಕೆಯಿಂದಾಗಿ ಶಾಲೆಗಳ ಬಗ್ಗೆ ಒಂದು

ಭಾವನಾತ್ಮಕ ಸಂಬಂಧ ಬೆಳೆಯುವುದಕ್ಕೆ ಕಾರಣವಾಗಿದೆ. ಹಳೆಯ ವಿದ್ಯಾರ್ಥಿಗಳಾಗಿ ನಾವು ಆ ಶಾಲೆಗಳ ಬಗ್ಗೆ ತೋರಿಸುತ್ತಿರುವ ಕಾಳಜಿಯನ್ನು ತೋರಿಸುತ್ತಿರುವುದರಿಂದ ಅಲ್ಲಿ ಬೇಕಾದ ಮೂಲ ಸೌಕರ್ಯಗಳು ಸಿಗುತ್ತಿವೆ. ವಿಶೇಷವಾಗಿ ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ನಮ್ಮ ಶಿಕ್ಷಕರು ಹಾಗೂ ನಮ್ಮ ಇಲಾಖೆಯವರಿಗೆ ಕಾರಣವಾಗುತ್ತಿರುವುದು ನಾವು ನೋಡುತ್ತಿದ್ದೇವೆ. ಎಲ್ಲಾ ಸಂದರ್ಭಗಳಲ್ಲಿಯೂ ಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಿದ್ದೇವೆ. ಸುಪ್ರೀಂಕೋರ್ಟಿನ ಜಡ್ಜ್‌ಮೆಂಟ್ ಬರಲಿ ಎಂದು ಕಾಯುತ್ತಿದ್ದೆವು. 12 ಏಪ್ರಿಲ್ 2012ಕ್ಕೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದಿತು. ನಾನು ಹೆಮ್ಮೆಯಿಂದ ಹೇಳಬೇಕು. ನಾನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವತ್ತಿನ ದಿನವೇ ಈ ಕಾಯಿದೆಯನ್ನು ನಾವು ಕ್ಯಾಬಿನೆಟ್‌ನಲ್ಲಿ ಕ್ಲೀಯರ್ ಮಾಡಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನ ಬರುತ್ತಿದ್ದ ಹಾಗೆ ಅವತ್ತಿನ ದಿನವೇ ನಾವು ನಮ್ಮ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿಕೊಂಡಿದ್ದೇವೆ. 28.4.2012ಕ್ಕೆ ನಮ್ಮ ಗೆಜೆಟ್ ಪ್ರಕಟಣೆ ಆಯಿತು. ನಮಗೆ ಈ ವರ್ಷ ವಿಳಂಬವಾಗಿರುವುದು ಸತ್ಯ ಇದೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಏಪ್ರಿಲ್ 2012ರಲ್ಲಿ ಬಂದ ನಂತರ ಮೇ ಕೊನೆಯಲ್ಲಿ ನಮ್ಮ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ. ಈ ವರ್ಷ ನಮಗೆ ವಿಳಂಬವಾಗಿದೆ. ಆ ಜಡ್ಜ್‌ಮೆಂಟ್ ಬರುವುದು ವಿಳಂಬವಾಗಿರುವುದರಿಂದ ನಾವು ನಮ್ಮ ಮುಂದಿನ ಪ್ರಕ್ರಿಯೆಗಳನ್ನು ವೇಗವಾಗಿ ನಡೆಸಿದ್ದೇವೆ. ಕರ್ನಾಟಕದವನಾಗಿ ನಾನು ಹೆಮ್ಮೆ ಪಟ್ಟುಕೊಂಡು ಹೇಳಬಹುದು ಇಡೀ ದೇಶದಲ್ಲಿ ಈ ಕಾಯಿದೆಯನ್ನು ಜಾರಿಗೊಳಿಸುವುದಕ್ಕೆ ಅತಿ ಹೆಚ್ಚು ಜವಾಬ್ದಾರಿಯನ್ನು, ಅತಿ ಹೆಚ್ಚು ಕಾಳಜಿಯನ್ನು ತೆಗೆದುಕೊಂಡು ಯಾವುದಾದರೂ ರಾಜ್ಯ ಮುಂದಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದ್ದರೆ ಅದು ಕರ್ನಾಟಕ ಎಂದು ನಾನು ಹೆಮ್ಮೆಯಿಂದ ಹೇಳಬಹುದು. ಅಷ್ಟು ಒಳ್ಳೆಯ ರೀತಿಯಲ್ಲಿ ನಾವು ಈ ಕಾಯಿದೆಯನ್ನು ಜಾರಿಗೊಳಿಸಿದ್ದೇವೆ. ನಾನು ಬೇರೆ ರಾಜ್ಯಗಳ ಬಗ್ಗೆ ಮಾತನಾಡಬಹುದು ಆದರೆ ಮಾತನಾಡುವುದಿಲ್ಲ. ತಾವುಗಳು ಪ್ರತಿನಿಧಿಸುತ್ತಾ ಇರತಕ್ಕಂತಹ ಪಕ್ಷಗಳ ಸರ್ಕಾರಗಳು ಯಾವ ಯಾವ ರಾಜ್ಯಗಳಲ್ಲಿವೆ ಎಂದು ನಮಗೂ ನಿಮಗೂ ಗೊತ್ತಿದೆ. ಆಯಾಯ ರಾಜ್ಯಗಳ ಸ್ಥಿತಿಗತಿಗಳು ಏನೆಂದು ನನಗೆ ಗೊತ್ತಿದೆ. ತಾವುಗಳೂ ತಿಳಿದುಕೊಳ್ಳಬೇಕು. ಆದರೆ ಇದು ರಾಜ್ಯಗಳ ಪ್ರಶ್ನೆ ಅಲ್ಲ. ಕರ್ನಾಟಕದ ಬಗ್ಗೆ ಹೇಳುವಾಗ ದೇಶದ ಉಳಿದ ರಾಜ್ಯಗಳ ಬಗ್ಗೆಯೂ ಉಲ್ಲೇಖಿಸಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಚೆನ್ನಾಗಿ ಉತ್ತರ ಕೊಡುತ್ತಿದ್ದೀರಿ ಮಧ್ಯದಲ್ಲಿ ಏನಾದರೂ ಒಂದು ತಂದು ಬಿಡುತ್ತೀರಿ.

DR.H.C MAHADEVAPPA : Now it is mandatory.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : RTE 61 ವರ್ಷಗಳಿಂದ ತಂದಿರುವವರು ಯಾರು? ಕೇಂದ್ರ ಸರ್ಕಾರದವರು. ಅದನ್ನು ನೀವು appreciate ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಡವಾಗಿಯಾದರೂ ತಾವು ತಂದಿದ್ದೀರಿ ಎಂದು ನಾನು ಅಭಿನಂದಿಸಿದ್ದೇನೆ. ಮೊದಲೇ ಹೇಳಿದ್ದೇನೆ ನಾನು. ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಕಾಯಿದೆಯ ಮುಖ್ಯ ಆಶಯಗಳನ್ನು ಈಡೇರಿಸುವುದಕ್ಕೆ ಕರ್ನಾಟಕದಲ್ಲಿ ನಮ್ಮ ಭಾರತೀಯ ಜನತಾ ಪಕ್ಷದ ಸರ್ಕಾರವಾಗಲಿ ನಾವು ಹೆಚ್ಚು ಜವಾಬ್ದಾರಿ ತೆಗೆದುಕೊಂಡ ರಾಜ್ಯ ಆಗಿದ್ದೇವೆ. ತಾವುಗಳು ಯಾವ ಭಾವನೆಗಳನ್ನು ವ್ಯಕ್ತಪಡಿಸಿ ಮಾತನಾಡಿದೀರೋ ಆ ಭಾವನೆಗಳನ್ನು ಅರ್ಥೈಸಿಕೊಂಡು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ ನಾನು.

ಶ್ರೀ ನೆ.ಲ. ನರೇಂದ್ರಬಾಬು : ನೀವು ಕಾಳಜಿ ವಹಿಸಿ ನಮ್ಮ ರಾಜ್ಯದಲ್ಲಿ ಮಾಡಿರುವುದು ನಾನು ಸ್ವಾಗತಿಸುತ್ತೇನೆ. ನಮ್ಮ ರಾಜ್ಯಕ್ಕಿಂತ ಮುಂಚೆ ಸುಪ್ರೀಂಕೋರ್ಟಿನ ಆದೇಶ ಬರುವುದಕ್ಕಿಂತ ಮುಂಚೆ ಕೆಲವು ರಾಜ್ಯಗಳು ಅನುಷ್ಠಾನ ಮಾಡಿದವು. ಅವು ಏಕೆ ಇಚ್ಛಾಶಕ್ತಿ ತೋರಿಸಿದವು? ನಮ್ಮ ರಾಜ್ಯ ಏಕೆ ಇಚ್ಚಾಶಕ್ತಿ ತೋರಿಸಲಿಲ್ಲ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಚ್ಛಾ ಶಕ್ತಿ ತೋರಿಸಲಿಲ್ಲ ಮಾಡಲಿಲ್ಲ ನನಗೆ ಗೊತ್ತಿದೆ.

ಶ್ರೀ ನೆ.ಲ. ನರೇಂದ್ರಬಾಬು : ತಮಿಳುನಾಡಿನವರು ಮಾಡಲಿಲ್ಲವಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಏನು ಮಾಡಿದ್ದಾರೆ, ಯಾವ್ಯಾವ ರಾಜ್ಯಗಳು ಮಾಡಲಿಲ್ಲವೆಂದು ನನ್ನ ಬಳಿ ಪೂರ್ಣ ಮಾಹಿತಿ ಇದೆ. ನಾನು ವಿವರವಾಗಿ ಹೇಳಿದರೆ ವಿವಾದಕ್ಕೆ ಕಾರಣವಾಗುತ್ತದೆ. ನಾನು ಅದರ ಬಗ್ಗೆ ಮಾತನಾಡುವುದಿಲ್ಲ. 3–4 ರಾಜ್ಯಗಳು ಬಿಟ್ಟರೆ, ಮುಂದೆ ಹೋಗಿರುವ ರಾಜ್ಯಗಳು ಕೆಲವಾರು ಇವೆ. ಕರ್ನಾಟಕ ಮೊದಲು ಇದೆ. ಇನ್ನೊಂದು 3–4 ರಾಜ್ಯಗಳು ಸ್ವಲ್ಪ ಹೆಜ್ಜೆ ಮುಂದೆ ಇಟ್ಟು ಮುಂದೆ ಮುಂದೆ ಹೋಗುತ್ತಿವೆ. ಆದರೆ ಕರ್ನಾಟಕ ಬಹಳ ಮುಂದಿದೆ. ಉತ್ತರಾಖಂಡ, ಮಧ್ಯಪ್ರದೇಶ,

ಬಿಹಾರ, ಮತ್ತು ಚಂಡೀಗಢ ಈ ನಾಲ್ಕು ರಾಜ್ಯಗಳು ಇದಕ್ಕೆ ಬೇಕಾದ ಕೆಲವು ಪ್ರಯತ್ನಗಳು ಮಾಡಿ ಹೆಜ್ಜೆ ಇಟ್ಟು ಮುಂದೆ ಹೋಗಿವೆ. ಉಳಿದ ಇನ್ಯಾವ ರಾಜ್ಯಗಳು ಶೇಕಡ 25% ಸೀಟು ಬಗ್ಗೆಯೂ ಇಲ್ಲ, ಉಳಿದ ಯಾವ ವಿಷಯಗಳ ಬಗ್ಗೆಯೂ ಇಲ್ಲ. ಎಂಥದೂ ಇಲ್ಲ. ನಾನು ಅದನ್ನೆಲ್ಲ ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಇದರ ಬಗ್ಗೆ ಸ್ವಲ್ಪ ಮಾತನಾಡ ಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಉತ್ತರ ಮುಗಿಸುತ್ತೇನೆ. ನಂತರ clarification ಸಂದರ್ಭದಲ್ಲಿ ಮಾತನಾಡಿ.

ಉಪಾಧ್ಯಕ್ಷರು : ಅವರು ಉತ್ತರ ಅರ್ಧಕ್ಕೆ ಬಂದಿದ್ದಾರೆ. ಅವರು ಉತ್ತರ ಮುಗಿಸಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಉತ್ತರ ಮುಗಿಸುತ್ತೇನೆ. ನಂತರ ತಾವು ಮಾತನಾಡಿ. ನಿಜವಾಗಿ ತಮಗೆ ಅವಕಾಶ ಕೊಡಬೇಕು, ತಾವು ಮಾತನಾಡಬೇಕು. ನಾನು ಎಲ್ಲರೂ ಇದರ ಬಗ್ಗೆ ಮಾತನಾಡ ಬೇಕೆಂದು ಬಯಸುತ್ತೇನೆ. ನಾನು ಮುಗಿಸಿ ಬಿಡುತ್ತೇನೆ ನಂತರ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ನಾನು ಮಾತನಾಡಿದ ಮೇಲೆ ಉತ್ತರ ಕೊಟ್ಟರೆ ತೊಂದರೆ ಏನು? You are a senior Member.

ಉಪಾಧ್ಯಕ್ಷರು : ಉತ್ತರ ಕೊನೆಯ ಹಂತದಲ್ಲಿದೆ. ನಂತರ ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಮಧ್ಯಾಹ್ನ ಊಟಕ್ಕೆ ಕರೆದಿದ್ದೀರಿ. ಅರ್ಧ ಊಟ ಮಾಡಿ ಮತ್ತೆ ಯಾವಾಗಲೋ ಸಾಯಂಕಾಲ ಅರ್ಧ ಊಟ ಮಾಡಿ ಎಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಮಾನ್ಯ ಶರದ್‌ಪವಾರ್‌ರವರು ಬಂದಿದ್ದರು ಅಲ್ಲಿಗೆ ಮೀಟಿಂಗ್‌ಗೆ ಹೋಗಿದ್ದೆ. ಇಲ್ಲದಿದ್ದರೆ ನಾವು Participate ಮಾಡುತ್ತಿದ್ದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಮಾತನಾಡಬೇಕು, ನಾನು ಮುಗಿಸಿಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಉತ್ತರ ಮುಗಿಸಿದ ಮೇಲೆ ಏನ್ರೀ ಮಾತನಾಡುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಮೇಲೆ ನಿಮ್ಮ ಹತ್ತಿರ ವಿಷಯ ಇದ್ದೇ ಇರುತ್ತದೆ. ಮಾತನಾಡುವುದಕ್ಕೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆ ಮೇಲೆ ನಡೆದಂತಹ ಘಟನೆಗಳನ್ನೆಲ್ಲಾ ನಾನು ಹೇಳಿದೆ. ಆದಾಗ್ಯೂ ಸಹ ನಾವು 50% ಯಶಸ್ಸನ್ನು ಸಾಧಿಸುವುದಕ್ಕೆ ಸಾಧ್ಯವಾಗಿದೆ. ವಿಶೇಷವಾಗಿ ಈ ಕಾಯಿದೆಯ ಮುಖ್ಯ ಆಶಯ ನಮ್ಮ ಪರಿಶಿಷ್ಟ ಜಾತಿ ಪಂಗಡದ ಬಂಧುಗಳಿಗೆ ಅಥವಾ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಂತಹ ಶೈಕ್ಷಣಿಕ ಕ್ಷೇತ್ರಗಳಲ್ಲಿ ಯಾರಿದ್ದಾರೋ ಅವರಿಗೂ ಸಮಾನವಾದ ಶಿಕ್ಷಣವನ್ನು ಕೊಡುವುದಕ್ಕೆ ಕಾರಣವಾಗಬೇಕು ಎನ್ನುವುದು. ನಮಗೆ ನಿಮಗೆ ಗೊತ್ತಿದೆ. ರಾಜ್ಯದಲ್ಲಿ ಮೂರು ರೀತಿಯ ಶಿಕ್ಷಣ ಸಂಸ್ಥೆಗಳಿವೆ. ಒಂದು ಸರ್ಕಾರದ್ದು, ನಮ್ಮ ಸರ್ಕಾರದ ಶಾಲೆಗಳು ಎಲ್ಲಾ ಕಡೆಯೂ ಬಹಳ ಸವಿಸ್ತಾರವಾಗಿವೆ. ಸರ್ಕಾರಿ ಶಾಲೆಗಳಲ್ಲಿ ಅತ್ಯುತ್ತಮವದ ರೀತಿಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿವೆ. ಮಕ್ಕಳ ದಾಖಲಾತಿ, ಮಕ್ಕಳಿಗೆ ಶಿಕ್ಷಣ, ಉಳಿದ ಶೈಕ್ಷಣಿಕ ಚಟುವಟಿಕೆಗಳು ಚೆನ್ನಾಗಿವೆ. ಅಲ್ಲಿಯ ಸೌಲಭ್ಯಗಳು ಇತ್ಯಾದಿಗಳು ಎಲ್ಲವೂ ಚೆನ್ನಾಗಿವೆ. ಎರಡನೆಯದು Aided institutions. Aided institution ಗಳು ಸಹ ನಮ್ಮ ರಾಜ್ಯದಲ್ಲಿ ಸಾಕಷ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿರುವುದು ಇದೆ. ಮೂರನೆಯದು Un-aided institutions. ಈ ರೀತಿ ಮೂರು ಭಾಗಗಳಿವೆ. ಶೇ% 25ರಷ್ಟು ಆರ್ಥಿಕವಾಗಿ ಮತ್ತು ಸಾಮಾಜಿವಾಗಿ ಹಿಂದುಳಿದಂತಹ ವರ್ಗಗಳಿವೆ ಅವರಿಗೆ ಈ ಸಂಸ್ಥೆಗಳಲ್ಲಿಯೂ ಒಂದು ಅವಕಾಶವನ್ನು ಕಲ್ಪಿಸಬೇಕೆಂಬ ಆಶಯ ಏನಿದೆಯೋ ಅದರಂತೆ ನಾವು ಪ್ರಯತ್ನ ಮಾಡುತ್ತಿದ್ದೇವೆ. Aided and unaided ಒಳಗೂ ಸಹ ಶೇ25% ರಷ್ಟು ಪರ್ಸೆಂಟೇಜ್ ಕೊಡಬೇಕು ಎನ್ನುವುದು ಮುಖ್ಯವಾದ ವಿಷಯ. ಉಳಿದ ಅನೇಕ ಮುಖ್ಯವಾದ ವಿಷಯಗಳಿವೆ. ಆದರೆ ಸಮಾಜದಲ್ಲಿ ಚರ್ಚೆಯಾಗುತ್ತಿರುವುದು ಕೇವಲ 25% ಕೊಟ್ಟಿದ್ದಾರೆಯೋ, ಇಲ್ಲವೋ ಎನ್ನುವುದು. ಅಷ್ಟೇ ಅಲ್ಲ, ಇನ್ನೂ ಹತ್ತಾರು ಒಳ್ಳೆಯ ವಿಷಯಗಳು ಇವೆ. ನಾವು ಆ ಸಂಗತಿಗಳ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸುವಂತಹ ಪ್ರಯತ್ನ ಮಾಡಿದ್ದೇವೆ. ಕಳೆದ ಜುಲೈ 5ಕ್ಕೆ ಇರಬಹುದು, ಈ ಜುಲೈ 5ಕ್ಕೆ ಇರಬಹುದು. ಸಾಕಷ್ಟು ಕಿರು ಹೊತ್ತಿಗೆಗಳನ್ನು, ಪರಪತ್ರಗಳನ್ನು ಮಾಡಿ SDMC ಶಾಲೆಗಳಿಗೆ, ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ, ಎಲ್ಲಾ ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿ

ಗಳಿಗೆ ಕೊಟ್ಟು, ಇದು ನಮ್ಮ ಶಿಕ್ಷಣ ಹಕ್ಕು ಕಾಯಿದೆ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಮಾಡಬೇಕಾದ ಕೆಲಸ ಕಾರ್ಯಗಳು ಎಂದು ಹೇಳಿದ್ದೇವೆ. ಎಷ್ಟು ದೂರದಲ್ಲಿ ಶಾಲೆಗಳು ಇರಬೇಕು, ಶಾಲೆಗಳಲ್ಲಿ ಏನೆಲ್ಲ ಮೂಲಭೂತವಾದ ವ್ಯವಸ್ಥೆಗಳು ಇರಬೇಕು, ಅಲ್ಲಿ ಹೇಗೆ ಗುಣಮಟ್ಟದ ಶಿಕ್ಷಣ ಇರುವುದಕ್ಕೆ ಸಾಧ್ಯವಾಗಬೇಕು, ನಮ್ಮ ಶಿಕ್ಷಕರು ಹೇಗಿರಬೇಕು, ಇತ್ಯಾದಿ ಎಲ್ಲಾ ವಿಷಯಗಳ ಬಗ್ಗೆಯೂ ಸಹ ಜವಾಬ್ದಾರಿ ಹಾಗೂ ಕಾಳಜಿ ತೆಗೆದುಕೊಂಡು ಆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇಷ್ಟು ದೊಡ್ಡ ಪ್ರಯತ್ನವನ್ನು ನಾವು ಮಾಡಿದ್ದೇವೆ. ನಮಗೆ ಈ ಸಾರಿ ಸ್ವಲ್ಪ ಕೊರತೆಯಾಗಿದೆ. ನಾನು ಅದನ್ನೂ ಪ್ರಾರಂಭದಲ್ಲಿಯೇ ಒಪ್ಪಿಕೊಂಡಿದ್ದೇನೆ. ಏನು ಕೊರತೆಗಳು ಎಂದರೆ, ನಮ್ಮ ಸರ್ಕಾರಿ ಆದೇಶಗಳು ಯಾವ ಯಾವ ವಿಷಯದಲ್ಲಿ ಬೇಕು ಅವನ್ನೆಲ್ಲಾ ನಾವು ಹೊರಡಿಸಿದ್ದೇವೆ. ಆದೇಶ ಹೊರಡಿಸಿರುವ ಬಗ್ಗೆ ಒಂದು ಜಾಗೃತಿ ಬೇಕಾಗುತ್ತದೆ. Neighbourhood school ಎಂದು ಹೇಳಿದ್ದೇವೆ. Neighbourhood school ಎಂದು ಏನು ಹೇಳಿದ್ದೇವೆ. Neighbourhood school ಎಂದರೆ ನಗರಗಳಲ್ಲಿ ಒಂದು ವಾರ್ಡ್ neighbourhood ಆಗುತ್ತದೆ. ಗ್ರಾಮಾಂತರದಲ್ಲಿ ಒಂದು ಕಿ.ಮೀ.ಗೆ ಒಂದು ಶಾಲೆ ಇತ್ಯಾದಿ ಇದೆ. ಅದೆಲ್ಲಾ neighbourhood ಆಗುತ್ತದೆ. ಗ್ರಾಮಾಂತರದ ಸಮಸ್ಯೆ ಇಲ್ಲ. ಇದನ್ನು ಅರ್ಥೈಸಿಕೊಂಡು ಜಾರಿಗೊಳಿಸುವುದಕ್ಕೆ ರಾಜ್ಯದ ಯಾವುದೇ ಭಾಗಗಳಲ್ಲಿ ಯಾವುದೇ ತೊಂದರೆಗಳಿಲ್ಲ. ಬೆಂಗಳೂರು ಒಂದು ದೊಡ್ಡ ಶೈಕ್ಷಣಿಕ ಕೇಂದ್ರವಾಗಿರುವುದರಿಂದ ಇದನ್ನು ಅರ್ಥೈಸಿಕೊಂಡು ಜಾರಿಗೊಳಿಸುವ ಬಗ್ಗೆ ಬೆಂಗಳೂರಿಗೆ ಇನ್ನು ಸ್ಪಷ್ಟತೆ ಬೇಕಾಗಿರುವುದು. ಇದನ್ನು ಜಾರಿಗೊಳಿಸುವುದಕ್ಕೆ ಎಲ್ಲಾ ಪ್ರತಿಷ್ಠಿತ ಸಂಸ್ಥೆಗಳು ಇಲ್ಲಿಯೇ ಇರುವುದು. ಇವುಗಳನ್ನು neighbourhood school ಎಂದು ಹೇಳಿದ್ದೇವೆ. 6 ರಿಂದ 14ನೇ ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಎಂದು ನಾವು ಹೇಳಿದ್ದೇವೆ. ಆದರೆ ಯಾವ ಶಿಕ್ಷಣ ಸಂಸ್ಥೆಗಳಲ್ಲಿ L.K.G. ಇಂದ ಅಲ್ಲಿಯ ಶೈಕ್ಷಣಿಕ ಚಟುವಟಿಕೆ ಪ್ರಾರಂಭವಾಗುತ್ತದೋ ಅಲ್ಲಿ L.K.G. ಗೆ 25% ಸೀಟು ಕೊಡಬೇಕೆಂದು ನಮ್ಮ ಕಾಯಿದೆ ಇದೆ. ಹಾಗಾಗಿ ಈ ರೀತಿಯ ವಿಷಯಗಳ ಬಗ್ಗೆ ಸ್ಪಷ್ಟತೆ ಯನ್ನು ಮೂಡಿಸುವುದಕ್ಕೆ ನಾವೇನು ಪ್ರಯತ್ನ ಮಾಡಿದ್ದೇವೆ, ಅದು ತಳಮಟ್ಟದಲ್ಲಿ ಹೋಗಿ ಮುಟ್ಟುವುದಕ್ಕೆ ನಮ್ಮ ಪ್ರಯತ್ನಗಳನ್ನು ಮುಂದುವರೆಸಿದ್ದೇವೆ. ಉದಾಹರಣೆಗೆ fee reimburdsement ಇದೆ. ಎಷ್ಟು ಫೀಸ್ ಖರ್ಚಾಗುತ್ತದೆ

ಸುಮಾರು 12,000 ದಷ್ಟು ಖರ್ಚಾದರೆ ಶೇಕಡ 25% ರಷ್ಟು ಮಕ್ಕಳು ಏನು ಬರುತ್ತಾರೆ ಅವರಿಗೆ 12,000 ದಷ್ಟು ಹಣವನ್ನು ನಾವು ಕೊಡಬೇಕಾಗುತ್ತದೆ. ಅದನ್ನು ಹೇಗೆ calculate ಮಾಡಬೇಕು ಎಂದು ಆ ಸಂಸ್ಥೆಗಳಿಗೆ ತಿಳಿಸಿದ್ದೇವೆ.

ಇನ್ನು Minority Institutions, Supreme Court judgementನಲ್ಲಿ minority institutions ಅನ್ನು ಹೊರತುಪಡಿಸಿ ಈ ಕಾಯಿದೆಯನ್ನು ಜಾರಿಗೊಳಿಸಬೇಕೆಂದು ಹೇಳಿತು. ಹಾಗಾದರೆ ಯಾವುದು minority institutions? Religious or language institutions ಏನಿದೆಯೋ ಅದನ್ನು ನಾವು ಶೈಕ್ಷಣಿಕವಾಗಿ ಹೇಗೆ ಅರ್ಥೈಸಬೇಕು? ನಿಮಗೆ ಗೊತ್ತಿದೆ, ನಾವು Law Department, ಸಮಾಜ ಕಲ್ಯಾಣ ಇಲಾಖೆ ಜೊತೆ, ಸರ್ಕಾರದ ವ್ಯವಸ್ಥೆಯಲ್ಲಿ ಎಲ್ಲಾ ಇಲಾಖೆಗಳ ಜೊತೆಯಲ್ಲಿ ಸಮನ್ವಯತೆ ಸಾಧಿಸಿಕೊಂಡು ನಾವು ಎಷ್ಟು ವೇಗವಾಗಿ ಅಗತ್ಯವಿರುವಂತಹ ಎಲ್ಲಾ ಸುತ್ತೋಲೆಗಳನ್ನು ಹೊರಡಿಸಿ, ಒಂದು ಸ್ಪಷ್ಟತೆ ಬರುವಂತಹ ರೀತಿಯಲ್ಲಿ ಮಾಡಿದ್ದೇವೆ. ನಾನು ಸ್ವತಃ ಖಾಸಗಿ ಆಡಳಿತ ಮಂಡಲಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿದ್ದೇನೆ. ಅವರು ತಾತ್ವಿಕವಾಗಿ ಇದನ್ನು ಒಪ್ಪಿಕೊಂಡಿದ್ದಾರೆ ಮತ್ತು ಜಾರಿಗೊಳಿಸುವುದಕ್ಕೆ ತಮ್ಮ ಕಾಳಜಿಯನ್ನು ತೋರಿಸಿದ್ದಾರೆ. ಹಾಗಾಗಿ ನಮಗೆ ಶೇಕಡ 50 ರಷ್ಟು ಯಶಸ್ವಿಯಾಗುವುದಕ್ಕೆ ಕಾರಣವಾಗಿದೆ. ಈ ರೀತಿ ನಾವೆಲ್ಲ ಒಟ್ಟಾಗಿ ಪ್ರಯತ್ನವನ್ನು ಮಾಡಿದ್ದೇವೆ. ಅದರಿಂದ ಒಳ್ಳೆಯ ಕೆಲಸವಾಗಿದೆ. ಮುಂದಿನ ವರ್ಷ ನಿಶ್ಚಿತವಾಗಿ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಸಂದರ್ಭದಲ್ಲಿ ತಾವು ಬಿಸಿಯೂಟದ ಬಗ್ಗೆ, ಸೌಲಭ್ಯಗಳ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ತಾವು ಮಾತನಾಡುವಾಗ ಉಲ್ಲೇಖಿಸಿದ್ದೀರಿ. ಅದರಲ್ಲಿ ಯಾವುದೂ ತೊಂದರೆ ಕೊರತೆಗಳು ಆಗದಿರುವ ಹಾಗೆ ನಾವು ಈಗಾಗಲೇ ನೋಡಿಕೊಂಡಿದ್ದೇವೆ. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನಿಂದ ಹಿಡಿದು ಪ್ರತಿ ಹಂತದಲ್ಲೂ ಸಹ ಸರ್ಕಾರದ ಜೊತೆಯಲ್ಲಿ ಮಾನಿಟರ್ ಮಾಡುವುದಕ್ಕೆ ಅವರೂ ಸಹ ಸಹಕಾರವನ್ನು ಕೊಟ್ಟಿದ್ದಾರೆ. ಕೇಸರಿಕರಣದ ವಿಷಯದಲ್ಲಿ ನೀವು ಉಲ್ಲೇಖ ಮಾಡಿದ್ದೀರಿ. ಕೇಸರಿಕರಣ ಎಂದರೆ ಏನು ಎಂದು ಕೆಲವು ಮಾಧ್ಯಮದವರು ಚರ್ಚೆ ಮಾಡಿದ್ದಾರೆ. ಆ ಶಬ್ದ ಯಾರಿಗೆ ಹೇಗೆ ಬೇಕೋ ಹಾಗೆ ಬಳಸಿ ಕೊಳ್ಳುವ ಒಂದು ಶಬ್ಧವಾಗಬಾರದು. ನನ್ನ ದೃಷ್ಟಿಕೋನದಲ್ಲಿ ಕೇಸರಿಕರಣ ಎಂದರೆ ನಾವು ಭಾರತೀಯರಾಗಿ ನಮ್ಮ ರಾಷ್ಟ್ರೀಯತೆ ಏನಿದೆ, ನಮ್ಮ

ಸಂಸ್ಕೃತಿಯ ಅನೇಕ ವಿಶೇಷತೆಗಳು, ಮಹತ್ವಗಳು ಏನಿದೆ, ಸಾಧನೆಗಳು ಏನಿದೆ, ಆದರ್ಶಗಳು ಏನಿದೆ. . . . .

ಶ್ರೀ ಎಂ. ಶ್ರೀನಿವಾಸ್ : ಆ ಕಲ್ಪನೆಯಲ್ಲಿ ಆಗಬೇಕು, ಸಂಕುಚಿತ ಭಾವನೆಯಲ್ಲಿ ಆಗಬಾರದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲ, ತಾವು ಹಿರಿಯರಿದ್ದೀರಿ, ನಾವು ಭಾರತೀಯರಾಗಿ ನಮ್ಮ ಸಂವಿಧಾನವನ್ನು ಎಷ್ಟೊಂದು ಒಳ್ಳೆಯ ರೀತಿಯಲ್ಲಿ ಸ್ವೀಕರಿಸಿಕೊಂಡಿದ್ದೇವೆಂದು ಗೊತ್ತಿದೆ. ಸಂವಿಧಾನದ ಆಶಯಗಳು ಏನು ಎಂದು ಗೊತ್ತಿದೆ. ನಮ್ಮ ಐತಿಹಾಸ, ನಮ್ಮ ಪರಂಪರೆ, ನಮ್ಮ ಸಾಂಸ್ಕೃತಿಕ ಹಿನ್ನೆಲೆ, ನಾವು ವಸುಧೈವ ಕುಟುಂಬ ಎಂದು ಹೇಳಿದವರು. ನವು ಏಕೆ ಸಣ್ಣವರು ಆಗುತ್ತೇವೆ? ಎಲ್ಲಿ ಆಗುತ್ತೇವೆ? ನಾವು ಯಾವ ಸಂದರ್ಭದಲ್ಲಿ ಆಗುವುದಕ್ಕೆ ಸಾಧ್ಯವೇ ಇಲ್ಲ, ಆಗಬಾರದು. ಆ ರೀತಿಯಲ್ಲಿ ಏನಾದರೂ ಚರ್ಚೆ, ವಿಚಾರಗಳು ನಡೆಯುತ್ತಿದ್ದರೆ ನಾವೆಲ್ಲರೂ ಸೇರಿ ಅದನ್ನು ವಿರೋಧಿಸಬೇಕು. ನಾವು ಆ ವಿಶಾಲ ದೃಷ್ಟಿಕೋನದಲ್ಲಿ ನಮ್ಮನ್ನು ನಾವು ಬೆಳೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಆ ರೀತಿಯ ಅನೇಕ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಮುಕ್ತರಾಗಿದ್ದೇವೆ. ನಾವು ಯಾವುದೇ ರೀತಿಯ **hidden agenda** ಇಟ್ಟುಕೊಳ್ಳುವುದಕ್ಕೆ ಬಯಸುವುದಿಲ್ಲ. ನಾವು ಭಾರತೀಯರಾಗಿ ಏನು ಮಾಡಬೇಕು? ಈ ದೇಶದವರಾಗಿ ಭಾರತದ ರಾಷ್ಟ್ರೀಯತೆ ವಿಷಯಗಳನ್ನು ಹೇಗೆ ನಮ್ಮ ಮಕ್ಕಳಿಗೆ ತಿಳಿಸಬೇಕು ಎನ್ನುವುದರ ಬಗ್ಗೆ ನಾವು ನಂಬಿಕೆ ಇಟ್ಟುಕೊಂಡಿರುವವರು. ಈ ರೀತಿಯ ಎಲ್ಲಾ ಸಂಗತಿಗಳು ಆಗಿವೆ.

ತಾವು ಈಗಾಗಲೇ ಆಂಗ್ಲ ಮಾಧ್ಯಮದ ಬಗ್ಗೆ ತಾವೆಲ್ಲರೂ ಉಲ್ಲೇಖಿಸಿದ್ದೀರಿ. ಆಂಗ್ಲ ಮಾಧ್ಯಮದ ಬಗ್ಗೆ ಈಗಾಗಲೇ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಒಂದನೇ ತರಗತಿಯಿಂದ ಇಂಗ್ಲೀಷ್ ಅನ್ನು ಒಂದು ವಿಷಯವನ್ನು ಆಗಿ ಕಲಿಸುವುದಕ್ಕೆ ನಾವೇ ಪ್ರಾರಂಭಿಸಿದ್ದೇವೆ. 1993–94ರಲ್ಲಿ ಭಾಷಾ ನೀತಿಯಾದಾಗ 6ನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಕೊಡಬಹುದು ಎಂದು ಆಗಿನಿಂದ ಇರುವುದೇ ಮುಂದುವರೆದಿದೆ. ನಾವು ಇನ್ನೇನು ಹೊಸದು ಮಾಡಿಲ್ಲ. ಭಾಷಾ ನೀತಿ ಉಲ್ಲಂಘನೆಯಾಗಿಲ್ಲ. ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಸಬೇಕೆನ್ನುವ ಪಾಲಕರ ಬೇಡಿಕೆಯಂತೆ ಅದನ್ನೂ ನಾವು ಈಡೇರಿಸಿದ್ದೇವೆ. ಹಾಗಾಗಿ ನಮ್ಮ ಮಕ್ಕಳು ಸಮಾಜದ ಎಲ್ಲಾ ಸವಾಲುಗಳನ್ನು ಎದುರಿಸುವುದಕ್ಕೆ, ಅವರು ಜೀವನವನ್ನು ವಿಶ್ವಾಸದಿಂದ ನಡೆಸುವುದಕ್ಕೆ, ಯಾವ ಭಾಷೆಗಳ, ಯಾವ್ಯಾವ ರೀತಿಯ

ಸೌಲಭ್ಯಗಳ ಅಗತ್ಯವಿದೆ ಕೊಡುತ್ತೇವೆ. Computer ಶಿಕ್ಷಣ, ಇವತ್ತು ನಮ್ಮ ಸರ್ಕಾರದ ಆದ್ಯತೆ ಇದೆ. ಕಂಪ್ಯೂಟರ್ ಶಿಕ್ಷಣ ಕೊಡುವುದಕ್ಕೆ ನಾವು ಆದ್ಯತೆ ಕೊಟ್ಟಿದ್ದೇವೆ. ಏಕೆಂದರೆ ಅದು ಇವತ್ತಿನ ದಿನದ ಅಗತ್ಯತೆ. ಹಾಗಾಗಿ ಈ ರೀತಿಯ ಪ್ರಯತ್ನಗಳು ಮಾಡಿದ್ದೇವೆ. ಆ ಪ್ರಯತ್ನಗಳನ್ನು ಮುಂದುವರೆಸುತ್ತೇವೆ. ಮಾನ್ಯ ಶ್ರೀನಿವಾಸ್ ಪ್ರಸಾದ್, ತಾವು ಹೇಳಿರುವುದನ್ನು ಗುರುತು ಹಾಕಿ ಕೊಂಡಿದ್ದೇವೆ. ತಾವು ಹೇಳಿರುವುದು ಸರಿಯಾಗಿದೆ, ಒಳ್ಳೆಯ ಅಂಶ ಇದೆ. ತಮ್ಮ ಅನುಭವದಿಂದ ಈ ಮಾತನ್ನು ಹೇಳಿದ್ದೀರಿ. ಇಂಗ್ಲೀಷ್ ಕಲಿಸುವುದಕ್ಕೆ ಮಕ್ಕಳಿಗೆ ಅವಕಾಶ ಕೊಟ್ಟಿದ್ದೀರಿ ಸರಿ, ಆದರೆ ಇಂಗ್ಲೀಷ್ ಕಲಿಸುವಂತಹ ಶಿಕ್ಷಕರನ್ನು ತರಬೇತಿಗೊಳಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾವು British Council ಅವರ ಜೊತೆ ಕಳೆದ ಎರಡು ವರ್ಷಗಳಿಂದ ನಮ್ಮ ಶಿಕ್ಷಕರಿಗೆ ಇಂಗ್ಲೀಷ್ ಅನ್ನು ಹೇಗೆ ಬೋಧನೆ ಮಾಡಬೇಕೆನ್ನುವುದಕ್ಕೆ ತರಬೇತಿ ಯನ್ನು ಕೊಟ್ಟಿದ್ದೇವೆ. ಬಹಳ ದೊಡ್ಡ ಪ್ರಮಾಣದಲ್ಲಿ ಒಂದೊಂದು ವರ್ಷ ಹತ್ತು-ಹದಿನೈದು ಸಾವಿರಕ್ಕಿಂತ ಹೆಚ್ಚು ಶಿಕ್ಷಕರಿಗೆ ತರಬೇತಿಯನ್ನು ಕೊಟ್ಟಿದ್ದೇವೆ. ಅದರ ಅಂಕಿ ಸಂಖ್ಯೆ ಇಲ್ಲ. ಇದನ್ನು ಮನಗೊಂಡಿರುವಂತಹ ಸರ್ಕಾರ ಬೆಂಗಳೂರಿನಲ್ಲಿ ಇರುವ British Council ನ Regional Institute of Languages ಜೊತೆ ಒಪ್ಪಂದ ಮಾಡಿಕೊಂಡು ಇಂಗ್ಲೀಷ್ ಬಗ್ಗೆ ಚೆನ್ನಾಗಿ ತರಬೇತಿಗೊಳಿಸಿ ನಮ್ಮ ಶಿಕ್ಷಕರಿಂದ ಕಲಿಸುವ ಪ್ರಯತ್ನ ಮಾಡಿದ್ದೇವೆ. ತಾವು ಹೇಳಿರುವಂತಹ ಎಲ್ಲಾ ಸಂಗತಿಗಳ ಬಗ್ಗೆ ಗಮನಿ ಸಿದ್ದೇವೆ. ನಾವು ಆ ಪ್ರಯತ್ನವನ್ನು ಮಾಡುತ್ತೇವೆ. ಆದರೆ ಇದು ವಿಳಂಬ ವಾಗುತ್ತಿದೆ ಎನ್ನುವುದಕ್ಕೆ ನಾನು ಈಗಾಗಲೇ ಕಾರಣಗಳನ್ನು ಕೊಟ್ಟಿದ್ದೇನೆ. ಬಹಳ ಮುಖ್ಯವಾಗಿ ತಾವು ಉಲ್ಲೇಖಿಸಿರುವಂತಹ ವಿಚಾರದಲ್ಲಿ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಯಾವುದೇ ಖಾಸಗಿ ಆಡಳಿತ ಮಂಡಳಿಗಳು ಈ ಕಾಯಿದೆಯನ್ನು ಜಾರಿಗೊಳಿಸುವುದಕ್ಕೆ ತಾತ್ವಿಕ ವಾಗಿ ನಮ್ಮೆಲ್ಲರ ಜೊತೆ ಎಲ್ಲಾ ಸಭೆ ಕಾರ್ಯಕ್ರಮಗಳಲ್ಲಿ ಒಪ್ಪಿಕೊಂಡಿದೆ. ಆದಾಗ್ಯೂ KUSMA ಅಧ್ಯಕ್ಷರು ಹೇಳಿರುವಂತಹ ಮಾತು ಇರಬಹುದು ಅಥವಾ ಕೆಲವು ಸಂಸ್ಥೆಗಳಲ್ಲಿ ನಡೆಯುತ್ತಿರುವಂತಹ ಘಟನೆಗಳ ಬಗ್ಗೆ ಸರ್ಕಾರ ಜಾಗೃತವಾಗಿದೆ, ಜವಾಬ್ದಾರಿಯುತವಾಗಿದೆ. ನಾವು ಕ್ರಮ ತೆಗೆದು ಕೊಂಡಿದ್ದೇವೆ. ನಾವು ಸರ್ಕಾರದಲ್ಲಿ ಯಾವುದೇ ರೀತಿಯಲ್ಲಿ ವಿದ್ಯಾರ್ಥಿಗಳಲ್ಲಿ ತಾರತಮ್ಯವಾಗುವುದಕ್ಕೆ ಬಿಡುವುದಿಲ್ಲ. ನಾನು ಖಾಸಗಿ ಆಡಳಿತ ಮಂಡಳಿ

ಗಳಿಗೆ ಈ ಸದನದ ಮೂಲಕ ಬಹಳ ಜವಾಬ್ದಾರಿಯುತ ವಾದಂತಹ ಎಚ್ಚರಿಕೆ ಮಾತನ್ನು ಹೇಳುತ್ತಿದ್ದೇನೆ. ಈ ಶಿಕ್ಷಣ ಹಕ್ಕು ಕಾಯಿದೆಯನ್ನು ಅವರು ಜಾರಿಗೊಳಿಸಲೇ ಬೇಕು. ಜಾರಿಗೊಳಿಸುವಂತಹ ಎಲ್ಲಾ ಸಹಕಾರವನ್ನು ಅವರು ಕೊಟ್ಟಿದ್ದಾರೆ. ಅವರು ಜಾರಿಗೊಳಿಸಬೇಕು, ಮುಂದಿನ ವರ್ಷದಿಂದ ಇನ್ನಷ್ಟು ಹೆಚ್ಚು ಯಶಸ್ವಿಯಾಗಿ ಅದು ಜಾರಿಯಾಗಬೇಕು. ಯಾವುದೇ ಕಾರಣಕ್ಕೂ ಸಹ ನಮ್ಮ ಮಕ್ಕಳಿಗೆ ತಾರತಮ್ಯ ಮಾಡುವುದನ್ನು ನಮ್ಮ ಸರ್ಕಾರ ಒಪ್ಪುವುದಿಲ್ಲ. ಈಗಾಗಲೇ ಆಗಿರುವಂತಹ Oxford ಶಾಲೆಯ ಒಂದು ವಿಷಯವನ್ನು ನೋಡಿದಾಗ, ಇಡೀ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗಿವೆ ಎಂದು ಅಲ್ಲ. ಅದರ ಬಗ್ಗೆ ಸಾಕಷ್ಟು ತನಿಖೆಯನ್ನು ಮಾಡಿ, ವರದಿಯನ್ನು ತರಿಸಿಕೊಂಡು, ಏನೆಲ್ಲಾ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ತೆಗೆದುಕೊಂಡಿದ್ದೇವೆ. ಆ ಒಂದು ಘಟನೆ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ಪಡೆದುಕೊಂಡಿದೆ. ಅದು ವಾಸ್ತವಿಕವಾಗಿ ನಡೆದಿರುವುದಕ್ಕೂ, ಪ್ರಚಾರಗೊಂಡಿರುವಂತಹ ರೀತಿಗೂ ನಿಶ್ಚಿತವಾಗಿ ಬಹಳ ಅಜ-ಗಜಾಂತರ ವ್ಯತ್ಯಾಸ ಇದ್ದೇ ಇದೆ. Management ನವರಾಗಲಿ, ಶಿಕ್ಷಕರಾಗಲಿ ಮಾಡಿರುವಂತಹ ತಾರತಮ್ಯದ ಧೋರಣೆ ಅಲ್ಲ. ಅಲ್ಲಿ ನಡೆದಿರುವಂತಹ ತಾರತಮ್ಯದ ಧೋರಣೆ ಎಂದು ಅಲ್ಲ. ಅಲ್ಲಿ craft class ನಲ್ಲಿ ಮಕ್ಕಳ-ಮಕ್ಕಳ ಮಧ್ಯೆ ಆಗಿರುವಂತಹ ಘಟನೆ. ಇದು ಎಲ್ಲರಿಗೂ ಗೊತ್ತಿರುವಂತಹ ಸತ್ಯ. ಆದರೆ ಇದು ನಮಗೆ ಎಚ್ಚರಿಕೆ ಪಾಠವಾಯಿತು. ಖಾಸಗಿ ಆಡಳಿತ ಮಂಡಳಿಗಳಿಗೆ ಒಂದು ಸಂದೇಶ ಕಳುಹಿಸುವುದಕ್ಕೆ ಈ ಸಂದರ್ಭ ಅವಕಾಶವಾಯಿತು. ನಾವು ಅವರಿಗೆ ಹಾಗೆ ಮಾಡಬಾರದು ಎಂದು ಹೇಳಿದ್ದೇವೆ. ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆ ಮತ್ತು ಮಾಡುವುದಿಲ್ಲವೆಂದು ಹೇಳಿದ್ದಾರೆ. ಯಾವುದಾದರೂ ಸಂಸ್ಥೆ ಆ ರೀತಿ ಮಾಡಿದ್ದು ಗಮನಕ್ಕೆ ಬಂದರೆ ಅಥವಾ ಯಾರೇ ಆದರೂ ಕೂಡ ನಮ್ಮ ಗಮನಕ್ಕೆ ತಂದರೆ ನಾವು ಯಾವುದೇ ಕಾರಣಕ್ಕೂ ಅಂತಹ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ ಎನ್ನುವಂತಹ ಮಾತನ್ನು ಸಹ ಹೇಳುವುದಕ್ಕೆ ಬಯಸುತ್ತಿದೇನೆ. ನಾವು ಬದ್ಧತೆಯಿಂದ ಇದನ್ನು ಜಾರಿಗೆಗೊಳಿಸುತ್ತಿದ್ದೇವೆ. ಇದನ್ನು ನಾವು ಬದ್ಧತೆಯಿಂದ ಮುಂದುವರೆಸುತ್ತೇವೆ. ನಮ್ಮ ಮಕ್ಕಳು ಶಿಕ್ಷಣವಂತರಾಗಬೇಕು. ನಮ್ಮ ಮಕ್ಕಳು ಬಾಲ ಕಾರ್ಮಿಕರಾಗಬಾರದು. ನಮ್ಮ ಮಕ್ಕಳು ವಿವಿಧ ಹಂತದಲ್ಲಿ ಶಿಕ್ಷಣವನ್ನು ಬಿಡುವಂತಹ ಸ್ಥಿತಿ ಬರಬಾರದು

ಎನ್ನುವಂತಹ ಕಾಳಜಿ ಮತ್ತು ಜವಾಬ್ದಾರಿ ಸರ್ಕಾರಕ್ಕೆ ಇದೆ. ಹಾಗಾಗಿ ನಮ್ಮ ಸರ್ಕಾರದಲ್ಲಿ ಶಿಕ್ಷಣ ಕ್ಷೇತ್ರ ಆದ್ಯತೆ ಕ್ಷೇತ್ರವಾಗಿದೆ. ಹಾಗಾಗಿ 12,500 ಕೋಟಿ ರೂಪಾಯಿ ನನ್ನ ಬಜೆಟ್ ಇದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಶಿಕ್ಷಕರ ಎಲ್ಲಾ ರೀತಿಯ ಅಗತ್ಯತೆಗಳನ್ನು ಪೂರೈಸಿಕೊಡುತ್ತಿದೆ. ಶಿಕ್ಷಕರ ಮತ್ತು ಸೌಲಭ್ಯಗಳ ಕೊರತೆಯಾಗದಿರುವಂತೆ ಎಲ್ಲಾ ರೀತಿಯ ಜವಾಬ್ದಾರಿಗಳನ್ನು ನಾವು ನಿರ್ವಹಿಸುತ್ತಿದ್ದೇವೆ. ಅದಕ್ಕೆ ಬೇಕಾದಂತಹ ಸಲಹೆ ಸೂಚನೆಗಳನ್ನು ತಾವೂ ಸಹ ಕೊಟ್ಟಿದ್ದೀರಿ. ನಾವು ಆ ಸಲಹೆ ಸೂಚನೆಗಳನ್ನು ಸಹ ಗೌರವಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುವುದೇನೆಂದರೆ ಕೇಂದ್ರ ಸರ್ಕಾರ ಈ ಸಂದರ್ಭದಲ್ಲಿ ರಾಜ್ಯಗಳ ಸಹಾಯಕ್ಕೆ ಬರಬೇಕು. ಅದು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳ ಸಹಾಯಕ್ಕೆ ಬರಬೇಕು. ನಾವು ಇದನ್ನು ದೇಶದ ಶಿಕ್ಷಣ ಸಚಿವರ ಸಭೆಗಳಲ್ಲಿ ಸ್ಪಷ್ಟವಾದಂತಹ ರೀತಿಯಲ್ಲಿ ಹೇಳಿದ್ದೇವೆ. ನಿಮಗೆ ಗೊತ್ತಿದೆ, ನಾನು ಹಿಂದೆ ಹೋಗುವುದಿಲ್ಲ. ಈ ಕಾಯಿದೆ ತರುವುದಕ್ಕಿಂತ ಮೊದಲು ರಾಜ್ಯ ಸರ್ಕಾರದ ಜೊತೆಗೆ ಎಷ್ಟು ಚರ್ಚಿಸಿದರೋ, ಇಲ್ಲವೋ ಎನ್ನುವ ವಿಚಾರಕ್ಕೆ ಹೋಗುವುದಿಲ್ಲ. ಈಗ ಕಾಯಿದೆ ಆಗಿದೆ, ಅದನ್ನು ಜಾರಿಗೊಳಿಸಬೇಕು. ನಾವು ಕಾಯಿದೆಯನ್ನು ಜಾರಿಗೊಳಿಸುವಾಗ ಸಾರ್ವಜನಿಕರ ಅಹವಾಲುಗಳನ್ನು ಕೇಳಿದ್ದೇವೆ. ಸುಮಾರು 2–3 ಸಾವಿರಕ್ಕಿಂತ ಹೆಚ್ಚು ಸಾರ್ವಜನಿಕರ ಅಹವಾಲುಗಳು ಬಂದಿದ್ದವು. ಬೇರೆ ಬೇರೆ ವಿಭಾಗಗಳಿಗೆ ಹೋಗಿ ಒಂದು ಜಾಗೃತಿ ಸಭೆಯನ್ನು ಮಾಡಿದೆವು. RTE ಈ ರೀತಿ ಬರುತ್ತಿದೆ, ನಾವು draft rule ಮಾಡುತ್ತಿದ್ದೇವೆ, ನಿಮ್ಮ ಸಲಹೆ ಸೂಚನೆಗಳನ್ನು ಕೊಡಿ ಎಂದು ಜಾಗೃತಿ ಮೂಡಿಸುವಂತಹ ಪ್ರಯತ್ನ ಮಾಡಿದ್ದೇವೆ. ಅಹವಾಲುಗಳನ್ನು Scrutiny ಮಾಡಿ, ಅದರಲ್ಲಿರುವಂತಹ ಒಳ್ಳೆಯ ಅಂಶಗಳನ್ನು ಸೇರಿಸಿಕೊಂಡಿದ್ದೇವೆ. ಆದರೆ ಕೇಂದ್ರ ಸರ್ಕಾರ ಆ ಸಂದರ್ಭದಲ್ಲಿ ಮಾಡಬೇಕಾಗಿರುವುದನ್ನೆಲ್ಲ ಮಾಡಲಿಲ್ಲ. ಬಿಡಿ, ಅದೆಲ್ಲಾ ಮುಗಿದು ಬಹಳ ಮುಂದೆ ಬಂದಿದ್ದೇವೆ. ಈಗಲಾದರೂ ಎರಡು ವಿಷಯವನ್ನು ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ. RTE ಜಾರಿಗೊಳಿಸುವಾಗ ಶೇಕಡ 25 ರಷ್ಟು ವಿದ್ಯಾರ್ಥಿಗಳ fees ಹಣವನ್ನು ಖಾಸಗಿ ವಿದ್ಯಾಸಂಸ್ಥೆಗಳಿಗೆ ನಾವು ಭರಿಸಬೇಕು, reimbursement ಮಾಡಬೇಕು, ಆ ಹಣವನ್ನು ಕೇವಲ ರಾಜ್ಯ ಸರ್ಕಾರ ತುಂಬಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಈ ದೇಶದಲ್ಲಿರುವಂತಹ ಎಲ್ಲಾ ರಾಜ್ಯಗಳ

ಕೂಗು. ಹಾಗಾಗಿ ಕೇಂದ್ರ ಸರ್ಕಾರ ಕೂಡ ಅವರ ಭಾಗ ಏನು ಎಂದು ಹೇಳಬೇಕು. ಈಗ ಅವರು ಏನು ಹೇಳುತ್ತಾರೆ? ನಾವು ಸರ್ವ ಶಿಕ್ಷಣ ಅಭಿಯಾನದಲ್ಲಿ 65:35 ಇದೆಯಲ್ಲ ಅದೇ ರೀತಿಯಲ್ಲಿ RTE ಯನ್ನು ಜಾರಿಗೊಳಿಸುವುದಕ್ಕೆ ನಾವು ಸಹಕರಿಸುತ್ತೇವೆಂದು ಹೇಳುತ್ತಾರೆ. ಆದರೆ ನಮಗೆ ಈ fees reimbursement ನಲ್ಲಿ ಅಥವಾ RTE ಅನ್ನು ಜಾರಿಗೊಳಿಸುವಾಗ ಬರಬಹುದಾದಂತಹ ಮೂಲಭೂತ ಅಗತ್ಯತೆಗಳು, ಶಿಕ್ಷಕರ ಕೊರತೆಗಳನ್ನು ತುಂಬಿಕೊಡುವ ವಿಷಯಗಳಲ್ಲಿ ಅಥವಾ ಗುಣಮಟ್ಟದ ಶಿಕ್ಷಣವನ್ನು ಕೊಡುವಾಗ ಬೇಕಾದಂತಹ ಸೌಲಭ್ಯವನ್ನು ನಾವು ರಚಿಸುವಂತಹ ಸಂದರ್ಭದಲ್ಲಿ ನಮಗೆ ಏನು ಹಣಕಾಸಿನ ಭಾರ ಬರುತ್ತದೆ, ನಮ್ಮ ಹತ್ತಿರ ಲೆಕ್ಕ ಇದೆ. ನಮಗೆ ಮುಂದಿನ ದಿನಗಳಲ್ಲಿ ಸುಮಾರು ಸಾವಿರ ಕೋಟಿ ರೂಪಾಯಿ ಹತ್ತಿರದ ತನಕ ಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರ ಶೇಕಡ 25 ರಷ್ಟು ವಿದ್ಯಾರ್ಥಿಗಳ fees ಭರಿಸಿಕೊಳ್ಳುವುದಕ್ಕೆ ನಮಗೆ ಈ ವರ್ಷ ಅಷ್ಟು ತೊಂದರೆಯಾಗಲಿಕ್ಕಿಲ್ಲ. LKG and 1st standard ನಲ್ಲಿ ಮಾತ್ರ 25%. ಮುಂದಿನ ವರ್ಷಗಳಲ್ಲಿ ಮುಂದಿನ ತರಗತಿಗಳಿಗೆ ಮುಂದಕ್ಕೆ ಹೋಗುತ್ತಾ ಬರುತ್ತದೆ. ಮುಂದಿನ 5–10 ವರ್ಷಗಳಲ್ಲಿ 10ನೇ ತರಗತಿ ತನಕ ಶೇಕಡ 25 ರಷ್ಟು ವಿದ್ಯಾರ್ಥಿಗಳ fees reimbursement ಮಾಡಬೇಕೆಂದರೆ ನಮಗೆ ಸಾವಿರಾರು ಕೋಟಿ ರೂಪಾಯಿ ಹಣದ ಅಗತ್ಯ ಇದೆ. ಕೇಂದ್ರ ಸರ್ಕಾರ ತಮ್ಮ ಮುಂದಿನ 12th plan ನಲ್ಲಿರಬಹುದು ಬೇರೆ ಬೇರೆ ಸಂದರ್ಭದಲ್ಲಿರಬಹುದು, ನಮ್ಮ ರಾಜ್ಯಗಳ ಸಹಕಾರಕ್ಕೆ ಈ ಕಾಯಿದೆಯನ್ನು ಜಾರಿಗೊಳಿಸುವುದಕ್ಕೆ ಹೇಗೆ ತನ್ನ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಮುಂದಾಗಿದೆ ಎಂದು ತಿಳಿಸಬೇಕು ಎನ್ನುವುದನ್ನು ನಾವು ಬಲವಾಗಿ ಹೇಳಿದ್ದೇವೆ. ಇದರ ಜೊತೆಗೆ ಇನ್ನೊಂದು ಮುಖ್ಯವಾಗಿ ಮಾನ್ಯ ಮಹದೇವಪ್ಪನವರು ಹಾಗೂ ಮಾನ್ಯ ನರೇಂದ್ರಬಾಬುರವರು ಉಲ್ಲೇಖಿಸಿರುವಂಥಾದ್ದರ ಬಗ್ಗೆ ಹೇಳುವುದಾದರೆ, 6ನೇ ವಯಸ್ಸಿ ನಿಂದ 16ನೇ ವಯಸ್ಸಿನವರೆಗೆ ಮಾತ್ರ ಕಡ್ಡಾಯ ಶಿಕ್ಷಣ ಎಂದು ಅಲ್ಲ, ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. 6ನೇ ವಯಸ್ಸಿನಿಂದ 18ನೇ ವಯಸ್ಸಿನವರೆಗೆ ಕಡ್ಡಾಯ ಶಿಕ್ಷಣವಾಗಬೇಕು. ಮಕ್ಕಳು P.U.C. ಓದುವರೆಗೂ ಕಡ್ಡಾಯ ಶಿಕ್ಷಣವಾಗಬೇಕೆಂದು ನಾವು ಬಲವಾಗಿ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ. ನಾವು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ. 6ನೇ ವಯಸ್ಸಿನಿಂದ 18ನೇ ವರ್ಷದವರೆಗೂ

ಕಡ್ಡಾಯ ಶಿಕ್ಷಣವಾಗಬೇಕು. ಎಸ್.ಎಸ್. ಎಲ್.ಸಿ, ಪಿ.ಯು.ಸಿ., ಯವರೆಗೂ ಆಗಬೇಕೆಂಬ ಮಾತನ್ನು ಬಲವಾಗಿ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ. ಆ ರೀತಿ ಕಾಯಿದೆಯಲ್ಲಿ ಬರಬೇಕೆಂದು ಹೇಳಿದ್ದೇವೆ. ನಾವು ಆ ರೀತಿ ತಿದ್ದುಪಡಿ ಮಾಡಿ ಕೊಡ ಬೇಕೆಂಬ ಮಾತನ್ನು ಸಹ ಬಲವಾಗಿ ಹೇಳಿದ್ದೇವೆ. ನಾನು ಈ ಎಲ್ಲಾ ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಉಳಿದಂತೆ ಅನೇಕ ಸಂಗತಿಗಳು ಉಲ್ಲೇಖವಾಗಿದೆ. ಆ ಎಲ್ಲಾ ಉಲ್ಲೇಖದ ಸಂಗತಿಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅದನ್ನು ಜಾರಿಗೊಳಿಸುವ ಪ್ರಯತ್ನವನ್ನು ಮಾಡುತ್ತದೆ. ಇದನ್ನು ನಿಶ್ವಿತವಾಗಿ ಜಾರಿಗೊಳಿಸುವ ಪ್ರಯತ್ನವನ್ನು ಮಾಡುತ್ತೇವೆ. ತಾವೆಲ್ಲರೂ ಸಹ ಈ ಕಾಯಿದೆಯನ್ನು ಜಾರಿಗೊಳಿಸುತ್ತಿರುವಾಗ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಇದು ಹೇಗೆ ಜಾರಿಗೊಳ್ಳುತ್ತಿದೆ, ಅಲ್ಲಿ ಬರುವಂಥ ಕಷ್ಟಗಳು, ತೊಂದರೆಗಳು, ತೊಡಕುಗಳು ಏನೆಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ನಿಶ್ಚಿತವಾಗಿ ನಾವು ನಮ್ಮ ಎಲ್ಲಾ ಇಚ್ಛಾಶಕ್ತಿಯನ್ನು ಬಳಸಿ, ಅದನ್ನು ಬಗೆಹರಿಸಿ ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. ಇದಕ್ಕೆ ಇನ್ನಷ್ಟು ಪ್ರಚಾರ ಪಡೆಯುವುದಕ್ಕೆ ಅವಕಾಶವಾಗಬೇಕು. ಅದಕ್ಕಾಗಿ ಹೊಸದಾಗಿ ಎರಡು ಸಂಗತಿಗಳನ್ನು ಮಾಡುತ್ತಿದ್ದೇವೆ. ನಾವು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಪ್ರಾರಂಭ ಮಾಡಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆಯಲ್ಲಿ ನಮ್ಮ ಅಧಿಕಾರಿಗಳು ಈಗಾಗಲೇ ಸಭೆಯನ್ನು ಪ್ರಾರಂಭಿಸಿದ್ದಾರೆ. ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಅದನ್ನು ಮಾಡುವುದಕ್ಕೆ ನಾನು ಸೂಚಿಸಿದ್ದೇನೆ. ಶಾಲೆಗಳ ಮೌಲ್ಯಾಂಕನಗಳನ್ನು ಮಾಡುತ್ತಿದ್ದೇವೆ. ಶಾಲೆಗಾಗಿ ನಾವು-ನೀವು, ತಾವು ಹೋಗಿ ಬಂದ ನಂತರ ಶಾಲೆಗಳ ಮೌಲ್ಯಾಂಕನಗಳನ್ನು ಮಾಡಿ, ಶಾಲೆಗಳು ಹೇಗಿವೆ ಎನ್ನುವುದರ ಬಗ್ಗೆ ಒಂದು ಸ್ಪಷ್ಟ ಚಿತ್ರಣ ಮೂಡುವುದಕ್ಕೆ ಬೇಕಾದಂಥ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ತಿಳುವಳಿಕೆ, ಜವಾಬ್ದಾರಿ, ಸ್ಪಷ್ಟತೆ ಮೂಡಿಸುವಂಥ ಪ್ರಯತ್ನ ಮತ್ತು ಶಾಲೆಗಳ ಸ್ಥಿತಿ-ಗತಿಗಳ ಬಗ್ಗೆ ಮೌಲ್ಯಾಂಕನ ಕಾರ್ಯಕ್ರಮಗಳು ನಡೆದಿವೆ. ನಾವು ಆ ಪ್ರಯತ್ನವನ್ನು ಮಾಡಿದ್ದೇವೆ. ಇದನ್ನು ಮುಂದುವರೆಸುತ್ತೇವೆ ಮತ್ತು ಯಾವುದೇ ಸಂದರ್ಭದಲ್ಲೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಈ ಕಾಯಿದೆ ಒಂದು ಮೈಲಿಗಲ್ಲಾಗಿ ಜಾರಿಗೊಳ್ಳುವುದಕ್ಕೆ ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿರುವ ರಾಜ್ಯವಾಗಿದೆ. ಹಾಗಾಗಿ ಇದನ್ನು ಸಹ ಜಾರಿಗೊಳಿಸುವುದಕ್ಕೆ

ಬದ್ಧತೆಯಿಂದ ನಮ್ಮ ಪ್ರಯತ್ನವನ್ನು ಮಾಡುತ್ತೇವೆ. ಅದಕ್ಕೆ ಎಲ್ಲರ ಸಹಕಾರ ಬೇಕೆಂದು ನಾನು ಕೇಳಿಕೊಳ್ಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ ಮಾತನಾಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನದ ಉಪಹಾರದ ಬಗ್ಗೆ ಹೇಳಿ, ಸುಮಾರು 54,000 ಶಾಲೆಗಳಲ್ಲಿ 64,000 ಫಲಾನುಭವಿಗಳಿದ್ದಾರೆ. ಇದಕ್ಕೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಮಾಡಿ, ಒಬ್ಬ Director ಅನ್ನು appoint ಮಾಡಿ it should be a more effective programme. ಇದರ ಬಗ್ಗೆ ತಾವು ಹೇಳಲಿಲ್ಲ. ಕನ್ನಡ ಮತ್ತು ಸಂಸ್ಕೃತಿಯಂತಹ ಇಲಾಖೆಗೆ ಮಧ್ಯಾಹ್ನದ ಉಪಹಾರದ್ದು ಏನು ಇದೆ, ಇದಕ್ಕೆ ಒಂದು ಪ್ರತ್ಯೇಕವಾದಂಥ ನಿರ್ದೇಶನಾಲಯ ಮತ್ತು ಪ್ರತ್ಯೇಕವಾದ ನಿರ್ದೇಶಕರನ್ನು ಕೊಟ್ಟು ಏಕೆ ಮಾಡಬಾರದು? ಇದುವರೆಗೂ ಗೊಂದಲವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಬಿಸಿ ಊಟದ ವ್ಯವಸ್ಥೆ ಬಗ್ಗೆ ನಿನ್ನೆ ಇಲ್ಲೇ ಚರ್ಚೆಯಾಯಿತು. 64 ಲಕ್ಷ ಮಕ್ಕಳು.. ..

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಒಂದು ಸಾವಿರ ಕೋಟಿ ರೂ.ಗಳನ್ನು ಹಣವನ್ನು ಖರ್ಚು ಮಾಡುತ್ತಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಖರ್ಚು ಮಾಡುತ್ತಿದ್ದೇವೆ, 64 ಲಕ್ಷ ಮಕ್ಕಳು ಊಟ ಮಾಡುತ್ತಿದ್ದಾರೆ, ಒಂದು ಲಕ್ಷಕ್ಕಿಂತಲೂ ಹೆಚ್ಚು ಅಡಿಗೆಯವರು ಕೆಲಸ ಮಾಡುತ್ತಿದ್ದಾರೆ. 56,000 ಶಾಲೆಗಳಲ್ಲಿ ಬಿಸಿ ಊಟದ ವ್ಯವಸ್ಥೆಗಳು ನಡೆಯುತ್ತಿವೆ. ಇದು ಅತ್ಯುತ್ತಮವಾದ ರೀತಿಯಲ್ಲಿ ನಡೆಯುತ್ತಿದೆ. ತಾವು ಇದಕ್ಕೆ ಒಂದು ಪ್ರತ್ಯೇಕವಾದಂಥ ನಿರ್ದೇಶನಾಲಯ ಆಗಬೇಕೆನ್ನುವಂಥದ್ದನ್ನು ಹೇಳಿದ್ದೀರಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ನಡೆಸುತ್ತಿರುವಂಥ ಸಂದರ್ಭದಲ್ಲಿ ಇದನ್ನು ಇನ್ನಷ್ಟು ಹೆಚ್ಚು ಉತ್ತಮ ಪಡಿಸುವುದಕ್ಕೆ, ಮಕ್ಕಳಿಗೆ ಪೌಷ್ಠಿಕ ಆಹಾರ ಬೇಕು. ಇವರು ಶೈಕ್ಷಣಿಕ ವಾತಾವರಣದಲ್ಲಿ ಚೆನ್ನಾಗಿ ಇರಬೇಕೆನ್ನುವ ಆಶಯವಿದೆ. ಇದು ಚೆನ್ನಾಗಿದೆ, ಇದನ್ನು ಮುಂದಿನ ದಿವಸಗಳಲ್ಲಿ ಪರಿಶೀಲಿಸುತ್ತೇವೆಂಬ ಮಾತನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಾನು ಕೂಡ adjournment motion ಗೆ ರುಜು ಹಾಕಿ ಕಳುಹಿಸಿರುವುದು. ಇವತ್ತು ಬೆಳಿಗ್ಗೆ ಮಾನ್ಯ ಶರದ್ ಪವರ್‌ರವರು ಮತ್ತು

ಮಾನ್ಯ ಜೈರಾಮ್ ರಮೇಶ್‌ರವರು ಇಲ್ಲಿಗೆ ಬಂದಿದ್ದರು. ಹಾಗಾಗಿ ನಾನು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಗಲಿಲ್ಲ. ಇದರ ಬಗ್ಗೆ ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಮತ್ತು ಡಾ. ಹೆಚ್.ಸಿ. ಮಹದೇವಪ್ಪನವರು ಮಾತನಾಡಿದ್ದಾರೆ. ನಾನು ಮಾನ್ಯ ಮಂತ್ರಿಯವರು ನೀಡಿದ ಉತ್ತರವನ್ನು ಪೂರ್ಣ ಕೇಳುವುದಕ್ಕೆ ಆಗಲಿಲ್ಲ.

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

He was half way in his reply. ಹಾಗಾಗಿ ಯಾವ್ಯಾವ ವಿಚಾರಗಳಿಗೆ ಅವರು ಉತ್ತರ ಕೊಟ್ಟರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಆಗಲಿಲ್ಲ. ಇದು ಒಂದು ಮಹತ್ವಕಾಂಕ್ಷಿಯ ಕಾಯಿದೆಯಾಗಿದೆ. ಸಂವಿಧಾನಕ್ಕೆ ತಿದ್ದುಪಡಿ ತಂದು ಮಾಡಿರುವಂಥ ಕಾಯಿದೆಯಾಗಿದೆ. ತಮಗೆಲ್ಲಾ ಗೊತ್ತಿದೆ, ಉಚಿತ ಮತ್ತು ಕಡ್ಡಾಯ ಶಿಕ್ಷಣವೆನ್ನುವಂಥದ್ದು, ಸಂವಿಧಾನದ ನಾಲ್ಕನೇ ಭಾಗವಾದ Directive Principles ನಲ್ಲಿತ್ತು. ಈಗ ಅದನ್ನೇ part III ಗೆ ತಂದಿರುವಂಥದ್ದು. ಇದನ್ನು ಇಲ್ಲಿಗೆ ಏಕೆ ತಂದರು ಎಂದರೆ it is an enforceable right under the Constitution. One can go to the Court also seeking relief for the infringement or injustice caused to him. ಅದಕ್ಕೆ ಹೋಗುವುದಕ್ಕೆ ಮಾಡಬೇಕೆಂದು ಇದನ್ನು ಮೂಲಭೂತ ಹಕ್ಕಾಗಿ ಮಾಡಬೇಕೆಂದು part III ಎಂದು ಮಾಡಿರುವುದು. ಇದಕ್ಕೆ ಬಹಳ ಮಹತ್ವವಿದೆಯೆನ್ನುವಂಥದ್ದನ್ನು ರಾಜ್ಯ ಸರ್ಕಾರ ಅರ್ಥ ಮಾಡಿಕೊಂಡಿದೆಯೆಂದು ನನ್ನ ಭಾವನೆ. ಎಲ್ಲಾ ರಾಜ್ಯಗಳು ಕೂಡ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದು Supreme Court ಗೂ ಹೋಗಿ, ಅಲ್ಲೂ ಕೂಡ scrutiny ಆಗಿದೆ. ಇದು scrutiny ಆಗಿ, it has been upheld by the Supreme Court also. It is valid and constitutional ಎಂದು ಹೇಳಿ it has been upheld by the Supreme Court. ಆದ್ದರಿಂದ it is binding on all institutions whether run by Government of India or run by States or run by aided institutions or by un-aided institutions. ಇಷ್ಟೂ ಬಗೆಯ ಶಿಕ್ಷಣ ಸಂಸ್ಥೆಗಳು ಇದನ್ನು ಪಾಲನೆ ಮಾಡಬೇಕು. ಇದನ್ನು ಜಾರಿಗೊಳಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳ ಮೇಲಿದೆ. As you know education comes under Concurrent List.-

Education Concurrent List ನಲ್ಲಿ ಬರುವುದು. ಶಿಕ್ಷಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ. ಇದು ಪೂರ್ಣವಾಗಿ ಕೇಂದ್ರದ್ದು ಅಲ್ಲ, ಪೂರ್ಣವಾಗಿ ರಾಜ್ಯ ಸರ್ಕಾರಗಳದ್ದು ಅಲ್ಲ. Since it is coming under the Concurrent List, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಕೂಡ ಜಂಟಿಯಾಗಿ ಜವಾಬ್ದಾರಿಯನ್ನು ಹೊರಬೇಕಾಗಿದೆ. ಅದಕ್ಕೆ ಕೇಂದ್ರ ಸರ್ಕಾರ ಈ ಕಾನೂನನ್ನು ಮಾಡಿ, ಇದಕ್ಕೆ ಬೇಕಾದಂಥ ಸೌಕರ್ಯಗಳನ್ನು ನಾವು ಕೊಡುತ್ತೇವೆ, implement ಮಾಡಿ ಎಂದು ಕೂಡ ಹೇಳಿದ್ದಾರೆ. ಈಗ ಮಾನ್ಯ ಮಂತ್ರಿಯವರು ಹೇಳಿದ್ದನ್ನು ಕೇಳಿದೆ. ಈಗ un-aided school ಗಳಲ್ಲಿ ಮತ್ತೆ ಬೇರೆ ಸ್ಕೂಲ್‌ಗಳಲ್ಲಿ ಮಕ್ಕಳು ಫೀ ಕಟ್ಟಬೇಕಲ್ಲಾ, it is coming around Rs.11,000 or so, ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಭರಿಸುತ್ತಿವೆಯಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದು ಸ್ಪಷ್ಟತೆ ಇಲ್ಲ, ಅದನ್ನೇ ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಕಪಿಲ್ ಸಿಬಲ್‌ರವರು ಒಂದು ಕಡೆ ಹೇಳಿದ್ದರು. ಇದನ್ನು ಕೇಂದ್ರ ಸರ್ಕಾರವೂ ಕೂಡ ಭರಿಸುತ್ತೆಂದು ಹೇಳಿದ್ದರು. ಆದ್ದರಿಂದ you get the clarification from the Government of India. My point is, he made a Statement. ನಾನು ಎಲ್ಲೊ ಒಂದು ಕಡೆ ಪತ್ರಿಕೆಯಲ್ಲಿ ಓದಿದ್ದೇನೆ. ಅವರು he made a categorical statement that Government of India is also going to share the burden ಎಂದು. ಹಾಗಾಗಿ ಅವರು ಮಾಡುತ್ತಾರೆಂಬ ವಿಶ್ವಾಸವಿದೆ. ಏಕೆಂದರೆ, it is the joint responsibility of the Government of India and State Government. you have to take up the matter with the Government of India. ನಾನು ಹೇಳುವುದೇನೆಂದರೆ, ಇದನ್ನು ದಿನಾಂಕ: 01.04.2010 ರಿಂದ ಜಾರಿಗೆ ಕೊಡಬೇಕೆಂದು ಆಗಿದೆ. ಈಗಾಗಲೇ delay ಆಗಿದೆ. ತಾವು ಕಾರಣ ಏನು ಕೊಟ್ಟಿರಬಹುದೆಂದರೆ, ಬಹುಶಃ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಇತ್ತು. ಅದಕ್ಕೋಸ್ಕರ ಮಾಡಿಲ್ಲವೆಂದು ಹೇಳಿರುತ್ತೀರಿ. ಇದಕ್ಕೆ stay ಏನು ಇರಲಿಲ್ಲ. ಇದನ್ನು implement ಮಾಡುವುದಕ್ಕೆ ಯಾರದ್ದು ಅಡ್ಡಿ ಇರಲಿಲ್ಲ. ತಾವು ಇದನ್ನು ಇಷ್ಟು ಹೊತ್ತಿಗೆ ಮಾಡಿ ಮುಗಿಸಿ

ಬಿಡಬಹುದಾಗಿತ್ತು. Instead of starting implementing this year, ದಿನಾಂಕ: 01.04.2010 ರಲ್ಲೇ ಪ್ರಾರಂಭ ಮಾಡಬಹುದಾಗಿತ್ತು. I don't think there was stay. Stay ಇತ್ತಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಮಾತನಾಡಿ, ಆಮೇಲೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ತಾವು ಮಧ್ಯೆ ಎದ್ದು ನಿಲ್ಲಬೇಡಿ, ಆಮೇಲೆ ಹೇಳಿ. Stay ಇದ್ದರೆ ಇತ್ತು ಎಂದು ಹೇಳಿ, ಇಲ್ಲವೆಂದರೆ ಇಲ್ಲವೆಂದು ಹೇಳಿ. ಇಲ್ಲವಾದರೆ ಇನ್ನಾವುದಾದರೂ implement ಮಾಡುವುದಕ್ಕೆ ಅಡಚಣೆ ಇತ್ತೆಂದು ಹೇಳಿ.

ನನ್ನ ಪ್ರಕಾರ, it came into force from 01-04-2010. Because the Act was passed in the year 2009. It was put into operation from 01-04-2012. ಅಂದರೆ ಈಗಾಗಲೇ ಎರಡು ಶೈಕ್ಷಣಿಕ ವರ್ಷಗಳು ಅಂದರೆ 2010–11, 2011–12 ಮುಗಿದು ಹೋಗಿವೆ. ಈಗ 2012–13 ಪ್ರಾರಂಭವಾಗಿದೆ, ಅಂದರೆ ನಾವು ಮೂರನೇ ಶೈಕ್ಷಣಿಕ ವರ್ಷದಲ್ಲಿದ್ದೇವೆ. According to my information, I don't know, how far it is true, you have to correct it, ನನಗಿರುವ ಮಾಹಿತಿ ಪ್ರಕಾರ 1,12,000 ವಿದ್ಯಾರ್ಥಿಗಳು ಅದರಲ್ಲಿ ಬರುತ್ತಾರೆ ಎಂದು ಲೆಕ್ಕಾಚಾರ ಮಾಡಿದ್ದಾರೆ. ಅವಕಾಶಗಳಿಂದ ವಂಚಿತರಾಗಿರತಕ್ಕಂಥವರು, ನ್ಯಾಯದಿಂದ ವಂಚಿತರಾಗಿರತಕ್ಕಂಥವರು, ಶತಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿರತಕ್ಕಂಥವರು ಮತ್ತು ದುರ್ಬಲ ವರ್ಗಗಳ ಜನರಿಗೆ ಅಲ್ಲಿನ neighbouring ಶಾಲೆಗಳಲ್ಲಿ 25% ಅಡ್ಮಿಷನ್ ಕೊಡಬೇಕು. ಒಂದು ವರ್ಷದಲ್ಲಿ ಎಷ್ಟು ಅಡ್ಮಿಷನ್ಸ್ ಮಾಡುತ್ತಾರೆ, ಅದರಲ್ಲಿ ಇವರಿಗೆ from L.K.G. to 8th standard 25% earmark ಮಾಡಬೇಕು ಎಂದು ಇದೆ. Unaided Institutions ನವರು ಚಳುವಳಿ ಮಾಡಿದ್ದಾರೆ. ಜುಲೈ 16ರಿಂದ ಆರು ದಿನಗಳ ಕಾಲ ಶಾಲೆಗಳನ್ನು ಬಂದ್ ಮಾಡಿದ್ದಾರೆ. Fortunately for us, ಅವರಿಗೆ ಸಾರ್ವಜನಿಕರಿಂದ ಬೆಂಬಲ ಸಿಗಲಿಲ್ಲ. ಅವರೇ withdraw ಮಾಡಿಕೊಂಡು ಬಿಟ್ಟರು. ಅವರ ಸಂಘಟನೆಯ ಹೆಸರನ್ನು 'ಕುಸ್ಮಾ' ಎಂದು ಚೆನ್ನಾಗಿ ಇಟ್ಟುಕೊಂಡಿದ್ದಾರೆ. Karnataka unaided Schools

Management Association (KUSMA) ಅದಕ್ಕೆ ಕನ್ನಡದಲ್ಲಿ ಕುಸ್ಮಾ ಎಂದು ಹೆಸರಿಟ್ಟುಕೊಂಡಿದ್ದಾರೆ. ಕುಸುಮ ಎಂದರೆ ಹೂವು. ಹೂವು ಎಂದರೆ ಕೋಮಲ. ಅದರಂತೆ ಅವರು ಮೃದುವಾಗಿರಬೇಕು ಮತ್ತು ಕೋಮಲವಾಗಿರಬೇಕು. ಆದರೆ ಅವರಲ್ಲಿ ಕೋಮಲ ಸ್ವಭಾವವವೇ ಕಾಣಿಸುತ್ತಿಲ್ಲ. ಆ ಹೆಸರಿಗೆ ಇರುವ ಅನ್ವರ್ಥನಾಮಕ್ಕೆ ವಿರುದ್ಧವಾಗಿದ್ದಾರೆ. ಅದರ ಅಧ್ಯಕ್ಷರಾದ ಶರ್ಮಾ ಎನ್ನುವವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದು ಅವರ ಕೊಳಕು ಮನಸ್ಸಿನಿಂದ ಬಂದಂಥ ಹೇಳಿಕೆ ಎಂದು ಅನ್ನಿಸುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರು ಏನು ಹೇಳಿದ್ದಾರೆ ಎಂದರೆ, ಸಮುದ್ರಕ್ಕೆ ಕೊಳಚೆ ನೀರು ಹರಿದುಕೊಂಡು ಬಂದರೆ ಸಮುದ್ರದ ನೀರೆಲ್ಲ ಕೊಳಚೆಯಾಗಿ ಬಿಡುತ್ತದೆ ಎಂದು ಹೇಳಿದ್ದಾರೆ. ನೋಡಿ ಅವರು ಹೇಗೆ refer ಮಾಡಿದ್ದಾರೆ. ಕೊಳಚೆ ನೀರು ಎಂದರೆ, ಈ ಬಡವರ ಮಕ್ಕಳು, ಅವಕಾಶಗಳಿಂದ ವಂಚಿತ ರಾಗಿರುವಂಥವರ ಮಕ್ಕಳು, ದಲಿತರ ಮಕ್ಕಳು, ಹಿಂದುಳಿದವರ ಮಕ್ಕಳು. ಇವರನ್ನು ಕೊಳಚೆ ನೀರಿಗೆ refer ಮಾಡಿದ್ದಾರೆ. ಅಂದರೆ ಅವರ ಮನಸ್ಸಿನಲ್ಲಿ ಎಷ್ಟು ಕೊಳಕುತನ ಇರಬೇಕು ಎನ್ನುವುದನ್ನು ನೀವು ಊಹಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ ಆಮೇಲೆ ಅವರು ರಾಜೀನಾಮೆ ಕೊಟ್ಟರಂತೆ. Not for this reason, but for some other reason he has resigned. ಅವರು ರಾಜೀನಾಮೆ ಕೊಟ್ಟಿದ್ದು ಈ ಕಾರಣಕ್ಕಾಗಿಯೇ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಆ ರೀತಿ ಹೇಳಿದ ಅವರನ್ನು ಹಾಗೆಯೇ ಬಿಟ್ಟುಬಿಡುವುದೇ? ನನ್ನ ಪ್ರಕಾರ ಅವರ ಮೇಲೆ Untouchability Act ಅಡಿಯಲ್ಲಿ ಕೇಸ್ ಹಾಕಬೇಕು, Enforcement of Civil Rights Act ಅಡಿಯಲ್ಲಿ ಕೇಸ್ ಹಾಕಬೇಕು. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿದೆ. ನೀವು ಗಮನಿಸುತ್ತಿರುವಿರಾ ಅಧ್ಯಕ್ಷರೇ?

ಅಧ್ಯಕ್ಷರು : ಗಮನಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : Does it not attract the Enforcement of Civil Rights Act?

ಅಧ್ಯಕ್ಷರು : Definitely, ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಹಾಗಿದ್ದರೆ ಅವನ ಮೇಲೆ ಕೇಸ್ ಹಾಕಿರುವಿರಾ? Who is that Sharma? What made him to make a statement like that? Is it not a derogatory Statement? ಅದು ಆ ವರ್ಗದ ಜನರಿಗೆ ಮಾಡಿದ ಅವಮಾನವಲ್ಲವೇ? ಅದು ಕೆಳವರ್ಗದ ಆ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆ? ನಾವೇನು ಇನ್ನೂ ಸ್ವಾತಂತ್ರ್ಯ ಪೂರ್ವದಲ್ಲಿದ್ದೇವೆಯೇ? ಈ ದೇಶದಲ್ಲಿ ಸ್ವಾತಂತ್ರ್ಯ ಬಂದು, ಸಂವಿಧಾನ ಬಂದು, untouchability ನಾಶ ಮಾಡುತ್ತೇವೆ ಎಂದು ಹೇಳುತ್ತಿರುವಾಗ, where he is standing? I demand, ಸರ್ಕಾರ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕು. Government is not helpless. ಅವನನ್ನು ಹಾಗೇ ಬಿಟ್ಟುಬಿಡುವುದಕ್ಕೆ ಆಗುವುದಿಲ್ಲ. ಇನ್ನೊಂದು, Oxford School ಅಂತೆ. ಅಲ್ಲೂ ಈ ಮಕ್ಕಳ ತಲೆಗೂದಲನ್ನೇ ಕತ್ತರಿಸಿಬಿಟ್ಟಿದ್ದಾರೆ. ಏನಿದು? They do not respect Constitution, they do not respect Law, they do not respect Courts. When the Supreme Court has upheld the Law, how can these people talk like this? ಈ ರೀತಿಯನ್ನು ಸಹಿಸುವುದಕ್ಕೆ ಆಗುತ್ತದೆಯೇ? ಅಲ್ಲಿ ಅವರ ಮೇಲೆ ಕಂಪ್ಲೆಂಟ್ ಕೊಟ್ಟಿದ್ದಾರೆ. ದಲಿತ ಸಂಘಟನೆಗಳು ಮತ್ತು ಬೇರೆ ಬೇರೆ ಸಂಘಟನೆಗಳೆಲ್ಲ ಪ್ರತಿಭಟನೆ ಮಾಡಿವೆ. What action you have taken against the concerned people, those who are wrong-doers? ಇವತ್ತು ಆಗಬೇಕಾಗಿರುವುದು ಇದು. ಇಲ್ಲದಿದ್ದರೆ ಅವರಿಗೆ ಭಯ ಹೇಗೆ ಬರುತ್ತದೆ. ಇಲ್ಲ, ಈಗ ನಾವು ಮಾತುಕತೆ ನಡೆಸುತ್ತಿದ್ದೇವೆ, ಅವರು ಒಪ್ಪಂದಕ್ಕೆ ಬರುತ್ತಿದ್ದಾರೆ ಎನ್ನುವುದಾದರೆ ಸರ್ಕಾರ ಹಾಗೆಲ್ಲ ಹೇಳುವ ಹಾಗಿಲ್ಲ. ಆಯಿತು, ಕೆಲವು ಕಡೆ ರಾಜಿ ಮನೋಭಾವದಿಂದಲೂ ಇರಬೇಕು. ಇರಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಈ ರೀತಿ ಮಾತನಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ಕುಳಿತುಕೊಳ್ಳುವುದಕ್ಕೂ ಆಗುವುದಿಲ್ಲ. ಈ ರೀತಿಯ ಕೃತ್ಯ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ಕುಳಿತುಕೊಳ್ಳುವುದಕ್ಕೂ ಆಗುವುದಿಲ್ಲ. ತರಗತಿಗಳಲ್ಲಿ ಆ ಮಕ್ಕಳನ್ನೇ ಬೇರೆ ಕೂರಿಸುವುದು, ಅವರು ತೆಗೆದು ಕೊಂಡು ಬಂದಂಥ ಊಟದ ಡಬ್ಬಿಗಳನ್ನು ಬಿಚ್ಚಿ ನೋಡುವುದು, What is this nonsense? You can't remain as a spectator? ಅದನ್ನು ನೀವು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ನಿಮ್ಮ ಅಧಿಕಾರಿಗಳೇನು ಮಾಡುತ್ತಿದ್ದಾರೆ?

ಪೊಲೀಸ್ ಡಿಪಾರ್ಟ್‌ಮೆಂಟ್ ಏಕಿದೆ? ನಾನು ಯಾರ ಮೇಲೂ ಉದ್ದೇಶ ಪೂರ್ವಕವಾಗಿ ಅಥವಾ ದ್ವೇಷದಿಂದ ಮಾಡಿ ಎಂದು ಹೇಳುತ್ತಿಲ್ಲ. ಅವರ ನಡವಳಿಕೆಯ ಮೇಲೆ, ಅವರ ಕೃತ್ಯದ ಮೇಲೆ, ಅವರ ಭಾವನೆಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಶರ್ಮ ಎನ್ನುವವನು ಆ ರೀತಿಯ ಭಾವನೆಯನ್ನು ವ್ಯಕ್ತ ಮಾಡಿದ ಮೇಲೆ, he is unfit to become a citizen of this country. ಅವರು ಎಷ್ಟೇ ಎತ್ತರದವರಾಗಲಿ, ಎಷ್ಟೇ ದೊಡ್ಡ ಮನುಷ್ಯರಾಗಿರಲಿ ಅಥವಾ ಅವರು ಯಾವುದೇ ವರ್ಗದಿಂದ ಬಂದಿರಲಿ, all are equal before the Law. Nobody is above the Law. ಇವೆಲ್ಲ ಪತ್ರಿಕೆಗಳಲ್ಲಿ ಬಹಳ ದೊಡ್ಡ ಪ್ರಚಾರವಾಗಿದೆ. ಈ ವರ್ಷ ಅಡ್ಮಿಷನ್ಸ್ ನಿಂತು ಹೋಯಿತು. C.B.S.E.ನಲ್ಲಿ ಮಾಡಲಿಲ್ಲ, ಅವರು ಅಡ್ಮಿಷನ್ಸ್ ಮುಗಿದು ಹೋಗಿದೆ ಎಂದು ಹೇಳಿಬಿಟ್ಟಿದ್ದಾರೆ. ಅದು I.C.S.E. ಯವರಿಗೂ apply ಆಗುತ್ತದೆ. ಅದು ಎಲ್ಲರಿಗೂ apply ಆಗುತ್ತದೆ. 25% ಕೋಟಾದಲ್ಲಿ ಎಷ್ಟು ಜನ ಮಕ್ಕಳಿಗೆ ಅಡ್ಮಿಷನ್ಸ್ ಆಗಿದೆ ಎಂದು ನನಗೆ ಗೊತ್ತಿಲ್ಲ. ಏಕೆ ಅದನ್ನು ಮಾಡಿಲ್ಲ? . Supreme Court judgment ಏಪ್ರಿಲ್ ತಿಂಗಳಲ್ಲಿಯೇ ಬಂದಿತಲ್ಲವೇ? ಏಪ್ರಿಲ್ ತಿಂಗಳಲ್ಲಿ ಬಂದ ಮೇಲೆ, ಅಡ್ಮಿಷನ್ಸ್ ಮಾಡುವುದು ಜೂನ್ ಕೊನೆಯವರೆಗೆ ಇತ್ತಲ್ಲ, ಆಗ ಏಕೆ ಮಾಡಿಲ್ಲ? ಅಡ್ಮಿಷನ್ಸ್ ಡೇಟ್ ಮುಗಿದ ಮೇಲೂ ಮಾಡಿಕೊಳ್ಳಬಹುದು ಎಂದು ಇದೆಯಲ್ಲ. ಅವರು ಏಕೆ ಮಾಡಲಿಲ್ಲ? ಸರ್ಕಾರದವರು ಏಕೆ ಆಸಕ್ತಿ ತೆಗೆದುಕೊಳ್ಳಲಿಲ್ಲ? ಕಠಿಣವಾದ ಕ್ರಮಗಳನ್ನೇಕೆ ತೆಗೆದು ಕೊಳ್ಳಲಿಲ್ಲ? I don't know. I want to know the information from the Government, ಈ ವರ್ಷ ಎಷ್ಟು ಜನ ಮಕ್ಕಳಿಗೆ ಅಡ್ಮಿಷನ್ಸ್ ಮಾಡಬೇಕೆಂದು ನೀವು ಗುರುತಿಸಿದ್ದೀರಿ? ಅದರಲ್ಲಿ ಎಷ್ಟು ಜನ ಮಕ್ಕಳಿಗೆ ಅಡ್ಮಿಷನ್ ಸಿಕ್ಕಿದೆ? ಈ ವರ್ಷ ಅಡ್ಮಿಷನ್ ಸಿಕ್ಕದೇ ಇರುವ ಮಕ್ಕಳೆಷ್ಟು? ಈ ವರ್ಷ ಎಷ್ಟು ಮಕ್ಕಳಿಗೆ admission ಸಿಕ್ಕಿದೆ? ಈ ವರ್ಷ ಎಷ್ಟು ಮಕ್ಕಳಿಗೆ admission ಸಿಗಲಿಲ್ಲ? ಈ ವರ್ಷ LKG to 8th standard ಎಷ್ಟು ಮಕ್ಕಳಿಗೆ ಅವಕಾಶ deny ಆಗಿದೆ? ಏಕಾಯಿತು? who is responsible for this? Whether Institutions are responsible or the Government is responsible or the Officers concerned are responsible? That is to be spelt out. ಇದನ್ನು ಹೇಳಬೇಕಾಗುತ್ತದೆ.

ನಿಜವಾಗಿಯೂ ನಾವು ಇಂಥ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಕಷ್ಟ. ಇದು ಸಾಮಾಜಿಕ ನ್ಯಾಯದ ಕಾನೂನು. ಆ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವಿರಬೇಕು. ಅವರೂ ಮುಖ್ಯವಾಹಿನಿಗೆ ಬರಬೇಕು. ಅವರೂ ಕೂಡ ಎಲ್ಲರ ಸಮಾನರಂತೆ ಸ್ವಾಭಿಮಾನಿಗಳಾಗಿ ಬದುಕಬೇಕು. Private Institutions ಎಷ್ಟಿವೆ? After all about 12-13% in the State. ಅದೂ ಕೂಡ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡಗಳಲ್ಲಿ ಹೆಚ್ಚಾಗಿದೆ. ಈ ಸಂಸ್ಥೆಗಳ ಮೇಲೆ ನಿಗಾ ಇಲ್ಲವೇ? ಇಷ್ಟಬಂದ ಹಾಗೆ ಅವರು ಮಾಡುತ್ತಾರೆ. 25% ಸೀಟ್ ಕೊಡುವುದನ್ನು ಕಡ್ಡಾಯ ಕಾನೂನನ್ನಾಗಿ ಮಾಡಿದ್ದಾರೆ. Free and compulsory and rights given to the children are enforceable under law. That is why it is included in Part III of the Constitution. When such being the case, ಕ್ರಮ ತೆಗೆದುಕೊಳ್ಳಬೇಕಲ್ಲವೇ? ಇದನ್ನು ಯಾರು ಉದ್ದೇಶಪೂರ್ವಕವಾಗಿ neglect ಮಾಡಿದ್ದಾರೆ, ಯಾರು ಇದನ್ನು ಜಾರಿ ಮಾಡಲು ಹಿಂದೇಟು ಹೊಡೆಯುತ್ತಿದ್ದಾರೆ, ಯಾರು ಇದಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ, ಯಾರಿಗೆ ಇದಕ್ಕೆ ಮನಸ್ಸಿಲ್ಲ ಅಂಥ institutions ಅನ್ನು ರದ್ದು ಮಾಡಿ. ಕಾನೂನು ಉಲ್ಲಂಘನೆ ಮಾಡಿದರೆ ಏಕೆ ಮಾಡಬಾರದು? ಅವರ ಕೋಳಿಯಿಂದಲೇ ಬೆಳಕಾಗುತ್ತಿದೆಯೇ? See these are all the things which will have tobe looked into by the Government. Government must be very strict on this. ಬಿಗಿ ದೋರಣೆ ಇಲ್ಲದೇ ಹೋದರೆ ಎಲ್ಲೋ ಒಂದು ಕಡೆ soft attitude ಇದ್ದರೆ, ಎಲ್ಲೋ ಒಂದು ಕಡೆ ಖಾಸಗಿ institutions, unaided institutions, ಅವರ ಪರವಾಗಿ ಸ್ವಲ್ಪ ನಾವಿದ್ದೇವೆ ಎಂದು ತೋರಿಸಿದರೆ, they don't care. ನಾವು ಅನೇಕ institutions ಗೆ ಹೋಗೋಣ. ಮೈಸೂರಿನಲ್ಲಿ aided institutions ಇವೆ. ಅಲ್ಲಿ Schedule Caste ನವರಿಗೆ, Backward Classes ನವರಿಗೆ reservation ಕೊಟ್ಟಿದ್ದಾರೆಯೇ? In so many institutions which are aided institutions, they are not following the reservation policy of the State or the country. Why? ಅವರಿಗೆ aid ಕೊಡುವುದು ನಿಲ್ಲಿಸಿ. Let them not take our money. ಅವರು ತೆಗೆದುಕೊಳ್ಳುವುದೇ ಬೇಡ. ಎಷ್ಟೋ

ಕಡೆ ನಿಮ್ಮ parameter ಇವೆಯಲ್ಲ, ಬೆಂಗಳೂರು ನಗರವಾದರೆ ಆ ವಾರ್ಡ್‌ನಲ್ಲಿರಬೇಕು, ಮುನಿಸಿಪಾಲಿಟಿಗಳಾದರೆ ಆ ವಾರ್ಡ್‌ನಲ್ಲಿರುವವರೆಲ್ಲಾ ಅದು neighbourhood ಎಂದು ಬರುತ್ತದೆ ಎಂದು ನೀವು ತೀರ್ಮಾನ ಮಾಡಿಕೊಂಡಿದ್ದೀರಿ. ಮೈಸೂರು, ಬೆಂಗಳೂರು ಇಂಥ ಕಡೆಗಳಲ್ಲೆಲ್ಲಾ ವಾರ್ಡ್‌ಗಳಿವೆ. Municipality ಗಳನ್ನು ವಾರ್ಡ್‌ಗಳೆಂದು ಮಾಡಿಕೊಂಡಿದ್ದೀರಿ. ಹಳ್ಳಿಗಳಲ್ಲಿ ವಿವಿಧ ದೂರಗಳನ್ನು ಅಂದರೆ ಒಂದು ಕಿ.ಮೀ., ಎರಡು ಕಿ.ಮೀ., 5 ಕಿ.ಮೀ., ದೂರವೆಂದು ಹಾಕಿ ಕೊಂಡಿದ್ದೀರಿ. ಒಂದು ವೇಳೆ, ಈ parameter ಒಳಗೆ ಸ್ಕೂಲ್ ಬರದೇ ಇದ್ದರೆ ಯಾವುದೂ ಸ್ಕೂಲ್ ಇವತ್ತಿನವರೆಗೆ ಇಲ್ಲದೇ ಇದ್ದರೆ ಅಲ್ಲಿ ನೀವೇ ಓಪನ್ ಮಾಡಬೇಕೆಂದು ಇದೆ. ಅಂಥ ಎಷ್ಟು ಸ್ಥಳಗಳನ್ನು ಗುರುತಿಸಿದ್ದೀರಿ? ಅಂಥವನ್ನು in the state ಎಷ್ಟನ್ನು identify ಮಾಡಿದ್ದೀರಿ? I am asking. ಮಾಡದೇ ಇದ್ದರೆ ಈ ವರ್ಷ ಏಕೆ ಮಾಡಿಲ್ಲ? ನನ್ನ ಪ್ರಕಾರ ಈ ವರ್ಷ ಕಡ್ಡಾಯವಾಗಿ ಅದನ್ನು ನೂರಕ್ಕೆ ನೂರು ಜಾರಿ ಮಾಡಬೇಕಾಗಿತ್ತು. ಶರ್ಮಾರವರಂಥವರಿಂದ ಈ ತರಹ ಎಲ್ಲಾ ಆಗುತ್ತಿರುವಂಥದ್ದು ಆಗುತ್ತಿದೆ. ಆ ಶರ್ಮಾರವರನ್ನು ಸುಮ್ಮನೆ ಬಿಟ್ಟಿರುವುದೇ ತಪ್ಪು. ಹೇಗೆ ಮಾತನಾಡಿದ್ದಾರೆ ನೋಡಿ, ಮಾನ್ಯ ಸುರೇಶ್‌ಕುಮಾರ್ ಅವರೆ, ತಾವು Law Minister.

ಶ್ರೀ ಎಂ.ಪಿ. ಕುಮಾರಸ್ವಾಮಿ : ಬಡವರ ಮಕ್ಕಳನ್ನು ಕೊಚ್ಚೆ ಎಂದು ಕರೆದಿದ್ದರೆ. ಅವರಿಗೆ ಶಿಕ್ಷೆಯಾಗಬೇಕೆಂಬುದು ನನ್ನ ಒತ್ತಾಯವಾಗಿದೆ. ಬಡವರ ಮಕ್ಕಳನ್ನು ಕೊಚ್ಚೆ, ಕೊಳಚೆ ಎಂದು ಕರೆದಿರುವುದು ಸಂವಿಧಾನ ಬಾಹಿರ, ಸಂವಿಧಾನಕ್ಕೆ ವಿರುದ್ಧ. ಅವರು ಏಕೆ ಆ ತರಹ ಹೇಳಿಕೆ ಕೊಟ್ಟರು? ದಯವಿಟ್ಟು, ಅವರಿಗೆ ಶಿಕ್ಷೆಯಾಗಬೇಕು. ಆ ಸಂಸ್ಥೆ ಕೂಡಲೇ ರದ್ದಾಗಬೇಕು.

ಶ್ರೀ ಸಿದ್ದರಾಮಯ್ಯ : OK, I agree with you.

ಶ್ರೀ ಎಂ.ಪಿ. ಕುಮಾರಸ್ವಾಮಿ : ತುಂಬಾ ಅಸಮಾನತೆ ಉಂಟು ಮಾಡತಕ್ಕಂಥ ಮನಸ್ಸು ಅವರದು. ಮಾನ್ಯ ಸಚಿವರೆ, ಇಂತಹ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಬೇಕು, ಅವರಿಗೆ ಶಿಕ್ಷೆಯಾಗಬೇಕು. ಈ ರೀತಿಯ ಅಸಮಾನತೆ ಹುಟ್ಟು ಹಾಕುವಂಥ ಕೆಲಸ ಮಾಡಿರುವುದು ತಪ್ಪು. ದಯವಿಟ್ಟು, ಅಂಥ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಬೇಕು.

ಶ್ರೀ ಸಿದ್ದರಾಮಯ್ಯ : ಕುಮಾರಸ್ವಾಮಿಯವರು ಹೇಳಿರುವುದು ಸರಿಯಾಗಿದೆ. ನೀವೂ institutions ನಡೆಸುತ್ತಿದ್ದೀರಲ್ಲಾ? ನಾನು ಇದನ್ನು

ಬೇಕೂ ಎಂದು ಹೇಳುತ್ತಿಲ್ಲ. ಆ ತರಹದ ಮನೋಭಾವ ಇದೆಯಲ್ಲಾ, ಆ ತರಹದ ಕೊಳಕು ಮನಸ್ಥಿತಿ ಇದೆಯಲ್ಲಾ, ಆ ಕೊಳಕು ಮನಸ್ಥಿತಿಯವರಿಗೆ ಶಿಕ್ಷೆಯಾಗಬೇಕು. ಇಲ್ಲದೇ ಹೋದರೆ, ಅವರು reform ಆಗುವುದೇ ಇಲ್ಲ. ಅವರಿಗೆ ಸಂವಿಧಾನದ ಬಗ್ಗೆಯೂ ಗೌರವವಿರುವುದಿಲ್ಲ, ಕಾನೂನಿನ ಬಗ್ಗೆಯೂ ಗೌರವವಿರುವುದಿಲ್ಲ. ಬಾಯಿ ಮಾತಿನಲ್ಲಿ ಹೆಳಿದರೂ ಅವರಿಗೆ ಗೊತ್ತಾಗುವುದಿಲ್ಲ. ಬಹಳ ಗೌರವಯುತವಾಗಿ, 'ಶರ್ಮಾರವರೆ, ಇನ್ನು ಮೇಲೆ ಹೀಗೆಲ್ಲಾ ಹೇಳಬೇಡಿ, ಈ ತರಹ ನೀವು ಮಾಡಿವುದು ತಪ್ಪು'. ಎಂದು ಹೇಳಿದರೆ, 'ಹೇ ಹೋಗ್ರಿ, ನಮ್ಮ institution, ನೀವು ಯಾರ್ರೀ ಹೇಳುವುದಕ್ಕೆ?' ಎಂದು ಹೇಳುತ್ತಾನೆ. 'ನಾವು ದುಡ್ಡು ಕೊಟ್ಟು ನಡೆಸುತ್ತಿದ್ದೇವೆ, ಹೋಗ್ರೀ ಆ ಕಡೆ.' ಎಂದು ಹೇಳುತ್ತಾನೆ. ನೀವು ನಾವು ಮಾನ್ಯತೆ ಕೊಟ್ಟವರ್ಯಾರು, ಅದನ್ನು cancel ಮಾಡುತ್ತೇವೆ, ನಿಮ್ಮನ್ನು ಜೈಲಿಗೆ ಕಳುಹಿಸಿ ಬೇಕಾಗುತ್ತದೆಂದು ಅವರಿಗೆ ಹೇಳಬೇಕು. You will be booked under the Civil Rights Enforcement Act. Atrocity ಅಡಿಯಲ್ಲಿ ಕೇಸ್ ಹಾಕಬೇಕಾಗುತ್ತದೆಂದು ಹೇಳಬೇಕು. ನಾನು ಮೊದಲೇ ಶುರು ಮಾಡಿದ್ದರೆ ಇದರ ಬಗ್ಗೆ ಹೇಳಬಹುದಿತ್ತು. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಇದರ ಬಗ್ಗೆ ಮತನಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಶರ್ಮಾರವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಹೇಳಬೇಕು ಕ್ರಮ ತೆಗೆದು ಕೊಂಡಿದ್ದೀರಾ? ಅವರ ಮೇಲೆ ಕೇಸ್ ಹಾಕಿದ್ದೀರಾ? ಅವರ ಮೇಲೆ PCR Act ಪ್ರಕಾರ ಕೇಸ್ ಹಾಕಿದ್ದೀರಾ? PCR Act ಅಡಿಯಲ್ಲಿ ಕೇಸ್ ಹಾಕಬೇಕಾಗಿತ್ತು. It attracts Civil Rights Enforcement Act. ಅದನ್ನು ಇಂಥದ್ದಕ್ಕೋಸ್ಕರವೇ ಮಾಡಿರುವುದು. ಅದಕ್ಕೆ complaint ಯಾರೇ ಕೊಟ್ಟರೂ ಕೂಡ straight away register ಮಾಡಿಕೊಂಡು arrest ಮಾಡಬೇಕು. That is the law. ಅದಕ್ಕೆ Civil Rights Enforcement Cell ಎಂದು ಕರೆಯುತ್ತಾರೆ. Oxford School ಇದೆಯೆಲ್ಲಾ, ಯಾರಾದರೂ ಸ್ಕೂಲ್‌ಗೆ ಸೇರಿಸಿಕೊಂಡು ಆ ರೀತಿ ಮಕ್ಕಳಿಗೆ ಹಿಂಸೆ ಕೊಡುತ್ತಾರೆಯೇ? It is blown out of proportion ಎಂದು ಆ ಸ್ಕೂಲ್‌ನವರು ಹೇಳುತ್ತಾರೆ. ಆಗಿರುವುದಂತೂ ನಿಜ. ಆಗಿಯೇ ಇಲ್ಲವೇ? ಮುಂದುಗಡೆ ಜುಟ್ಟು ಕಟ್ ಮಾಡಿದ್ದಾರೆಯೋ, ಇಲ್ಲವೋ ಜುಟ್ಟು ಕತ್ತರಿಸಿರುವುದನ್ನು ಫೋಟೋದಲ್ಲಿ

ತೋರಿಸಿದ್ದಾರೆ. ಇರಲಿ ಎಂದು ಆ ಹೆಣ್ಣುಮಕ್ಕಳಿಗೆ bob-cut ಮಾಡಿದ್ದಾರೆಯೇ? ಅದೂ ಕೂಡ ಅವರನ್ನು ತರಗತಿಯ ಹಿಂದುಗಡೆ ಪ್ರತ್ಯೇಕವಾಗಿ ಕೂರಿಸುತ್ತಿದ್ದಾರೆ. What is this? Is this not about the discrimination? Does the Constitution permits? No. any discrimination on caste, race, sex, religion it is against the constitution. ಇದರ ಮೇಲೆ ಮಾಡುವ ಹಾಗಿಲ್ಲವೆಂದು ಕಾನೂನಿನಲ್ಲಿ ಬಹಳ ಸ್ಪಷ್ಟವಾಗಿದೆ. Constitutionನಲ್ಲಿ ಬಹಳ ಸ್ಪಷ್ಟವಾಗಿದೆ. ಹಾಗಿರುವಾಗ, ಇವರು ಈ ರೀತಿ ಮಾಡುತ್ತಾರಲ್ಲಾ. Educational Institutions ನಡೆಸುತ್ತೇವೆ, ದೊಡ್ಡ ಶಿಕ್ಷಣ ಕೊಡುತ್ತೇವೆ, ಬಹಳ ದೊಡ್ಡ ಉಪಕಾರ ಮಾಡುತ್ತೇವೆಂದು ಹೇಳಿ ಈ ತರಹ ಮಾಡುತ್ತಿದ್ದಾರಲ್ಲಾ, ಇವರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಸರಿಯಲ್ಲ. I am particular about it. ಈ ವರ್ಷ Right to Education Act ಪ್ರಕಾರ, ಈ quota ಪ್ರಕಾರ ಎಷ್ಟು ಮಕ್ಕಳನ್ನು admission ಮಾಡಿಕೊಳ್ಳಬೇಕಾಗಿತ್ತು? ಎಷ್ಟು ಮಕ್ಕಳನ್ನು ಇಡೀ ರಾಜ್ಯದಲ್ಲಿ ನೀವು identify ಮಾಡಿದ್ದೀರಿ? ಈಗ ಎಷ್ಟು ಮಕ್ಕಳು admission ಆಗಿದ್ದಾರೆ? ಈ ವರ್ಷ ಎಷ್ಟು ಮಕ್ಕಳಿಗೆ admission ಆಗಲಿಲ್ಲ? CBSE, ICSE ನಲ್ಲಿ admission ಆಗಿದೆಯೋ, ಇಲ್ಲವೋ? ಸುಮಾರು 1812 unaided institutions ಎಷ್ಟೋ ಇವೆ ಎಂದು ಹೇಳುತ್ತಾರೆ. ಇಲ್ಲಿ ಎಷ್ಟು ಜನ ಆಗಿದ್ದರೆ? ಇಲ್ಲಿ 25% ಆಗಿದ್ದಾರೋ, ಇಲ್ಲವೋ? ಇದಕ್ಕೆಲ್ಲಾ ನಾನು ಮಂತ್ರಿಯವರಿಂದ ಉತ್ತರ ಬಯಸುತ್ತೇನೆ. ಇದನ್ನು ಮಾಡದೇ ಇದ್ದರೆ ಕೂಡಲೇ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ಕಾನೂನಿನಲ್ಲಿ ಏನು ಅವಕಾಶವಿದೆ ಆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಅವರ ಮೇಲೆ ದ್ವೇಷದಿಂದ ಕ್ರಮ ತೆಗೆದುಕೊಳ್ಳಿ ಎಂತಲೋ ಅಥವಾ ಇನ್ಯಾವುದೋ ಕಾರಣದಿಂದ ಮಾಡಿ ಎಂದು ನಾನು ಹೇಳುವುದಿಲ್ಲ. ಸರ್ಕಾರ ಆ ತರಹ ಮಾಡಬಾರದು. ಆದರೆ, ಕಾನೂನು ಉಲ್ಲಂಘನೆ ಮಾಡಿವರಿಗೆ, ಉದ್ದೇಶ ಪೂರ್ವಕವಾಗಿ ಕಾನೂನಿಗೆ ತಡೆ ಒಡ್ಡುತ್ತಿರುವವರಿಗೆ, ಅಡ್ಡಿಪಡಿಸುವವರ ಮೇಲೆ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. I demand it.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ Primary ಶಿಕ್ಷಣದಲ್ಲಿ quality ಶಿಕ್ಷಣವನ್ನು ನಾವು ಕೊಡುವುದಕ್ಕಾಗುತ್ತಿಲ್ಲ. ಹಾಗಾಗಿಯೇ, ಗ್ರಾಮೀಣ ಪ್ರದೇಶದಿಂದ ನಗರದವರೆಗೆ ಎಲ್ಲ ಕಡೆ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಖಾಸಗಿ ಶಾಲೆಗಳಿಗೆ demand ಕಡಿಮೆಯಾಗಬೇಕೆಂದರೆ ಸರ್ಕಾರಿ Primary ಶಾಲೆಗಳಲ್ಲಿ ನಮ್ಮ ಶಿಕ್ಷಣದ ಗುಣಮಟ್ಟ ಜಾಸ್ತಿಯಾಗಬೇಕು. ಬಹುಶಃ ಇಲ್ಲಿರುವ ಶಾಸಕರು ನಾವು ಗಮನಿಸಿದ್ದೇವೆ. ಸ್ವತಃ ನನ್ನ ಅನುಭವಕ್ಕೆ ಬಂದಿರುವುದು. ಜಯಚಂದ್ರರವರೆ, ಮೊಮ್ಮಕ್ಕಳು ಕೇಳುವ ಪ್ರಶ್ನೆಗಳಿಗೆ ಅನೇಕ ಬಾರಿ ನಾನು ತಮಾಷೆ ಮಾಡಿ ಬೇರೆಯವರಿಗೆ ಉತ್ತರ ಕೊಡುವುದಕ್ಕೆ ಹೇಳಿ ಜಾರಿಕೊಳ್ಳುವ ಪ್ರಯತ್ನ ಮಾಡುತ್ತೇನೆ. ಅಂದರೆ ಈಗ ನಮ್ಮ Primary ಶಾಲೆಯಲ್ಲಿ ಓದುವ ಮಕ್ಕಳ IQ ಅಂದರೆ ಭೌತಿಕ ಶಕ್ತಿಯನ್ನು ನಾವು ಯಾರೂ ಕಲ್ಪನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಆ ಮಟ್ಟಕ್ಕೆ ನಿರೀಕ್ಷೆ ಮೀರಿ ಅವರು ಮುಂದೆ ಬರುತ್ತಿದ್ದಾರೆ. ಏನು ಹೇಳಬೇಕೆಂದು ನನಗೆ ಗೊತ್ತಿಲ್ಲ. ನಾವೇನು TCH ಮಾಡಿಸಿ Primary ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವಂಥ ವ್ಯವಸ್ಥೆ ಮಾಡುತ್ತಿದ್ದೇವೆ, ಆ TCH ಅನ್ನು upgrade ಮಾಡಬೇಕು. ಬೇಕಾದರೆ ಇನ್ನು ಮುಂದೆ TCH ತೆಗೆದು ಹಾಕಿಬಿಡಿ, ಈಗ ಮಾಡಿರುವವರಿಗೆ ಏನಾದರೂ ವ್ಯವಸ್ಥೆ ಮಾಡಬೇಕು, ಅದಕ್ಕೋಸ್ಕರ ಅವರು 3 years ನಲ್ಲಿ Degree ಮಾಡಬೇಕು. ಅವರಿಗೆ ಟೈಂ ಕೊಡಿ. ಅಗ ಅವರು ಶಿಕ್ಷಣ ಕೊಡುವಂಥ ಮಟ್ಟ ಜಾಸ್ತಿಯಾಗುತ್ತದೆ. ಆ ದಿಕ್ಕಿನಲ್ಲಿ ಏನಾದರೂ ವಿಶೇಷವಾದ ಚಿಂತನೆಯನ್ನು ಸರ್ಕಾರ ಮಾಡಬಹುದೆ? ಎರಡನೆಯದಾಗಿ, ವಿಶೇಷವಾಗಿ ನಮ್ಮಲ್ಲಿ 8th, 9th, 10th standard ಶಿಕ್ಷಣ ಚೆನ್ನಾಗಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, 1ನೇ ತರಗತಿಯಿಂದ 7ನೇ ತರಗತಿಯ ಶಿಕ್ಷಣದ ಗುಣಮಟ್ಟ ಸರಿ ಇಲ್ಲ. ಏಕೆಂದರೆ, ಅಲ್ಲಿಯ ಶಿಕ್ಷಕರಿಗೆ ಆ ಮಕ್ಕಳಿಗೆ, ಇವತ್ತಿನ ಆ ಮಕ್ಕಳ IQ ಗೆ ತಕ್ಕಂತೆ ಒಳ್ಳೆಯ ರೀತಿಯಲ್ಲಿ ಶಿಕ್ಷಣ ಕೊಡುವ ಶಕ್ತಿ ಇಲ್ಲ. ಅದಕ್ಕೆ ನಾನು ಹೇಳುವಂಥದ್ದು ಏನೆಂದರೆ, ಇನ್ನು ಮುಂದೆ ವಿಶ್ವೇಶ್ವರ ಹೆಗಡೆಯವರೆ ಇದು ಸಾಧ್ಯವೇ ಎಂದು ಯೋಚನೆ ಮಾಡಿ.

ಶ್ರೀ ಶ್ರೀನಿವಾಸ್ ಪ್ರಸಾದ್ ವಿ. : ನೀವು ಮುಖ್ಯಮಂತ್ರಿಯಾಗಿದ್ದಾಗ ಉತ್ತಮವಾದ ಗುಣಮಟ್ಟ ಶಿಕ್ಷಣವನ್ನು ಕೊಡುವ ಬಗ್ಗೆ ಯೋಚನೆ ಮಾಡಿದ್ದಿರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಅವರು ಮುಖ್ಯಮಂತ್ರಿಯಾಗಿರುವಾಗ ಶಿಕ್ಷಣ ಇಲಾಖೆಗೆ ಸಿಕ್ಕಿರುವಷ್ಟು ಬೆಂಬಲ ಹಿಂದೆ ನಿಮ್ಮ ಯಾವ ಸರ್ಕಾರದವರೂ ಕೊಟ್ಟಿರಲಿಲ್ಲ. ಇದಕ್ಕೋಸ್ಕರ ನಾನು ಅವರನ್ನು ಹೆಮ್ಮೆಯಿಂದ ಅಭಿನಂದಿಸುತ್ತೇನೆ. ಅವರು ಅಷ್ಟು ಒಳ್ಳೆಯ ಬೆಂಬಲ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : I don't agree. ನಾವೆಲ್ಲ ಕೊಟ್ಟಿರಲಿಲ್ಲವೆನ್ನುವುದು it is not correct.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಜವಾಗಿ ಕೊಟ್ಟಿಲ್ಲ. ನಾನು ಅಂಕಿ ಅಂಶ ಮೂಲಕ ಹೇಳುತ್ತೇನೆ. ನಿಜವಾಗಿ ಹಿಂದಿನ ಸರ್ಕಾರಗಳು ಕೊಟ್ಟಿರಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊಟ್ಟಿಲ್ಲ, ನೀವು ಯಾರು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ, ನಾನು ಉಪ ಮುಖ್ಯಮಂತ್ರಿಯಾಗಿದ್ದಾಗಿನಿಂದ ಇಲ್ಲಿಯವರೆಗೆ ಎಷ್ಟು High Schools ಕೊಟ್ಟಿದ್ದೇವೆ, ಎಷ್ಟು Primary schools ಕೊಟ್ಟಿದ್ದೇವೆ ಎಂಬ ಅಂಕಿಅಂಶಗಳನ್ನು ನಾನು ಕೊಡುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ : ನಿಮ್ಮ ಸರ್ಕಾರ ಬಂದ ಮೇಲೆ ಯಾವುದೂ ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಎಲ್ಲವನ್ನೂ ಮಾಡಿದ್ದೇನೆಂದು ಹೇಳುತ್ತಿಲ್ಲ. ನಾನು ಇಷ್ಟೇ ಹೇಳುವಂತದ್ದು. ನನ್ನ ಕಾಲಾವಧಿಯಲ್ಲಿ ನಮ್ಮವರೂ ಶಾಂತವಾಗಿ ಕುಳಿತು ಕೆಲಸ ಮಾಡುವುದಕ್ಕೆ ಬಿಡಲಿಲ್ಲ, ನೀವೂ ಬಿಡಲಿಲ್ಲ. ಇಷ್ಟೆಲ್ಲರ ಮಧ್ಯೆಯೂ ನಾನು ಇಷ್ಟೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಸಿದ್ದರಾಮಯ್ಯನವರೆ, ನಾನು ಗ್ರಾಮೀಣ ಪ್ರದೇಶದಿಂದ ಬಂದಿರುವಂಥ ಒಬ್ಬ ರೈತನ ಮಗನಾಗಿ ನನ್ನ ಶಕ್ತಿ ಮೀರಿ, ನನಗೆ ತಿಳಿದಂಥ ಜ್ಞಾನದಲ್ಲಿ ಬುದ್ಧಿವಂತರು, ತಜ್ಞರು, ಮೇಧಾವಿಗಳ ಸಲಹೆಯನ್ನು ತೆಗೆದುಕೊಂಡು ಮೂರೂಕಾಲು ವರ್ಷಗಳ ಕಾಲ ನನ್ನ ಆಡಳಿತ ನಡೆಸಿದ್ದೇನೆ, ಜನ ಮೆಚ್ಚಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. 5 ವರ್ಷಗಳಾದ ಮೇಲೆ ನೋಡೋಣ. ಇನ್ನೊಂದು ವರ್ಷವಾದ ಮೇಲೆ, 9 ತಿಂಗಳಾದ ಮೇಲೆ ಜನರ ಮುಂದೆ ಹೋಗುತ್ತೇವೆ. ಯಾರು ಯಾರಿಗೆ Certificate ಕೊಡುತ್ತಾರೋ? Vote ಮೂಲಕ ಕೊಡುತ್ತಾರೋ ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ನಾನು ಶಿಕ್ಷಣ ಸಚಿವರಾದ ವಿಶ್ವೇಶ್ವರ ಹೆಗಡೆಯವರಿಗೆ ವಿನಂತಿಸುವುದೇನೆಂದರೆ, ಈ ಮನೆಯ ಅಭಿಪ್ರಾಯವನ್ನು ತೆಗೆದುಕೊಂಡು ಬರುವ ದಿವಸಗಳಲ್ಲಿ Degree ಪಡೆದಿರುವ, Mater Degree ಪಡೆದಿರುವವರನ್ನೇ Primary ಶಾಲೆಯ ಮೇಷ್ಟ್ರನ್ನು ಮಾಡುತ್ತೇವೆಂಬ decision ತೆಗೆದುಕೊಳ್ಳಬಹುದಾ? ನಾನೇನು ಹೇಳುತ್ತೇನೆಂದರೆ, ಯಾರೋ ಹೊಟ್ಟೆ ಪಾಡಿಗಾಗಿ, ಯಾರಿಗೋ ಉದ್ಯೋಗ ಕೊಡುವುದಕ್ಕೋಸ್ಕರ, ಮುಂದಿನ ಭವ್ಯ ಭಾರತದ ಕಲ್ಪನೆ ಇರುವಂಥ 20ನೇ ಶತಮಾನವನ್ನು ಭಾರತೀಯ ಶತಮಾನವೆಂದು ಹೇಳುತ್ತಿರುವಂಥ ಈ ಕಾಲದಲ್ಲಿ ಆ ರೀತಿಯ ಉನ್ನತ ಮಟ್ಟದ ಶಿಕ್ಷಣವನ್ನು ಕೊಡುವುದರ ಬಗ್ಗೆ ಚಿಂತನೆಯಾಗಬೇಕು. ಮಕ್ಕಳೇನು ತಪ್ಪು ಮಾಡಿದ್ದರೆ? ಅವರ standard IQ ಜಾಸ್ತಿ ಇರಬೇಕಾದರೆ ಅದಕ್ಕೆ ತಕ್ಕಂತೆ ಪಾಠ ಹೇಳುವಂಥ ವ್ಯವಸ್ಥೆಗಳಾಗಬೇಕು ಎನ್ನುವುದಷ್ಟೇ ನನ್ನ ವಿನಂತಿ ಸಿದ್ದರಾಮಯ್ಯನವರೆ. ಬೇರೆ ದೃಷ್ಟಿಕೋನ ಇಟ್ಟುಕೊಂಡು ನಾನು ಈ ಮಾತು ಹೇಳುತ್ತಿಲ್ಲ. ISCE and CBSE ಗೆ ತಕ್ಕಂತೆ ಶಾಲೆಗಳಲ್ಲೇನಾದರೂ syllabus ಅನ್ನು improve ಮಾಡುವುದಕ್ಕೆ ಸಾಧ್ಯವೇ? ಆ standard ಗೆ ತಕ್ಕಂತೆ ಏನಾದರೂ ಒಳ್ಳೆಯದು ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೇ? ಈ ರೀತಿ ನೀವು ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಕೇಂದ್ರ

ಸರ್ಕಾರ Right to Education ನಲ್ಲಿ ಏನು ಹೇಳಿದೆ, ಇದೆಲ್ಲಾ ಸಂಗತಿಗಳ ಜೊತೆ ಜೊತೆಗೆ ಇದಂತೂ ನಿಶ್ಚಿತ, ಬಡವರ ಮಕ್ಕಳಿಗೆ ಶೇ.25 ಭಾಗ ಅಲ್ಲಿ ಶಿಕ್ಷಣದ ವ್ಯವಸ್ಥೆಯಾಗಬೇಕು. ಆ ಮಕ್ಕಳಿಗೆ ಎಲ್ಲ ರೀತಿಯಾದಂಥ ಅನುಕೂಲತೆಗಳಾಗಬೇಕು. ಇದು compulsory. ನೀವು ಈ ವರ್ಷ ಮಾಡುವುದಕ್ಕಾಗದಿದ್ದರೆ ಮುಂದಿನ ವರ್ಷ ಆಗಲೇಬೇಕೆಂದು ಹೇಳಿ ಯಾರು ಇದಕ್ಕೆ ಮುಂದೆ ಬರುವುದಿಲ್ಲ ಅವರ Permission ಅನ್ನು ಕಿತ್ತೊಗೆಯಿರಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಇದು ಆಗಲೇಬೇಕು. ಇದು ಬಹಳ ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಆದರೆ, ಒಂದಂತೂ ವ್ಯತ್ಯಾಸವಾಗಿದೆಯಲ್ಲ? ನಾವೆಲ್ಲ ಶಾಸಕರು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುತ್ತೇವೆ. ಯಾವುದೇ ಬಡವನ ಮನೆಗೆ ಹೋಗಲಿ, ಅಲ್ಲಿ ಒಬ್ಬ Degree ಪಡೆದವನಿರುತ್ತಾನೆ, ಒಬ್ಬ Computer Engineer ಇದ್ದಾನೆ, ಒಬ್ಬ ವಿದ್ಯಾವಂತ ಇದ್ದಾನೆ, ಸಿದ್ದರಾಮಯ್ಯನವರೆ, ಸಾಕಷ್ಟಾಗಿದೆ. 6–7 ವರ್ಷ, 10 ವರ್ಷಗಳ ಹಿಂದೆ ಹೋಲಿಕೆ ಮಾಡಿದರೆ ಆ ರೀತಿ ಸಾಕಷ್ಟು ವಿದ್ಯಾವಂತರು ಮುಂದೆ ಬರುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣದ ಅಗತ್ಯತೆ ಏನು ಎಂಬುದು ಅವರ ತಂದೆತಾಯಿಗೆ ಗೊತ್ತಾಗಿದೆ. ಹಿಂದೆ ತಹಶೀಲ್ದಾರ್ ಮಗ ತಹಶೀಲ್ದಾರ್ ಆಗುತ್ತಿದ್ದ, ಡಾಕ್ಟರ್ ಮಗ ಡಾಕ್ಟರ್ ಆಗುತ್ತಿದ್ದ, ಇಂಜಿನಿಯರ್ ಮಗ ಇಂಜಿನಿಯರ್ ಅಗುತ್ತಿದ್ದ, ರೈತರ ಮಗ ಕೃಷಿ ಮಾಡುತ್ತಿದ್ದ, ಕೂಲಿ ಮಾಡುವವನ ಮಗ ಕೂಲಿ ಮಾಡಿಕೊಂಡಿದ್ದ. ಆದರೆ, ಈಗ ಜ್ಞಾನೋದಯವಾಗಿದೆ. ಆದರೆ, ಆ ಮಕ್ಕಳನ್ನು ಓದಿಸಬೇಕೆಂಬ ಆಸಕ್ತಿ ಇದ್ದರೂ ಸಹ ಬಡತನ ಅವನನ್ನು ಕಿತ್ತು ತಿನ್ನುತ್ತಿದೆ. ಅದಕ್ಕೋಸ್ಕರವೇ ಕೇಂದ್ರ ಸರ್ಕಾರ ಚಿಂತನೆ ಮಾಡಿ 25% ಈ ರೀತಿಯ ಬಡ ಮಕ್ಕಳಿಗೆ ಶಿಕ್ಷಣ ಕೊಡಬೇಕು, free ಶಿಕ್ಷಣ ಸಿಗಬೇಕು ಎನ್ನುವಂಥ ಕಾನೂನು ತಂದಿರುವುದು. ಹತ್ತಾರು ವರ್ಷಗಳ ಹಿಂದೆ ಆಗಬೇಕಾಗಿತ್ತು. ಈಗಲಾದರೂ ಆಗಿದೆ. ಅದನ್ನು ಶಿಕ್ಷಣ ಸಚಿವರು ಸ್ವಾಗತ ಮಾಡಿದ್ದಾರೆ. Private Education Institution ನಲ್ಲಿ ಇದನ್ನು ಬಿಗಿ ಮಾಡಬೇಕು. ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಬಹಳ ಒಳ್ಳೆಯ ಕೆಲಸ ಮಾಡುತ್ತಿವೆ. ಅವರು ಈ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕೆಂದರೆ ಹೊಸದಾಗಿ ನಮ್ಮ ಸಚಿವರಾದ ಸಿ.ಟಿ. ರವಿಯವರು ಬಹಳ ಬಿಗಿ ಮಾಡುವುದಕ್ಕೆ ಹೋಗಿ ನಿಮ್ಮ ಸಹವಾಸವೇ ಬೇಡ ಎಂದು ಬಿಟ್ಟು ಹೋಗುವ ಹಾಗೆ ಮಾಡಬೇಡಿ. ಬಿಗಿ

ತನ್ನಿ. Quality ಯಲ್ಲಿ ಬಿಗಿ ತನ್ನಿ. ನಮ್ಮ ಸರ್ಕಾರಿ ಶಾಲೆಗಳನ್ನು competitionನಲ್ಲಿ ಮಾಡುವುದು ಒಳ್ಳೆಯದು. ಎಲ್ಲಿದೆ? ಸಿದ್ದರಾಮಯ್ಯನವರೆ, ನಮ್ಮ ಆಸ್ಪತ್ರೆ ಇದೆ ಅಲ್ಲಿಗೆ ಯಾರೂ patients ಹೋಗುವುದಿಲ್ಲ, ಹೋದರೆ ವಾಪಸ್ ಬರುವ guarantee ಇಲ್ಲ. ಅವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ನಮ್ಮ ಶಿಕ್ಷಣ ಸಂಸ್ಥೆಗಳಿವೆ. ಅಲ್ಲಿಗೆ ಹೋಗುವುದಿಲ್ಲ. ಏಕೆಂದರೆ, ಅಲ್ಲಿ ಒಳ್ಳೆಯ ಶಿಕ್ಷಣ ಸಿಗುತ್ತದೆ. Private ಶಿಕ್ಷಣ ಸಂಸ್ಥೆಗಳಿಗೆ ಹೋಗುತ್ತಾರೆ. ಇದಕ್ಕೆ ನೀವು ಖಾಸಗಿಯವರನ್ನು ದೂರಬೇಡಿ. ಅವರು ಇನ್ನೂ ಒಳ್ಳೆಯ standard ನಲ್ಲಿ ನಡೆಸಲಿ. ನಮ್ಮ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ಮತ್ತೊಂದು ಮಗದೊಂದು ಅವುಗಳನ್ನು ಆ ಮಟ್ಟಕ್ಕೆ ಏರಿಸುವ ಪ್ರಯತ್ನ ಮಾಡಿದಾಗ ಅನುಕೂಲವಾಗುತ್ತದೆ. ಅದಕ್ಕೋಸ್ಕರ ನಾನು ಕಾಗೇರಿಯವರಿಗೆ ವಿನಂತಿ ಮಾಡುವುದು. Primary ಶಿಕ್ಷಣಕ್ಕೆ ಆದ್ಯತೆ ಕೊಡದಿದ್ದರೆ, ಅಲ್ಲಿ standard ಜಾಸ್ತಿ ಮಾಡದಿದ್ದರೆ ಅಲ್ಲಿಯ TCH ನವರಿಗೆ ಇನ್ನೂ ಹೆಚ್ಚು training ಅನ್ನು ಕೊಟ್ಟು ಅವರು 3–4 ವರ್ಷಗಳಲ್ಲಿ Degree ಮಾಡಬೇಕೆಂದು ಹೇಳಿ. Compulsorily, primary ಶಾಲೆಯಲ್ಲಿ ಪಾಠ ಮಾಡುವವರು Degree ಮಾಡಬೇಕು, Master Degree ತೆಗೆದುಕೊಳ್ಳಬೇಕು ಎಂದು ಇದನ್ನು ನೀವು ಮಾಡಿ. ಕ್ರಾಂತಿಕಾರಿ ಬದಲಾವಣೆಯಾಗುತ್ತದೆ. ಶಿಕ್ಷಣ ಮಟ್ಟದಲ್ಲಿ ಬದಲಾವಣೆಯಾಗುತ್ತದೆ. ಮಕ್ಕಳೂ ಸಹ ನಮ್ಮ ನಿರೀಕ್ಷೆಗೆ ತಕ್ಕಂತೆ ಅವರು ಶಿಕ್ಷಣ ಪಡೆಯುತ್ತಾರೆ. ಇದು basic. ಪ್ರಾರಂಭದ ಹಂತದಲ್ಲಿ ಅದಕ್ಕೆ ಸರಿಯಾದ ರೀತಿಯಲ್ಲಿ foundation ಹಾಕಿದರೆ ಅವರು ಮುಂದೆ ಭವ್ಯ ಭಾರತವನ್ನು ಕಟ್ಟುವುದಕ್ಕೆ, ಅವರ ಮನೆತನ ಉಳಿಸುವುದಕ್ಕೆ, ದೇಶ ಕಟ್ಟುವುದಕ್ಕೆ, ಒಳ್ಳೆಯ ಶಿಕ್ಷಣ ಕೊಡುವುದಕ್ಕೆ ಅವಕಾಶವಾಗುತ್ತದೆ. ಈ ದಿಕ್ಕಿನಲ್ಲಿ serious ಆಗಿ ಯೋಚನೆ ಮಾಡಿ. ಏನೇ ಅಡ್ಡಿ ಆತಂಕಗಳು ಬಂದರೂ ಪರವಾಗಿಲ್ಲ. ಕೆಲವು ಬಗೆಯಾದ ಕ್ರಮಗಳನ್ನು ತೆಗೆದುಕೊಂಡು ಅದನ್ನು ಸರಿಪಡಿಸುವ ಪ್ರಯತ್ನ ಮಾಡಿ ಎನ್ನುವುದಷ್ಟೇ ನನ್ನ ವಿನಂತಿ.

ಅಧ್ಯಕ್ಷರು : ಸಚಿವರೆ, reply ಮಾಡಿ.

ಶ್ರೀ ಸಿದ್ದರಾಮಯ್ಯ : ಊಟವಾದ ಮೇಲೆ ಹೇಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ಮುಗಿಸಿಬಿಡಿ.

ಶ್ರೀ ಸಿದ್ದರಾಮಯ್ಯ : ಆಮೇಲೆ ಬಂದು ಉತ್ತರ ಕೊಡಿ.

ಅಧ್ಯಕ್ಷರು : ಅವರು ಉತ್ತರ ಕೊಟ್ಟಾಗಿದೆ.

ಶ್ರೀ ಸಿದ್ದರಾಮಯ್ಯ : ಕಾಗೇರಿಯವರೆ, ಆಮೇಲೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಒಂದು ವಾರದಿಂದ ಕಾಯುತ್ತಿದ್ದೇನೆ. ದಯಮಾಡಿ, ಈಗ ನೀವು ಮುಗಿಸಿಬಿಡಿ. ಆಮೇಲೆ ಊಟಕ್ಕೆ ಹೋಗೋಣ.

ಅಧ್ಯಕ್ಷರು : ಮುಗಿಸಿಬಿಡಿ.

ಶ್ರೀ ಸಿದ್ದರಾಮಯ್ಯ : ಆಮೇಲೆ ಮಾಡಿ ಎನ್ನುತ್ತಿದ್ದಾರೆ.

ಅಧ್ಯಕ್ಷರು : ಆಯಿತು. ಈಗ ಪ್ರಕಟಣೆ.

6. ಪ್ರಕಟಣೆ :

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಕರ್ನಾಟಕ ವಿಧಾನ ಮಂಡಲಗಳ ಉಭಯ ಸದನಗಳ ಮಾನ್ಯ ಸದಸ್ಯರುಗಳ ಹಾಗೂ ಮಾನ್ಯ ಮಾಧ್ಯಮ ಪ್ರತಿನಿಧಿಗಳ ಗೌರವಾರ್ಥ ಈ ದಿನ ಮಧ್ಯಾಹ್ನ 1–30 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದು ತಮ್ಮೆಲ್ಲರನ್ನು ಆಹ್ವಾನಿಸಿರುತ್ತಾರೆ. ತಾವುಗಳೆಲ್ಲರೂ ಭೋಜನ ಕೂಟದಲ್ಲಿ ಭಾಗವಹಿಸುವಂತೆ ಕೋರುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಶಿಕ್ಷಣದ ಹಕ್ಕು ಕಾಯಿದೆಯನ್ನು ನಾವು ಈ ವರ್ಷದಿಂದ ಕಡ್ಡಾಯವಾಗಿ ಜಾರಿಗೊಳಿಸುತ್ತಿರುವ ವಿಷಯದ ಬಗ್ಗೆ ಅನೇಕ ಸದಸ್ಯರುಗಳು ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾ ನಮ್ಮ ಹಿರಿಯ ನಾಯಕರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ಯಡಿಯೂರಪ್ಪನವರು ಸಾಕಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಸಿದ್ದರಾಮಯ್ಯನವರೂ ಸಹ ನಮ್ಮ ಮುಂದೆ ಒಳ್ಳೆಯ ಸಲಹೆಗಳನ್ನು ಇಟ್ಟಿದ್ದಾರೆ. ಅನೇಕ ಸಂದರ್ಭದಲ್ಲಿ ಈ ವಿಷಯಗಳು ಇಲ್ಲಿ ಚರ್ಚೆ ಆಗಿರುತ್ತವೆ. ಇದಕ್ಕೆ ಒಂದು ಸಲ ಉತ್ತರ ಕೊಟ್ಟಿರುವುದರಿಂದ ಇನ್ನು ವಿಸ್ತೃತವಾಗಿ ಹೇಳುವುದಕ್ಕೆ ಬಯಸುವುದಿಲ್ಲ. ಕೆಲವು ಮಾತುಗಳನ್ನು ನಾನು ಸ್ಪಷ್ಟವಾಗಿ ಆಡುವುದಕ್ಕೆ ಬಯಸುತ್ತೇನೆ. ಆ ಪಾಯಿಂಟ್‌ಗಳನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷದಿಂದ ಈ ಕಾಯಿದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಿದ್ದೇವೆ ಎನ್ನುವ ಹೆಮ್ಮೆ ನಮಗೆ ಇದೆ. ಒಂದು ಲಕ್ಷ ಮಕ್ಕಳಲ್ಲಿ ನಾವು ಕೊಡಬೇಕಾದಂಥದ್ದರಲ್ಲಿ ಸುಮಾರು 50 ಸಾವಿರ ಮಕ್ಕಳಿಗೆ ನಾವು ಅಡ್ಮಿಷನ್ ಕೊಟ್ಟಿದ್ದೇವೆ. 50% ಯಶಸ್ಸನ್ನು ಸಾಧಿಸುವುದಕ್ಕೆ ನಮಗೆ ಈ ವರ್ಷದಲ್ಲಿ ಸಾಧ್ಯವಾಗಿದೆ. ಈ ಅಂಕಿ ಸಂಖ್ಯೆಗಳನ್ನು ಕೇಳಿದ ಹಿನ್ನೆಲೆಯಲ್ಲಿ ನಾನು ಇದನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಆದರೆ ಖಾಸಗಿ ಆಡಳಿತ ಮಂಡಳಿಯವರು ತಾತ್ವಿಕವಾಗಿ ಈ ವರ್ಷದಿಂದ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಸಿದ್ಧರಿದ್ದಾರೆ. ಖಾಸಗಿ ಆಡಳಿತ ಮಂಡಳಿಗಳು ನಮ್ಮ ರಾಜ್ಯದ ಶೈಕ್ಷಣಿಕ ಪ್ರಗತಿಗೆ ಬಹಳ ದೊಡ್ಡ ಕೊಡುಗೆ ಕೊಟ್ಟಿರುವುದನ್ನೂ ಸಹ ನಾನು ಗುರುತಿಸುತ್ತೇನೆ. ಆದರೆ ಯಾವುದೇ ಖಾಸಗಿ ಆಡಳಿತ ಮಂಡಳಿಗಳು ಇದನ್ನು ಅನುಷ್ಠಾನಗೊಳಿಸಿಕೊಳ್ಳುವುದಕ್ಕೆ ನಿರ್ಲಕ್ಷ್ಯ ತೋರಿದರೆ ನಿರ್ದಾಕ್ಷಿಣ್ಯವಾಗಿ ಕಠಿಣವಾದ ಕಾನೂನು ಕ್ರಮ ಕೈಗೊಳ್ಳುತ್ತೇನೆ ಎನ್ನುವಂಥ ಮಾತನ್ನು ನಾನು ಸ್ಪಷ್ಟಪಡಿಸಿದ್ದೇನೆ. ನಾನು ಅದನ್ನು ಮತ್ತೊಂದು ಸಲ ಉಚ್ಚರಿಸುವುದಕ್ಕೆ ಬಯಸುತ್ತಿದ್ದೇನೆ. ಯಾವುದೇ ಖಾಸಗಿ ಆಡಳಿತ ಮಂಡಳಿಗಳು ಇರಲಿ, ಯಾವುದೇ ಮಕ್ಕಳಿಗೆ ತಾರತಮ್ಯ ಆಗಬಾರದು. ತಾರತಮ್ಯ ಆಗುವುದು

ಒಂದು ಮಾನವೀಯ ಸಮಾಜದ ಲಕ್ಷಣವೇ ಅಲ್ಲ. ಯಾವುದೇ ಕಾರಣಕ್ಕೂ ತಾರತಮ್ಯ ಎಲ್ಲಿಯೂ ಆಗಬಾರದು. ನಾವು ವಿವಿಧತೆಯಲ್ಲಿ ಏಕತೆಯನ್ನು ಕಂಡಿರುವಂಥವರು. ವಿವಿಧತೆಗಳು ಸಹಜವಾಗಿ ಇವೆ, ಆದರೆ ಅದರೊಳಗಡೆ ಏಕತೆಯ ಭಾವನೆಯನ್ನು ಮೂಡಿಸುವುದಕ್ಕೆ ನಾವು ನಿರಂತರವಾಗಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾದವರು, ತೊಡಗಿಸಿಕೊಂಡಿರುವಂಥವರು. ಸಂವಿಧಾನದ ಆಶಯವು ಇದೇ ಆಗಿದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವುದಕ್ಕೆ ಇದ್ದಂಥ ವಿಶಾಲವಾದ ದೃಷ್ಟಿಕೋನದಿಂದ ನಾವೆಲ್ಲರೂ ನಮ್ಮನ್ನು ತೊಡಗಿಸಿಕೊಂಡು ಮುಂದೆ ಹೋಗುತ್ತಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ಇರಲ್ಲಿ ಇನ್ನು ಎಲ್ಲೇ ಇರಲ್ಲಿ ಯಾವುದೇ ರೀತಿಯಲ್ಲಿ ತಾರತಮ್ಯ ಆಗುವುದಕ್ಕೆ ಅವಕಾಶಗಳು ಮಾಡುವುದು ಸರಿಯಲ್ಲ. ಆ ರೀತಿ ಯಾವುದಾದರೂ ದೂರುಗಳು ಬಂದಿದ್ದರೆ ಅಂತಹ ಶಿಕ್ಷಣ ಸಂಸ್ಥೆಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣವಾದ ಕ್ರಮ ಕೈಗೊಳ್ಳುತ್ತೇವೆ ಮತ್ತು ಈ ಕುರಿತಂತೆ ಸಾಕಷ್ಟು ಜಾಗ್ರತೆಯನ್ನು ಮೂಡಿಸಬೇಕು ಎನ್ನುವಂಥದ್ದರ ಹಿನ್ನೆಲೆಯಲ್ಲಿ ನಾವು ಈಗಾಗಲೇ ಅವರ ಜೊತೆಯಲ್ಲಿ ಸಮಾಲೋಚನೆ ಸಭೆಯನ್ನು ಮಾಡುತ್ತಿದ್ದೇವೆ. ಒಂದು–ಎರಡು ವರ್ಷ ಕೆಲವು Communication gapಗಳು ಸಹಜವಾಗಿ ನಿರ್ಮಾಣ ಆಗುತ್ತಿರುತ್ತವೆ. ಆ ರೀತಿ ಯಾವುದೇ Communication gapಗಳು ನಿರ್ಮಾಣ ಆಗಬಾರದು ಎನ್ನುವುದಕ್ಕೆ ನಮ್ಮ ಪ್ರಚಾರದ ನೀತಿಯನ್ನು ಇನ್ನಷ್ಟು ಹೆಚ್ಚು ವಿಸ್ತಾರಗೊಳಿಸಿಕೊಂಡು ಅವರ ಜೊತೆಯಲ್ಲಿ ಸಂವಾದಗಳನ್ನು ಮಾಡಿ SDMC ಯವರು ಮತ್ತು ಉಳಿದ ಜನಪ್ರತಿನಿಧಿಗಳಲ್ಲಿ ಜಾಗ್ರತೆಯನ್ನು ಮೂಡಿಸಿ ನಮ್ಮ RTE ಯನ್ನು ಅನುಷ್ಠಾನಗೊಳಿಸುವುದಕ್ಕೆ ಮತ್ತು ಜಾಗ್ರತೆ ಮೂಡಿಸುವ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ನಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದೇವೆ. ಇದನ್ನು ಮುಂದಿನ ವರ್ಷದಿಂದ 100 ಕ್ಕೆ 100 ರಷ್ಟು ಜಾರಿಗೊಳಿಸುವುದಕ್ಕೆ ಬೇಕಾದಂಥ ಪ್ರಯತ್ನಗಳನ್ನು ನಾವು ಈಗಾಗಲೇ ಪ್ರಾರಂಭಿಸಿರುತ್ತೇವೆ. ಆ ಹಿನ್ನೆಲೆಯಲ್ಲಿ ಈ ರೀತಿಯ ಚಟುವಟಿಕೆಗಳನ್ನು ನಾವು ಹಾಕಿಕೊಳ್ಳುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಕುಸ್ಮಾದ ಅಧ್ಯಕ್ಷರು ಅವರು ಮಾತನಾಡಿರುವಂಥ ವಿಷಯಗಳ ಬಗ್ಗೆ ಅವರು ಉಲ್ಲೇಖಿಸಿದ್ದಾರೆ. ಈಗಾಗಲೇ ನಾನು ನನ್ನ ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇನೆ. ಒಂದು ಮಾನವೀಯ ಸಮಾಜ ಈ ರೀತಿಯ ಶಬ್ದಗಳನ್ನು, ಅವರು ಬಳಸಿರುವಂಥ ವಾಕ್ಯಗಳನ್ನು ಒಪ್ಪಿಕೊಳ್ಳುವುದಕ್ಕೆ

ಸಧ್ಯವಿಲ್ಲ. ಅದನ್ನು ಸಹ ನಾವು ಖಂಡಿಸಿದ್ದೇವೆ. ಅವರ ಮೇಲೆ ಕೇಸ್ ಬುಕ್ ಆಗಿದ್ದು ಕಾನೂನು ತನ್ನ ಕ್ರಮ ತೆಗೆದುಕೊಳ್ಳುತ್ತಿದೆ. ಹಾಗಾಗಿ ನಾವು ಇಂತಹ ಒಂದು ಸಂದರ್ಭದಲ್ಲಿ, ಆಧುನಿಕವಾಗಿ ವೈಜ್ಞಾನಿಕವಾಗಿ ಮುಂದುವರೆದು ಇಷ್ಟೊಂದು ಅಭಿವೃದ್ಧಿ ಪರ ಚಿಂತನೆಗಳು ನಡೆಯುತ್ತಿರುವಾಗ ಈ ರೀತಿ ಮಾತುಗಳನ್ನು ಯಾರೇ ಹೇಳಿದ್ದರೂ ಯಾರೂ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಂಪ್ಲೇಂಟ್ ಆಗಿ ಕೇಸ್ ಬುಕ್ ಆಗಿದೆ.

ಶ್ರೀ ಸಿದ್ದರಾಮಯ್ಯ : ನೀವು ಅವರಿಗೆ ಏನು ಮಾಡಿದಿರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಇಂತಹ ಸಂಸ್ಥೆಯವರು ಎಂದು ಏನೂ ಅಧಿಕೃತವಾಗಿ ಗೊತ್ತಿಲ್ಲ. ಅವರು ಖಾಸಗಿ ಆಡಳಿತ ಶಿಕ್ಷಣ ಮಂಡಳಿ ಅಧ್ಯಕ್ಷರು.

ಶ್ರೀ ಸಿದ್ದರಾಮಯ್ಯ : ಅವರು ಯಾರೇ ಆಗಿರಲಿ. Is he not Law abiding?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರ ಮೇಲೆ ಕೇಸ್ ಬುಕ್ ಆಗಿದೆ. ಅವರದ್ದು ಯಾವ ಸಂಸ್ಥೆ ಎನ್ನುವುದು ಗೊತ್ತಾದರೆ ಅದರ ಬಗ್ಗೆ ಬೇಕಾದರೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಅವರಿಗೆ notice ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೇಸ್ ಬುಕ್ ಆಗಿ ತನಿಕೆ ನಡೆಯುತ್ತಿದೆ. ಕಾನೂನು ತನ್ನ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಸಿದ್ದರಾಮಯ್ಯ : Director of Public Instructions ಅವರಿಗೆ ಗೊತ್ತಿರುವುದಿಲ್ಲವೆ?

ಶ್ರೀ ಟಿ.ಬಿ. ಜಯಚಂದ್ರ : ಅವರು ಕೆಟ್ಟ ದೃಷ್ಟಿಯಿಂದ ಇಂತಹ ಹೇಳಿಕೆಗಳನ್ನು ಕೊಟ್ಟಾಗ ಅವರು ಎಷ್ಟರ ಮಟ್ಟಿಗೆ ಸಮಾಜಕ್ಕೆ responsible ಆಗಿರುತ್ತಾರೆ? ಅಂತಹ ಪ್ರಶ್ನೆ ಬಂದಾಗ, ಅದನ್ನು ಹತ್ತಿಕ್ಕುವ ಮಟ್ಟಿಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಹೇಳುವುದು ಸರಿ ಇದೆ. ಸಮಾಜದಲ್ಲಿ ಒಂದು ಜಾಗ್ರತೆ ಮೂಡಿರುವ ಪರಿಣಾಮವಾಗಿ ಮತ್ತು ಆ ಸಂಘಟನೆಯಲ್ಲಿ ಒಂದು ಜಾಗ್ರತೆ ಇರುವ ಕಾರಣಕ್ಕಾಗಿ ಅವರು ತಕ್ಷಣ ರಾಜೀನಾಮೆ ಕೊಡಬೇಕಾಗಿತ್ತು. ಅವರು ಆ ಸ್ಥಾನದಿಂದ ರಾಜೀನಾಮೆ ಕೊಟ್ಟರು. ನಾನು ಮುಂದೆ ಹೇಳುತ್ತೇನೆ ಸರ್.

SRI SIDDARAMAIAH : Whether he continues as the chairman of KUSMA or not, it is immaterial for us. We are not concerned about it. We are concerned about the statement. He made a statement as a chairman of KUSMA. It is un-called for. It attracts the provision of the enforcement of the Karnataka Civil Rights Act. ಅದರ ಪ್ರಕಾರ ನೀವು ಕ್ರಮ ತೆಗೆದುಕೊಳ್ಳಬೇಕು. ನಿಮ್ಮ ಇಲಾಖೆಯವರು complaint ಕೊಡಬೇಕು. ಯಾರೂ ಕೊಡದೇ ಹೋದರೇ ಅವರನ್ನು ಆರೆಸ್ಟ್ ಮಾಡಬೇಕು. It is a non-bailable offence. ಬೇರೆಯ ವರಿಗೊಂದು ಅವರಿಗೊಂದು ಕಾನೂನಾ? ನೀವು ಹಾಗೆ ಬಿಟ್ಟುಬಿಟ್ಟರೆ ಇನ್ನೊಬ್ಬರು ಇನ್ನೊಂದನ್ನು ಹೇಳಿ ಬಿಡುತ್ತಾರೆ. Dignity ಹಾಳಾಗಿ ಬಿಡುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಕುಸ್ಮಾದ ಅಧ್ಯಕ್ಷರ ಮೇಲೆ ಅಂದರೆ ಈಗ ಅವರು ಮಾಜಿ ಅಧ್ಯಕ್ಷರು, CR No. 173/12 U/S 3/10 SC/ST Act-1989 ಇದರ ಅಡಿಯಲ್ಲಿ..

SRI SIDDARAMAIAH : Why he has not been arrested so far?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ.

(ಗೊಂದಲ)

SRI SIDDARAMAIAH : You speak to the Commissioner. Why he has not been arrested?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಉಳಿದಂತೆ ಕಾನೂನು ಏನು ಕ್ರಮಕೈಗೊಳ್ಳಬೇಕು ಅದು ತೆಗೆದುಕೊಳ್ಳುತ್ತದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ Commissioner of Public Instructions ಮಾಡಲಿ. Why he has not enquired?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಏನು ಕಾನೂನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ನಾವು follow-up ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : The moment, a case has to be registered and he has to be arrested.

ಶ್ರೀ ನೆ.ಲ. ನರೇಂದ್ರಬಾಬು : ಅವರ ಬಗ್ಗೆ soft corner ಏಕೆ? ಸಮಾಜವನ್ನು provoke ಮಾಡತಕ್ಕಂಥ, ಹೀನಾಯವಾಗಿ ಅಮಾನವೀಯ ಹೇಳಿಕೆಗಳನ್ನು ಕೊಡತಕ್ಕಂಥವರಿಗೆ...

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆಯೂ ಕಾನೂನು ತನ್ನ ಕ್ರಮ ತೆಗೆದುಕೊಳ್ಳುತ್ತದೆ. ಸರ್ಕಾರ ಯಾವುದೇ ಸಂದರ್ಭದಲ್ಲಿಯೂ ಯಾರು ಕಾನೂನನ್ನು ಮೀರಿ ಕಾನೂನಿಗೆ ವಿರುದ್ಧವಾಗಿ ಯಾವುದೇ ರೀತಿಯಲ್ಲಿ ವರ್ತಿಸಿದರೂ ಸಹ ಕಾನೂನು ನಿಶ್ಚಿತವಾಗಿ ತನ್ನ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ವ್ಯಕ್ತ ಪಡಿಸುತ್ತೇನೆ. ಮುಂದುವರೆದು ಇನ್ನು ಏನೇನು ಆಗಬೇಕಾಗಿದೆಯೋ ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರ್ಕಾರದ ಮಟ್ಟದಲ್ಲಿಯೂ ಸಹ ನಾವು ಚರ್ಚಿಸುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅಂಕಿ ಸಂಖ್ಯೆಗಳನ್ನು ಐಡಿಂಟಿಫೈ ಮಾಡಿದ್ದೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಅದನ್ನು ಮೊದಲು ಹೇಳಿದೆ.

ಅಧ್ಯಕ್ಷರು : ಎಲ್ಲಾ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇನ್ನೊಂದು ಸಲ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 1.12 ಲಕ್ಷ ಅದರಲ್ಲಿ ವ್ಯತ್ಯಾಸ ಇದೆ. ಸರ್ಕಾರ ಒಂದು ಲಕ್ಷವೆಂದು ನಾನು ಹೇಳುತ್ತಿದ್ದೇನೆ. 48,500 ರಷ್ಟಾಗಿದೆ, ಸುಮಾರು 50% ದಷ್ಟು ಆಗಿದೆ. 100 ಏಕೆ ಆಗಿಲ್ಲ ಎನ್ನುವುದರ ಬಗ್ಗೆ ನನ್ನ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಈ ವರ್ಷ ಐಡೆಂಟಿಫೈ ಮಾಡದೆ ಇರುವವರನ್ನು ಮುಂದಿನ ವರ್ಷ ಏನು ಮಾಡುತ್ತೀರಿ? ಬ್ಯಾಕ್‌ಲಾಗ್ ಅನ್ನು ಮುಂದಿನ ವರ್ಷ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಆ ವಿಷಯದ ಬಗ್ಗೆ ಉತ್ತರವನ್ನು ಕೊಡುವಾಗ ಸುದೀರ್ಘವಾಗಿ ಹೇಳಿದ್ದೇನೆ. ನೀವು ಇರಲಿಲ್ಲ, ಅದಕ್ಕಾಗಿ ನಿಮ್ಮ ಹತ್ತಿರ ಇನ್ನೊಂದು ಸಲ ವೈಯಕ್ತಿಕವಾಗಿ ಹೇಳುತ್ತೇನೆ. ಮತ್ತೊಮ್ಮೆ ಹೇಳಬೇಕೆಂದರೆ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಸಮಯ ಆದರೂ ಪರವಾಗಿಲ್ಲ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸಮಯವೆಂದು ಅಲ್ಲ, ಇದು ಬೆಳಗ್ಗೆಯಿಂದ ಇದೇ ಆಗಿದೆ.

ಶ್ರೀ ಸಿದ್ದರಾಮಯ್ಯ : ನಾನು ಇರಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಇರಲಿಲ್ಲ. ನಾನು ನಿಮ್ಮ ಹತ್ತಿರ ಇನ್ನೊಂದು ಸಲ ವೈಯಕ್ತಿಕವಾಗಿ ಹೇಳುತ್ತೇನೆ. ಮತ್ತೊಮ್ಮೆ ಹೇಳಬೇಕೆಂದರೆ ಹೇಳುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮತ್ತೊಮ್ಮೆ ಹೇಳಿ ಪರವಾಗಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆದರೆ ಅಧ್ಯಕ್ಷರು ಸಮಯ ಆಯಿತು ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇನ್ನೊಂದು ಬಾರಿ ಹೇಳಿ ಪರವಾಗಿಲ್ಲ, ಅಧ್ಯಕ್ಷರು ಒಪ್ಪಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬೆಳಿಗ್ಗೆಯಿಂದಲೂ ಈ ವಿಷಯದ ಬಗ್ಗೆಯೇ ಚರ್ಚೆ ಅಗಿದೆ. ಅದರ ಹಿನ್ನೆಲೆಯಲ್ಲಿ. . .

(ಗೊಂದಲ)

ಅಧ್ಯಕ್ಷರು : ಬೆಳಗ್ಗೆಯಿಂದಲೂ ಇದು ಒಂದೇ ವಿಷಯ ಚರ್ಚೆಯಾಗಿದೆ.

(ಗೊಂದಲ)

SRI SIDDARAMAIAH : It is very important.

(ಗೊಂದಲ)

ಅಧ್ಯಕ್ಷರು : Important ಇರುವುದರಿಂದ ಬೆಳಗ್ಗೆಯಿಂದ ಚರ್ಚೆ ಯಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವಕಾಶ ವಂಚಿತರಿಗೆ ಕೊಡುವಾಗ, ಸಮಯ ಆಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ. It is very very important.

ಸಾಮಾಜಿಕ ನ್ಯಾಯ ಒದಗಿಸಿಕೊಟ್ಟರೆ ಇದಕ್ಕಿಂತ ದೊಡ್ಡದು ಏಳಿಗೆ ಯಾವುದೂ ಇರುವುದಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಸಚಿವರೆ, ತಾವು ಸ್ಪಷ್ಟವಾಗಿ ಉತ್ತರ ಕೊಟ್ಟಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಎಲ್ಲಿ ಕೊಟ್ಟಿದ್ದೀರಿ. ನೀವು ಎರಡು reply ಕೊಟ್ಟಿದ್ದೀರಿ. ಒಂದು ಕಡೆ 47,000 ಎಂದು ಹೇಳುತ್ತೀರಿ. ಇನ್ನೊಂದು ಕಡೆ 50,000 ಎಂದು ಹೇಳುತ್ತೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು round figure ಹೇಳಿದ್ದೇನೆ. ನಮ್ಮ ಹತ್ತಿರ ಎಲ್ಲಾ ಅಂಕಿ-ಸಂಖ್ಯೆ ಇದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಎರಡು reply ಕೊಟ್ಟಿದ್ದೀರಿ. ನನ್ನ ಪ್ರಶ್ನೆಗೆ ಒಂದು reply ಇದೆ. ಮಾನ್ಯ ಖಾದರ್‌ರವರಿಗೆ ಒಂದು reply ಇದೆ. ನಿಮ್ಮದು ಎರಡು reply ಬಂದಿದೆ. ಮಾನ್ಯ ಖಾದರ್‌ರವರಿಗೆ 47,000 ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಗೆ 50,000 ಎಂದು ಹೇಳಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಈಗಲೂ 50,000 ಎಂದು ಹೇಳುತ್ತಿದ್ದೇನೆ. ನಮ್ಮ ಹತ್ತಿರ ಸುಮಾರು 48,000 48,500 exact figure ಇದೆ. ಆದರೆ ನಮಗೆ ಇನ್ನೂ 1,000, 1,500 ಇದೆ ಎಂದು ಅಂಕಿ-ಸಂಖ್ಯೆಗಳು ಬರುತ್ತಿವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಏಕೆ ಹೇಳುತ್ತಿದ್ದೇವೆಂದರೆ. . .

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಗೊತ್ತಾಯಿತು ಸಾರ್. ನನಗೆ ಅರ್ಥವಾಯಿತು.

(ಗೊಂದಲ)

SRI SIDDARAMAIAH : We want to know from the Government, because you are the man to implement. ಅದಕ್ಕೋಸ್ಕರ ICSE, CBSE ನಲ್ಲಿ ಎಷ್ಟಾಗಿದೆ, ಸರ್ಕಾರಿ ಶಾಲೆಗಳಲ್ಲಿ ಎಷ್ಟಾಗಿವೆ, aided ನಲ್ಲಿ ಎಷ್ಟಾಗಿದೆ ಮತ್ತು un-aided ನಲ್ಲಿ ಎಷ್ಟಾಗಿದೆ ಎನ್ನುವ ವಿವರ ಒದಗಿಸಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಎಲ್ಲಾ ವಿವರಗಳನ್ನು ತರಿಸಿ ದೊರಕಿಸಿಕೊಡುತ್ತೇನೆ. ಒಟ್ಟಾರೆ ಏನಾಗಿದೆ ಎನ್ನುವುದನ್ನು ನಾನು ಹೇಳಿದ್ದೇನೆ. ಇನ್ನು ಅದರದ್ದು ಏನು bifurcation ಬೇಕು, ಯಾವ್ಯಾವ ಶಾಲಾವಾರು ಉಳಿದಂತೆ ಮಾಹಿತಿ ಇದೆ. ಒದಗಿಸಿಕೊಡುತ್ತೇನೆ.

(ಗೊಂದಲ)

SRI SIDDARAMAIAH : This House is expected to know.

(ಗೊಂದಲ)

ಅಧ್ಯಕ್ಷರು : ಹೇಳಿದರು, ತಾವು ಇರಲಿಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : Aided ನಲ್ಲಿ ಎಷ್ಟು, un-aided ನಲ್ಲಿ ಎಷ್ಟು ಎಂದು ಹೇಳಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : Detail ಕೊಡುತ್ತೇನೆ ಎಂದು ಹೇಳಿದ್ದೆನಲ್ಲಾ?.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒದಗಿಸಿಕೊಡುತ್ತೇನೆ, ಒದಗಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಒಂದು ಲಕ್ಷಕ್ಕಿಂತ ಹೆಚ್ಚು identify ಮಾಡಿದ್ದಾರೆ. ಅದರಲ್ಲಿ 50% admission ಆಯಿತು. ಇನ್ನು 50% ಮಕ್ಕಳಿಗೆ ಅನ್ಯಾಯ ಆಗಿದೆ. ಅವರನ್ನು ಏನು ಮಾಡಬೇಕೆಂದು ಯೋಚನೆ ಮಾಡಬೇಕು. ಇಲಾಖೆಯವರು ಅದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದರೆ ಅವರಿಗೂ ಸಿಗುತ್ತಿತ್ತು. ಈಗ ಅಷ್ಟು ಜನರಿಗೆ deny ಆಗಿದೆಯಲ್ಲಾ, ಅವರಿಗೆ

ಮುಂದಿನ ವರ್ಷ ಯಾವ classes ಬರುತ್ತದೆ ಆ Class ಗೇ ಸೇರಿಸುವಂತೆ ಮಾಡಬೇಕು. ಮುಂದಿನ ವರ್ಷ identify ಮಾಡಿದವರನ್ನೂ ಕೂಡ ಸೇರಿಸಬೇಕು. ಎರಡೂ ಒಟ್ಟಿಗೇ ಆಗಬೇಕು.

(ಗೊಂದಲ)

ಡಾ. ಹೆಚ್.ಸಿ. ಮಹದೇವಪ್ಪ : Clarity ಇದೆ. ಎಷ್ಟು admission ಕೊಟ್ಟಿದ್ದೀರಿ, ಉಳಿದಿರುವುದು ಎಷ್ಟಿವೆ institution-wise ತೆಗೆದುಕೊಂಡು, ಉಳಿದಿದ್ದು carry over ಮಾಡಬೇಕೆನ್ನುವುದು ನಮ್ಮ opinion ಇದೆ.

(ಗೊಂದಲ)

ಶ್ರೀ ವಿಶ್ವೇಶ್ವ ಹೆಗಡೆ ಕಾಗೇರಿ : ಹೇಳಿದೆನಲ್ಲಾ, ಕೊಡೋಣ. ಉಳಿದಿರುವ ವಿವರಗಳನ್ನು ಕೊಡೋಣ ಮಾನ್ಯ ಅಧ್ಯಕ್ಷರೆ. ಈಗ ತಾವು ಹೇಳಿರುವ ಸಮಯವೂ ಮುಗಿಯುತ್ತಿರುವುದರಿಂದ ನಾನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉಳಿದ ವಿವರಗಳನ್ನು ದೊರಕಿಸಿಕೊಡುತ್ತೇನೆ. ಆದರೆ ಶೇ.50 ರಷ್ಟು ಆಗಿದೆ ಎನ್ನುವುದನ್ನು ಹೇಳಿದ್ದೇನೆ. ಏಪ್ರಿಲ್ ಕೊನೆಯಿಂದ ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಈ ವರ್ಷದ ತಡೆ ಇದೆ ಎನ್ನುವುದನ್ನು ಹೇಳಿದ್ದೇನೆ. ತಾತ್ವಿಕವಾಗಿ ಖಾಸಗಿ ಆಡಳಿತ ಮಂಡಳಿಯವರು ಇದನ್ನು ಅನುಷ್ಠಾನಗೊಳಿಸಲು ಬದ್ಧರಾಗಿದ್ದಾರೆ ಎನ್ನುವುದನ್ನೂ, ಅವರು ತಿಳಿಸಿರುವುದನ್ನು ಮತ್ತು ಈ ಯಶಸ್ಸಿಗೆ ಅವರು ಕಾರಣೀಕರ್ತರಾಗಿರುವುದನ್ನೂ ಉಲ್ಲೇಖಿಸಿದ್ದೇನೆ. ಶ್ರೀಯುತ ಯಡಿಯೂರಪ್ಪನವರು ಈ ಸಂದರ್ಭದಲ್ಲಿ. . .

(ಗೊಂದಲ)

SRI SIDDARAMAIAH : In his reply only there are contradictions. 50% ಉಳಿದುಕೊಂಡಿದೆ ಎಂದು ಹೇಳುತ್ತಾರೆ, ಬದ್ಧತೆ ಇದೆ ಎಂದು ಹೇಳುತ್ತಾರೆ. ಬದ್ಧತೆ ಇದ್ದರೆ ಏಕೆ ಉಳಿದುಕೊಳ್ಳುತ್ತಿತ್ತು? ಆ ಬದ್ಧತೆ ಇಲ್ಲವೆನ್ನುವ ಕಾರಣಕ್ಕೋಸ್ಕರ ಉಳಿದುಕೊಂಡಿವೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದೆಂದರೆ, I am not questioning your integrity and all those things. The Question is, ಅಧಿಕಾರಿಗಳು ಇದನ್ನು ಏಕೆ ಮಾಡಲಿಲ್ಲ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾಡಿಲ್ಲ. ಮಾಡಿದ್ದರೆ 50% ಏಕೆ ಉಳಿದು ಕೊಳ್ಳುತ್ತಿತ್ತು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ವರ್ಷ ಜಾರಿಗೊಳಿಸಲು ತಡವಾಗಿದೆ. ಏಕೆ ತಡವಾಗಿದೆ ಎನ್ನುವುದನ್ನು ನಾನು ಹೇಳಿದ್ದೇನೆ. ಸುಪ್ರೀಂ ಕೋರ್ಟ್ judgement ಬಂದಿರುವುದು ಏಪ್ರಿಲ್ 12ಕ್ಕೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏಪ್ರಿಲ್‌ನಲ್ಲಿ ಬಂತು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಏಪ್ರಿಲ್ 12 ಕ್ಕೆ ಬಂದ ಮೇಲೆ ಅವತ್ತೇ ಕ್ಯಾಬಿನೆಟ್‌ನಲ್ಲಿ ಮಾಡಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಮೇಲೆ ರೂಲ್ಸ್ ಆಯಿತು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ರೂಲ್ಸ್ ಮಾಡಿ,.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲಾ ಆದ ಮೇಲೆ admissions ಆಗಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಇದೆಲ್ಲಾ ಹೇಳಿದೆ. ಅದನ್ನೂ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ನಾವು ಇದನ್ನು ಮಾಡಿದ್ದೇವೆ. ದೇಶದ ಉಳಿದ ರಾಜ್ಯಗಳಲ್ಲಿ ಇನ್ನೂ ಏನೂ ಮಾಡಿಲ್ಲ. ನಾವೇ ಕರ್ನಾಟಕದವರೇ ಇಷ್ಟನ್ನು ಮಾಡಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆ ರೀತಿ ಬೆನ್ನು ತಟ್ಟಿಕೊಳ್ಳುವುದಕ್ಕೆ ಬರುವುದಿಲ್ಲ. ಬೇರೆ ರಾಜ್ಯದಲ್ಲಿ ಮಾಡಿಲ್ಲ. ನಾವು ಮಾಡಿದ್ದೇವೆ. ಯಾವ ರಾಜ್ಯದಲ್ಲಿ ಮಾಡಿಲ್ಲ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವೇ ಇದನ್ನು ಮಾಡುತ್ತಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಾಡಿದ್ದೀರಿ ತೋರಿಸಿ? ಸುಮ್ಮನೆ ಏನೋ ಕಥೆ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಥೆ ಹೇಳಿರುವುದಲ್ಲ. ಇದು ಸತ್ಯ ಯಾವ ರಾಜ್ಯಗಳೂ ಜಾರಿಗೊಳಿಸಿಲ್ಲ.

(ಗೊಂದಲ)

SRI SIDDARAMAIAH : We are not bothered about other States.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ನಮ್ಮ ಬಿ.ಜೆ.ಪಿ. ಸರ್ಕಾರ, ಕರ್ನಾಟಕದಲ್ಲಿ ನಾವು ನಮ್ಮ ಇಚ್ಛಾಶಕ್ತಿ ತೊರಿಸಿ ಇದನ್ನು ಜಾರಿಗೊಳಿಸುವುದಕ್ಕೆ ಬದ್ಧತೆಯನ್ನು ತೋರಿಸಿದ್ದೇವೆ.

(ಗೊಂದಲ)

SRI SIDDARAMAIAH : Wherher it is B.J.P. Government or any other Government, it is your duty.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಅದನ್ನು ಮಾಡಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾಡಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಮಾಡಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : 50% ಮಾಡಿಲ್ಲವೆಂದು he only admitted.

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಐದಾರು ಜನ ಒಟ್ಟಿಗೆ ನಿಂತರೆ ಅವರು ಏನು ಉತ್ತರ ಹೇಳುತ್ತಾರೆ?

(ಗೊಂದಲ)

DR. H.C. MAHADEVAPPA : ಇದು fundamental right ಆದ ಮೇಲೆ, it is not a comparative statement, it is obligatory on the part of the Government.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಹದೇವಪ್ಪನವರೆ ಒಂದು ನಿಮಿಷ. ಇವತ್ತು ಬಹಳ ಸುದೀರ್ಘವಾಗಿ ಶಿಕ್ಷಣ ಸಚಿವರು ಉತ್ತರ ಕೊಟ್ಟರು. ಉತ್ತರ ಕೊಟ್ಟ ಸಂದರ್ಭದಲ್ಲಿ ವಿಶೇಷ ಕಾರಣಕ್ಕಾಗಿ ಶರದ್ ಪವಾರ್‌ರವರು ಬಂದ ಕಾರಣ ಮಾನ್ಯ ವಿರೋಧ ಪಕ್ಷದ ನಾಯಕರು ಇರಲಿಲ್ಲ. ಬಂದ ಮೇಲೆ ಮತ್ತೆ ನೀವು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರು. ಅವರು ಏನು reply ಕೊಟ್ಟಿದ್ದಾರೆ ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿ. ಆದರೂ ಕೆಲವು ಪ್ರಮುಖವಾದ ಅಂಶಗಳನ್ನು clarify ಮಾಡುತ್ತಾರೆ. ದಯಮಾಡಿ ಈ ಮನೆಯಲ್ಲಿ ಅವರು ಹೇಳಿದ ಉತ್ತರ ಸತ್ಯಾಂಶವನ್ನು ನಾವು ನೀವೂ ಒಪ್ಪಿಕೊಳ್ಳಬೇಕು. ಅವರು ಏನು ಹೇಳಿದರು, ಕೇಂದ್ರ ಸರ್ಕಾರ ನಿರ್ಧಾರ ಮಾಡಿದ ಮೇಲೆ ಕರ್ನಾಟಕ ರಾಜ್ಯ ಸರ್ಕಾರ ಬೇರೆ ಎಲ್ಲಾ ರಾಜ್ಯಗಳಿಗಿಂತ ಮುಂದೆ ಬಂದು ಒಂದಷ್ಟು ಒಳ್ಳೆಯ ಕೆಲಸ ಆಗಲಿಕ್ಕೆ ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದೇವೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಸಾರ್, ಅದೂ ತಪ್ಪು ಮಾಹಿತಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವುದಕ್ಕಾದರೂ ಬಿಡಿ. ಎಲ್ಲರೂ ಸೇರಿ ಈ ರೀತಿ ಮಾತನಾಡಿದರೆ ಹೇಗೆ? ನಿಮಗೆ reply ಬೇಡ ಎಂದರೆ ಹೇಗೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರಿಗೆ ಮಾತನಾಡುವುದಕ್ಕೆ ಬಿಡಿ.

(ಗೊಂದಲ)

SRI SIDDARAMAIAH : From 1.4.2010…..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾಡಿರುವುದು ನಮಗೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವೇನೋ ಮಾಡಿದ್ದೇವೆ ಎನ್ನುವುದು ಅಲ್ಲ. There is a law…..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸತ್ಯ ಒಪ್ಪಿಕೊಳ್ಳುವುದಕ್ಕೂ ತಾವು ರೆಡಿ ಇಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಹೋದ ವರ್ಷ ನಿಜವಾಗಿಯೂ ಒರಿಸ್ಸಾದಲ್ಲಿ already admissions ಆಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಸಮಾಧಾನ ಇಲ್ಲದೇ ಇರಬಹುದು. ಸರ್ಕಾರ ಬೇಕಾದಷ್ಟು ಮಾಡಿದೆ.

(ಗೊಂದಲ)

SRI SIDDARAMAIAH : They have failed.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ಉತ್ತರ ನಿಮಗೆ ತೃಪ್ತಿ ಆಗದೇ ಇರಬಹುದು. ಆದರೆ ಸರ್ಕಾರ ನಮ್ಮ ಶಕ್ತಿ ಮೀರಿ ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ, ನಮ್ಮದೇ ಮೊದಲನೇ ರಾಜ್ಯ ಇಷ್ಟೊಂದು ಒಳ್ಳೆಯ ಕೆಲಸ ಮಾಡಿರುವುದು ಎನ್ನುವ ಅಂಕಿ-ಅಂಶಗಳನ್ನು ಹೇಳುತ್ತಿದ್ದಾರೆ. ನೀವು ಒಪ್ಪಬಹುದು, ಒಪ್ಪದೇ ಇರಬಹುದು, ಆದರೆ ಸತ್ಯಾಂಶ ಏನಿದೆ ಅದನ್ನು ಒಪ್ಪಿಕೊಳ್ಳಬೇಕಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಗೋವಾ ರಾಜ್ಯ ಒಂದು ಬಿಟ್ಟು ಉಳಿದ ಎಲ್ಲಾ ರಾಜ್ಯಗಳಲ್ಲಿಯೂ ಆಗಿದೆ.

(ಗೊಂದಲ)

ಶ್ರೀ ಆರ್. ಅಶೋಕ್ : ಆಗಿಲ್ಲ ಸಾರ್.

(ಗೊಂದಲ)

SRI SIDDARAMAIAH : Under that guise, you cannot take the decision.

(ಗೊಂದಲ)

ಶ್ರೀ ಆರ್. ಅಶೋಕ್ : He is only making a reference.

(ಗೊಂದಲ)

ಶ್ರೀ ಸಿದ್ದರಾಮಯ್ಯ : Reference O.K. ಅವರಿಗಿಂತ ನಾವೇ better ಎಂದು ಹೇಳುವುದಲ್ಲ. 100% ಮಾಡಿ, we are better, forefront ನಲ್ಲಿ ಇದ್ದೇವೆ ಎಂದು ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಗೋವಾ ರಾಜ್ಯ ಬಿಟ್ಟು ಉಳಿದ ಎಲ್ಲಾ ರಾಜ್ಯಗಳು ಮಾಡಿವೆ ಎಂದು ಹೇಳಿದಿರಲ್ಲಾ, ಕ್ಯಾಬಿನೆಟ್‌ನಲ್ಲಿ ಕಾಯ್ದೆಯನ್ನು ಒಪ್ಪಿಕೊಂಡ ನಂತರದಲ್ಲಿ rules frame ಮಾಡಬೇಕಾಗುತ್ತದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ಅದಕ್ಕೆ ಅಗತ್ಯವಾದಂತಹ ಸರ್ಕಾರಿ ಆದೇಶಗಳನ್ನು ಹೊರಡಿಸಬೇಕಾಗುತ್ತದೆ. ಯಾವ್ಯಾವ ರಾಜ್ಯದವರು ಶೇ.25 ರಷ್ಟು ಹೇಗೆ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಮಾಡಿದ್ದಾರೆ ಎನ್ನುವುದನ್ನು ಹೇಳಲಿ ನೋಡೋಣ. ಗೋವಾನೂ ಮಾಡಿಲ್ಲ, ಮಹಾರಾಷ್ಟ್ರವೂ ಮಾಡಿಲ್ಲ, ಆಂಧ್ರ ಪ್ರದೇಶವೂ ಮಾಡಿಲ್ಲ. ಉತ್ತರ ಖಾಂಡ್, ಮಧ್ಯಪ್ರದೇಶ, ಬಿಹಾರ್, ಛಂಡೀಘಡ್ ಕೇವಲ 4 ರಾಜ್ಯ ಮಾತ್ರ ಶೇ. 25 ಎಂದರೆ ಏನು ಎಂದು ನಾವು ಕರ್ನಾಟಕದವರು ಹೇಳಿದ ಹಾಗೆ ಹೇಳಿದ್ದಾರೆ. ಈಗ ಇಲ್ಲಿ ಅದು ಚರ್ಚೆ ಬೇಡ. ನಾನು ನಿಮ್ಮ ಜೊತೆಗೆ ಚರ್ಚೆಗೆ ಸಿದ್ಧನಿದ್ದೇನೆ. ನಿಮ್ಮ Chamber ಗೆ ಬಂದು ಮುಕ್ತವಾಗಿ ಚರ್ಚೆ ಮಾಡಲು ಸಿದ್ಧನಿದ್ದೇನೆ. ನಿಮ್ಮ ಕಾಳಜಿ ನಮ್ಮ ಕಾಳಜಿಗಿಂತಲೂ ಯಾವುದೇ ವ್ಯತ್ಯಾವಿಲ್ಲ. ತಾವು ಏನು ಭಾವನೆ ವ್ಯಕ್ತಪಡಿಸಿ ಮಾತನಾಡಲಿಕ್ಕೆ ಬಯಸುತ್ತಿದ್ದೀರೋ, ಆ ಭಾವನೆಗೆ ನಾವು ಬದ್ಧತೆಯಿಂದ ಕೆಲಸ ಮಾಡುತ್ತಿದ್ದೇವೆ. ನಾವು ಯಾವುದೇ ಕಾರಣಕ್ಕೂ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಂತಹ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಸಂಗತಿಗಳ ಬಗ್ಗೆ ನಮ್ಮ ಹಿರಿಯ ನಾಯಕರಾದ

ಶ್ರೀಯುತ ಯಡಿಯೂರಪ್ಪನವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರಿಗೆ ಸರ್ಕಾರದ ಪರವಾಗಿ ಶಿಕ್ಷಣ ಸಚಿವರಾಗಿ.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೋಡಿ, ನಮ್ಮ ಸಲಹೆಗಳೆಲ್ಲಾ ಏನು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸಾರ್ ನಿಮ್ಮದೆಲ್ಲಾ ಹೇಳಿದೆ. ನೀವು ಅರ್ಥಕ್ಕೆ ಬಂದರೆ ಹೀಗೆ ಆಗುವುದು. ಇಷ್ಟೊತ್ತು ಹೇಳಿದ್ದು ನಿಮ್ಮದೆಲ್ಲಾ ವಿಷಯ. ನಿಮ್ಮ ಸಲಹೆಗಳಿಗೆಲ್ಲಾ ನಾನು ಉತ್ತರ ಹೇಳಿದ್ದೇನೆ. ನಾನು ಶ್ರೀಯುತ ಯಡಿಯೂರಪ್ಪನವರಿಗೆ ಅಭಿನಂದಿಸುತ್ತೇನೆ. ಏಕೆಂದರೆ, ಹಿರಿಯರಾಗಿ ಅವರು ಅನೇಕ ಸಂದರ್ಭಗಳಲ್ಲಿ, ನಾನು ಶಿಕ್ಷಣ ಸಚಿವನಾಗಿರು ವಂತಹ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿಯಾಗಿ, ಅನೇಕ ರೀತಿಯ ಸಲಹೆ–ಸೂಚನೆಗಳನ್ನು ಕೊಟ್ಟು, ಒಳ್ಳೆಯ ಕೆಲಸ–ಕಾರ್ಯಗಳಾಗುವುದಕ್ಕೆ ಕಾರಣೀಕರ್ತರಾಗಿದ್ದಾರೆ. ತಮಗೆ ಗೊತ್ತಿದೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿ, ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವರಾಗಿದ್ದಾಗ, ರಾಜ್ಯದಲ್ಲಿ ಸಾವಿರಕ್ಕಿಂತ ಹೆಚ್ಚು ಜೂನಿಯರ್ ಕಾಲೇಜುಗಳು, ಹೈಸ್ಕೂಲ್‌ಗಳನ್ನು ಕೊಟ್ಟು, ಶಿಕ್ಷಣದ ಸಾರ್ವತ್ರೀಕರಣ ಆಗಬೇಕು ಎನ್ನುವುದಕ್ಕೆ ಬಹಳ ದೊಡ್ಡ ಪ್ರಯತ್ನವನ್ನು ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಶಾಲೆಗಳನ್ನು ಕೊಟ್ಟಿದ್ದೀರಿ, ಶಿಕ್ಷಕರನ್ನು ಎಲ್ಲಿ ಕೊಟ್ಟಿದ್ದೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊಟ್ಟಿದ್ದೇವೆ. ಎಲ್ಲ ಕಡೆ ಶಿಕ್ಷಕರನ್ನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹೈಸ್ಕೂಲ್‌ಗಳೆಲ್ಲಾ ಮುಚ್ಚಿಹೋಗಿವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಎಲ್ಲೂ ಮುಚ್ಚುತ್ತಿಲ್ಲ. ಸುಮ್ಮನೆ ನೀವು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಹೇಳಲೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ನೀವು ಅನೇಕ ಕಾಲೇಜುಗಳನ್ನು shift ಮಾಡಿಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Students ಇಲ್ಲವೆಂದು ನೀವು shift ಮಾಡಿಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮಗೆ ಅದರ ಒಳಗುಟ್ಟು ಹೇಳಬೇಕೆಂದರೆ ಸ್ವಲ್ಪ ಹಾಸನದ್ದೇ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಸನದ್ದೇ ನಾನು ಹೇಳುವುದು. ಅವರ ಊರಿನಲ್ಲಿ ಎಷ್ಟು ಸ್ಕೂಲ್ ಇವೆ ಎನ್ನುವುದು ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಏಕೆ ಆಯಿತು ಎಂದರೆ, ಬಹಳ ಹತ್ತಿರ ಹತ್ತಿರ ಯಾವಾಗ ಜೂನಿಯರ್ ಕಾಲೇಜು ಮಂಜೂರಾಯಿತು, ಅಂದರಿಂದಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದನ್ನೆ ಮತ್ತೆ ನಾನು ಹೇಳುತ್ತಿರುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಲ್ಲಿ ಸ್ವಲ್ಪ ಜಾಸ್ತಿ ಇದೆ.

ಶ್ರೀ ಸಿದ್ದರಾಮಯ್ಯ : ನಾನು ಹಾಸನ ಜಿಲ್ಲೆಯದೆ ಹೇಳುತ್ತಿರುವುದು. ಮಾನ್ಯ ರೇವಣ್ಣನವರ ಜಿಲ್ಲೆಯಲ್ಲಿ ಎಷ್ಟು ಕಾಲೇಜುಗಳನ್ನು ಮುಚ್ಚಿದ್ದಾರೆ ಗೊತ್ತೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದು ಏತಕ್ಕಾಗಿ ಆಯಿತು ಎಂದರೆ ಬಹಳ ಹತ್ತಿರ ಹತ್ತಿರ Junior College ಆಗ ಮಂಜೂರಾಯಿತು. ಹಾಗಾಗಿ ಅದು ಮುಚ್ಚಿಹೋಯಿತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಹಾನದಲ್ಲಿ ಯಾವಾಗ ಮುಚ್ಚಿದ್ದಾರೆಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದನ್ನು ಮುಚ್ಚಿಲ್ಲ.

ಅಧ್ಯಕ್ಷರು : ಈಗ ಈ ಚರ್ಚೆಯನ್ನು ಮುಕ್ತಾಯ ಮಾಡೋಣ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳನ್ನು ದಯಮಾಡಿ ಕುಳಿತುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು : ಈಗ ಚರ್ಚೆಯು ಮುಕ್ತಾಯಗೊಂಡಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಬಿಲ್ಡಿಂಗ್‌ಗೆ ದುಡ್ಡಿಲ್ಲವೆಂದು ಹೇಳುತ್ತಾರಲ್ಲಾ ನಾವು 1000 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ಇನ್ನು clarification ಕೇಳುತ್ತಾ ಹೋದರೆ ಅದು ಆಗುವುದಿಲ್ಲ. ಈಗ ನಾನು ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಎಷ್ಟು ಜನ ಟೀಚರ್ಸ್‌ಗಳನ್ನು appointment ಮಾಡಿದ್ದಾರೆಂದು ಅವರು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ವರ್ಷ ಎಷ್ಟು ಬ್ಯಾಕ್‌ಲಾಗ್ ಇದೆ. ಮುಂದಿನ ವರ್ಷಕ್ಕೆ ಎಲ್ಲವನ್ನು ಒಟ್ಟಿಗೆ ಮಾಡುತ್ತೇವೆಂದು ಹೇಳಿ.. 100% Implement ಮಾಡುತ್ತೇವೆಂದು ಅವರು ಹೇಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಆದ್ಯತೆ ಆಗಬೇಕೆಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅವರು ಹೇಳಿರುವುದರಲ್ಲಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಪ್ರಾಥಮಿಕ ಶಿಕ್ಷಕರ ಬಗ್ಗೆ ಏನು ಇದೆ ನಮ್ಮ ಸರ್ಕಾರವು ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತದೆ. ಇವತ್ತು ಸಹ NCTU ಸಹ ಇವತ್ತು 6ನೇ ತರಗತಿಯಿಂದ ಮೇಲುಗಡೆಗೆ ಡಿಗ್ರಿ ಮತ್ತು

ಡಿಲೀಟ್ ಆದಂತಹವರಿಗೆ ಅವರನ್ನು ನೇಮಿಸಿಕೊಳ್ಳಬೇಕೆಂದು ನಮಗೆ ಆದೇಶವನ್ನು ಮಾಡಿದೆ. ಬರುವಂತಹ ನೇಮಕಾತಿಗಳಲ್ಲಿ ಡಿಗ್ರಿ ಮಾಡಿದವರಿಗೆ ಮತ್ತು ಮತ್ಯಾರಿಗೆ ಬಿಎಡ್ ಆಗಿದೆಯೋ ಅಂತಹವರನ್ನೇ ನಾವು 6ನೇ ತರಗತಿಯನ್ನು ಕಲಿಸುವಂತಹ ಶಿಕ್ಷಕರಿಗೆ ನಾವು ನೇಮಕ ಮಾಡಿಕೊಳ್ಳುತ್ತೇವೆ. ಅದರ ಮೂಲಕ ಗುಣಮಟ್ಟದ ಶಿಕ್ಷಣವನ್ನು ಕೊಡುತ್ತೇವೆನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿಯಾಗಿ ಬಿಎಡ್ ಮತ್ತು ಬಿಎಡ್ ಪಠ್ಯಕ್ರಮವನ್ನು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ತಂದಿದ್ದೇವೆ. ಈ ಪಠ್ಯಕ್ರಮ ಏನು ಇದೆ ಆ ರೀತಿಯ ಪಠ್ಯಕ್ರಮವನ್ನು ನಾವು ಮಾಡುತ್ತಿದ್ದೇವೆ. ಅದನ್ನು ಜಾರಿಗೆ ತರುವುದರಿಂದ ಆ ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯ ಸಹ ಹೆಚ್ಚಾಗುವುದನ್ನು ಸಹ ನಾವು ಕಾಣುತ್ತಿದ್ದೇವೆ. ಅದರ ಜೊತೆಯಲ್ಲಿ ಸೇವಾನಿರತ ಶಿಕ್ಷಕರಲ್ಲಿ ಅವರ ಗುಣಮಟ್ಟ ಹೆಚ್ಚಾಗಬೇಕೆಂದು ಸಹ Knowledge Commission ಜೊತೆ ಮತ್ತು Wipro ಜೊತೆಯಲ್ಲಿ ನಮ್ಮ ಶಿಕ್ಷಕರಿಗೆ ಯಾವ ವಿಷಯದ ಬಗ್ಗೆ ತರಬೇತಿ ಬೇಕೋ ಆ ವಿಷಯದ ಬಗ್ಗೆ ತರಬೇತಿಯನ್ನು ಕೊಟ್ಟಿರುವ ರಾಜ್ಯ ನಮ್ಮ ಕರ್ನಾಟಕ ನಾವು ಅದರಲ್ಲಿ ಮೊದಲಿದ್ದೇವೆ. ನಾವು ಎಲ್ಲಾ ರೀತಿಯಲ್ಲಿಯೂ ಸಹ ನಮ್ಮ ಅಗತ್ಯತೆಗಳಿಗೆ ಸ್ಪಂದಿಸುವಂತಹ ಕೆಲಸವನ್ನು ನಾವು ಮಾಡಿದ್ದೇವೆ. NCF-2005 ರ ಆಧಾರದ ಮೇಲೆ ಇವತ್ತು ಹೊಸ ಪಠ್ಯಪುಸ್ತಕಗಳ ರಚನಾ ಕ್ರಮವು ಸಹ ಆಗುತ್ತಿದೆ. ಈ ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದರು. ನೀವು CBSE Syllabus ರೀತಿಯ content ನಮ್ಮ ಎಲ್ಲಾ ಮಕ್ಕಳಿಗೂ ಸಹ ಸಿಗಬೇಕೆಂದು ಹೇಳಿದರು. ನಮ್ಮ ಬುದ್ಧಿಸಾಮರ್ಥ್ಯಗಳು ಸಹ ಹೆಚ್ಚಬೇಕು, ಹಾಗಾಗಿ ಈ ವರ್ಷ 5 ಮತ್ತು 8ನೇ ತರಗತಿಗೆ NCF-2005 ರ ಕ್ರಮದ ಮೇಲೆ ಹೊಸ ಪಠ್ಯಕ್ರಮವನ್ನು ತಂದಿದ್ದೇವೆ. ಅದೇ ರೀತಿಯಾಗಿ ಮುಂದಿನ ವರ್ಷದಿಂದ 1 ರಿಂದ 10ನೇ ತರಗತಿಯವರೆಗೆ ತರುತ್ತಿದ್ದೇವೆ. ಈಗ ಎಲ್ಲಾ ಕಡೆಯಲ್ಲಿಯೂ ಸಹ ನಾವು ಅದಕ್ಕೆ ಬೇಕಾದಂತಹ ಈ ಪಠ್ಯಕ್ರಮದ ಬದಲಾವಣೆಯನ್ನು ಸಹ ಮಾಡುವುದಕ್ಕೆ ಮುಂದಾಗಿದ್ದೇವೆ. ಈಗ ನಾವು ಗುಣಮಟ್ಟದ ಶಿಕ್ಷಣವನ್ನು ಹೆಚ್ಚಿಸುವುದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಬದ್ಧರಾಗಿದ್ದೇವೆ. ನಾನು ಗೌರವಾನ್ವಿತ ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡುತ್ತೇನೆ. ಮೂಲಭೂತ ಸೌಕರ್ಯಗಳನ್ನು ಕೊಡುವ ಬಗ್ಗೆ ಸರ್ಕಾರವು ಶಕ್ತಿ ಮೀರಿ ಹಣವನ್ನು ಕೊಟ್ಟು ಪ್ರಯತ್ನ ಮಾಡುತ್ತಿದೆ.

ಆದರೂ ಅಲ್ಲಿ ಇಲ್ಲಿ ಕೊರತೆಗಳು ಸಹ ಇವೆ. ನಾವು ಶಾಲೆಗಳನ್ನು ದತ್ತು ತೆಗೆದುಕೊಳ್ಳುವಂತಹ ಯೋಜನೆಯೂ ಇದೆ. ಹಳೆಯ ವಿದ್ಯಾರ್ಥಿಗಳ ಸಂಘ, ಬೇರೆ ಬೇರೆ ಅನೇಕ ರೀತಿಯ ಚಟುವಟಿಕೆಗಳು ಸಂಘ ಸಂಸ್ಥೆಯವರು ಇದ್ದಾರೆ. ದಾನಿಗಳು ಸಹ ಇದ್ದಾರೆ. ನಾವುಗಳು ನಮ್ಮ ಶಾಲೆಗಳ ಅಗತ್ಯತೆಗಳನ್ನು ಪೂರೈಸುವುದಕ್ಕೆ ಸರ್ಕಾರದ ಜೊತೆಗೆ ಸಹಕರಿಸಬೇಕೆಂದು ಹೇಳುತ್ತೇನೆ. NCF-2005 (National Curriculum Framework). . .

ಶ್ರೀ ಟಿ.ಬಿ. ಜಯಚಂದ್ರ : ನಿಮಗೆ ಎಷ್ಟು ಜನ co-operate ಮಾಡಿದ್ದಾರೆಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಮತ್ತೆ ಇದನ್ನು ಹೇಳುವುದಕ್ಕೆ ಹೋದರೆ ಸಮಯವಾಗುತ್ತದೆ. ಈಗ National Curriculum Framework 2005ರಲ್ಲಿ ಕೇಂದ್ರ ಸರ್ಕಾರವು ನಮಗೆ ಒಂದು ವಿಷಯವನ್ನು ತಿಳಿಸಿತು. ಅದು 2007 ರಂದು ರಾಜ್ಯಗಳಿಗೆ ಬಂತು. ಅದು ಆದ ನಂತರ ಏನು ಆಗಿರಲಿಲ್ಲ. ಕಳೆದ ಮೂರು ವರ್ಷಗಳ ಹಿಂದೆ ನಾವು ಎಲ್ಲಾ ಸರ್ವ ಪಕ್ಷಗಳ ಹಿರಿಯ ಮುಖಂಡರನ್ನು ಕರೆದು ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವಂತಹವರನ್ನು ಕರೆದು ನಿಮ್ಮ ಕಾಂಗ್ರೆಸ್ಸಿನಲ್ಲಿ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದ ಪ್ರೊ: ಬಿ.ಕೆ. ಚಂದ್ರಶೇಖರ್, ವಿಶ್ವನಾಥ್‌ರವರನ್ನು ಒಳಗೊಂಡಂತೆ ರಾಮಲಿಂಗಾರೆಡ್ಡಿಯವರು ಅನಿವಾರ್ಯವಾದ ಕಾರಣಗಳಿಂದ ಅವತ್ತು ಬರುವುದಕ್ಕಾಗಲಿಲ್ಲ. ಒಂದು ಪಕ್ಷಾತೀತವಾದಂತಹ ಶಿಕ್ಷಣ ತಜ್ಞರ ಸಭೆಯನ್ನು ಕಳೆದ 3 ವರ್ಷದಿಂದ ಕರೆದು ಮಾಡಿ ಈ National Curriculum Framework ಅನ್ನು ಹೇಗೆ ಜಾರಿಗೊಳಿಸಬೇಕೆಂದು ಚಿಂತನೆ ಮಾಡಿ ಸುಮಾರು 500 ಜನರಿಗಿಂತ ಹೆಚ್ಚು subject experts ಗಳನ್ನು ಆಯ್ಕೆ ಮಾಡಿ ಅವರುಗಳು ಪುಸ್ತಕಗಳನ್ನು ಬರೆದು ಈ ವರ್ಷ 5 ರಿಂದ 8ನೇ ತರಗತಿಗೆ ಹೊಸ ಪಠ್ಯಕ್ರಮವನ್ನು ಜಾರಿಗೊಳಿಸಿದ್ದೇವೆ. ಇದು ಅತ್ಯುತ್ತಮವಾದಂತಹ ಪುಸ್ತಕವಾಗಿದೆ, ನೀವು ಆ ಪುಸ್ತಕವನ್ನು ನೋಡಿ ಮಾತನಾಡಿ. ಆ ಪುಸ್ತಕವನ್ನು ಚೆನ್ನಾಗಿ ಮಾಡಿದ್ದೇವೆ. ಈಗ ಮುಂದಿನ ವರ್ಷಗಳಲ್ಲಿ 1 ರಿಂದ 10ನೇ ತರಗತಿಯ ತನಕ ಪುಸ್ತಕಗಳು ಬದಲಾಗಿ ಬರುತ್ತಿದೆ.

ಶ್ರೀ ಸಿದ್ದರಾಮಯ್ಯ : ನಮ್ಮ ಚರ್ಚೆಗೆ ಉತ್ತರವನ್ನು ಹೇಳಲಿಲ್ಲವಲ್ಲಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಎಲ್ಲವನ್ನು ಹೇಳಿದ್ದೇನೆ ಸಾರ್. ಗುಣಮಟ್ಟದ ಶಿಕ್ಷಣದ ಬಗ್ಗೆ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಗುಣಮಟ್ಟದ್ದು ಬೇರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದೇ ಮುಖ್ಯ. ಇವೆಲ್ಲವನ್ನು ಸರ್ಕಾರ. . .

SRI SIDDARAMAIAH : No, No, to give quality education. . .

ಅಧ್ಯಕ್ಷರು : ಅವರಿಗೆ ಉತ್ತರವನ್ನು ಹೇಳುವುದಕ್ಕೆ ಬಿಡದಿದ್ದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಈ RTE ಯನ್ನು ನಾವು ಜಾರಿಗೊಳಿಸುತ್ತಿದ್ದೇವೆ. ನಾವು ಮುಂಚೂಣಿಯಲ್ಲಿ ಕೆಲಸ ಮಾಡುತ್ತಿದ್ದೇವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಅದನ್ನು ಬದ್ಧತೆಯಿಂದ ಜಾರಿಗೊಳಿಸುತ್ತೇವೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ಚರ್ಚೆಯು ಪ್ರಾರಂಭವಾಗಿ 11.30 ಗಂಟೆಯಾಯಿತು. ಈಗ 3.30 ಗಂಟೆಯಾಗಿದೆ. ನಮ್ಮ ಮುಂದೆ 6 ಅಲ್ಪಕಾಲಾವಧಿ ಚರ್ಚೆ ಇವೆ. ಸುಮಾರು 47 ಗಮನ ಸೆಳೆಯುವ ಸೂಚನೆ ಇದೆ. ಇವೆಲ್ಲವನ್ನು ದಯವಿಟ್ಟು ಮುಗಿಸಬೇಕು. ಈ ಚರ್ಚೆಯನ್ನು ದಯವಿಟ್ಟು ಇಲ್ಲಿಗೆ ಕೊನೆಗಾಣಿಸಬೇಕು. ಇದರ ಜೊತೆಗೆ Question Hour ಬೇರೆ ಇದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, this is a very very important matter. ಇದು ಅವಕಾಶದಿಂದ ವಂಚಿತರಾದಂತಹ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕು. ಅವರು ಕೂಡ ಮುಖ್ಯವಾಹಿನಿಗೆ ಬರಬೇಕು. ಅವರು ಸಹ ಸ್ವಾಭಿಮಾನಿಗಳಾಗಿ ಬದುಕಬೇಕು, ಅವರಿಗೂ ಕೂಡ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಯನ್ನು ತುಂಬಬೇಕೆನ್ನುವಂತಹ ಕಾರಣಕ್ಕೋಸ್ಕರ ಮಾಡುತ್ತಿರುವಂತಹ ಒಂದು ಕಾನೂನಾಗಿದೆ. ಈ ಕಾನೂನಿನ ಅಡಿಯಲ್ಲಿ ಇವತ್ತು ಈ ವರ್ಷ ಒಂದು ಲಕ್ಷ ಚಿಲ್ಲರೆ ಇವರೇ identify ಮಾಡಿದ್ದಾರೆ. ಇವರು CBSE Syllabus, Central School ಗಳಿಗೆ ಕೂಡ ಇದು ಅಪ್ಲೈ ಆಗುತ್ತದೆ. ICSE ಗೂ ಕೂಡ apply ಆಗುತ್ತದೆ. ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೂ ಕೂಡ apply ಆಗುತ್ತದೆ. ಖಾಸಗಿ

ಯವರಿಗೂ apply ಆಗುತ್ತದೆ. unaided, aided ಎರಡಕ್ಕೂ ಕೂಡ apply ಆಗುತ್ತದೆ. ಇವೆಲ್ಲವೂ ಇದ್ದ ಮೇಲೆ ಅವರು ನಮಗೆ ಒಂದು ಲಕ್ಷ ಮಾಡುವುದರಲ್ಲಿ ಕೇವಲ 47 ಸಾವಿರ figure ಹೇಳಿದರು. I am not going to dispute. ಅಷ್ಟೊಂದು dispute ಮಾಡುವುದಕ್ಕೆ ಹೋಗುವುದಿಲ್ಲ. More than 50% ಉಳಿದುಕೊಂಡಿದೆ. ಅದನ್ನು ಈ CBSE ನಲ್ಲಿ ಮಾಡದೆ ಇರುವುದಕ್ಕೆ ಕಾರಣವೇನು? ICSEನಲ್ಲಿ ಮಾಡದೆ ಇರುವುದಕ್ಕೆ ಕಾರಣವೇನು? ಉಳಿದುಕೊಂಡಿದೆಯಲ್ಲಾ ಬ್ಯಾಕ್‌ಲಾಗ್ ಅದನ್ನು ಮುಂದಿನ ವರ್ಷ ಏನು ಮಾಡುತ್ತೀರಿ? ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಾವು ಯೋಚನೆಯನ್ನು ಮಾಡಿದ್ದೀರಿ. ಬರೀ ನಮಗೆ ಬದ್ಧತೆ ಇದೆ, ಗುಣಮಟ್ಟದ ಶಿಕ್ಷಣವನ್ನು ಕೊಡಬೇಕು. That is there. That is the intention of the law. ಅದನ್ನು ಕೊಡಲೇಬೇಕು. ಅದನ್ನು ಕೊಡುವುದಕ್ಕಾಗಿಯೇ ಮಾಡಿರುವುದು. ಅವಕಾಶ ವಂಚಿತರಾದವರಿಗೆ, ದುರ್ಬಲರಿಗೆ, ಹಿಂದುಳಿದವರಿಗೆ ಹಾಗೂ ದಲಿತರಿಗೆ ಕೊಡಬೇಕಾಗಿದೆ ಈ ಶಿಕ್ಷಣ. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿಯು ಕೂಡ ಸಿಗಬೇಕು ಹಾಗೂ ಎಲ್ಲರಿಗೂ ಸಹ ಸಿಗಬೇಕೆನ್ನುವ ಕಾರಣಕ್ಕೋಸ್ಕರ ನಾವು ಅದನ್ನು ಮಾಡುವಾಗ ಇದರಲ್ಲಿ ನಾವು 100% ಬೇರೆ ರಾಜ್ಯದವರು ಮಾಡುತ್ತಾರೋ ಅಥವಾ ಬಿಡುತ್ತಾರೋ, it is a different thing. It is left to them. It is mandatory on every State, whether it is Karnataka or Goa or Rajasthan and any State, it is mandatory. Since it is a mandatory and binding on every State, ನಾವು ನಮ್ಮ ಕೆಲಸವನ್ನು ಮಾಡಬೇಕು. ಇನ್ನೊಬ್ಬರು ಮಾಡುತ್ತಾರೋ ಅಥವಾ ಬಿಡುತ್ತಾರೋ ಅದು ಬೇರೆ. ಅವರು ಮಾಡಿಲ್ಲ ನಾವು ಮಾಡಿಲ್ಲ. ಅನೇಕ ರಾಜ್ಯಗಳಲ್ಲಿ ಅನೇಕ ವರ್ಷಗಳ ಕಾಲ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತಂದಿದ್ದೇವೆ. 73rd amendment ಆದ ಮೇಲೆ ಎಲ್ಲರೂ ಆ ವ್ಯವಸ್ಥೆಯನ್ನು ತೆಗೆದುಕೊಂಡು ಬಂದರು. ಈಗ Constitution ನಲ್ಲಿ ತಿದ್ದುಪಡಿ ಮಾಡಿದ ಮೇಲೆ ಎಲ್ಲರೂ ತಂದರು. ಇದನ್ನು ಎಲ್ಲರೂ ತರಲೇಬೇಕು. ಅದನ್ನು ನೀವು ಮಾಡದೆಯೇ ಸುಮ್ಮನೆ ನಮಗೆ ಬದ್ಧತೆ ಇದೆ, ನಾವು ಮಾಡುತ್ತೇವೆ ಜಾಗೃತಿ ಮೂಡಿಸುತ್ತೇವೆ. All those things are O.K. ಈಗ ಉಳಿದುಕೊಂಡಂತಹ ಮಕ್ಕಳಿಗೆ ಸಿಗದೆ ಇರುವುದಕ್ಕೆ ಕಾರಣವೇನು? ಅಂತಹ ಕಷ್ಟದ ಪರಿಸ್ಥಿತಿ ಏನಿತ್ತು? ಏತಕ್ಕಾಗಿ

ಇದನ್ನು ಪೂರ್ಣ ಮಾಡುವುದಕ್ಕಾಗಲಿಲ್ಲ. ಇದನ್ನು ನಾವು ತಿಳಿದುಕೊಳ್ಳುವುದಕ್ಕೆ next year ನಾನು ಏನು ಮಾಡಬೇಕೆಂಬುದರ ಬಗ್ಗೆ ನಾವು ಸಲಹೆಯನ್ನು ಕೊಡುತ್ತೇವೆ. ಇದಕ್ಕೆ ನಾವು co-operate ಮಾಡುತ್ತೇವೆ. ಎಲ್ಲಾ ಮಕ್ಕಳಿಗೂ ಇದು ಸಿಗಬೇಕೆಂದು ನಮ್ಮ concern ಇದೆ. ನೀವು ಯಾರನ್ನು identify ಮಾಡಿದ್ದೀರಿ. ಇದು ಎಷ್ಟು ಮಕ್ಕಳಿಗೆ ಸಿಗಬೇಕೆಂದು ಗುರ್ತಿಸಿದ್ದೀರಿ. ಅಷ್ಟು ಮಕ್ಕಳಲ್ಲಿ ಒಬ್ಬ ಮಕ್ಕಳಿಗೂ ಬಿಡದೆ 100% ಎಲ್ಲರಿಗೂ ಸಿಗಬೇಕು. That is the law. That is the requirement under the law. It is mandatory on the part of the Government. ಅವರು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಹೇಳುವ ಹಾಗಿದ್ದರೆ ಕೋರ್ಟಿಗೆ ಹೋಗಿ ಹೇಳು ಎಂದು ಹೇಳಬೇಕು. ನಿನ್ನ ಮಾನ್ಯತೆ ರದ್ದು ಮಾಡುತ್ತೇನೆಂದು ಹೇಳಬೇಕು. ನೀನು ಕೋರ್ಟಿಗೆ ಹೋಗಪ್ಪಾ, it has been upheld by the Supreme Court. ನಿನ್ನ ಆಟ ನಮ್ಮ ಹತ್ತಿರ ಏನು ನಡೆಯುವುದಿಲ್ಲವೆಂದು ಅವನಿಗೆ ಖಡಾಖಂಡಿತವಾಗಿ ಹೇಳಬೇಕು. ಅದನ್ನು ಮಾಡಿ ಎಂದು ಅಷ್ಟೇ ನಮ್ಮ ಸಲಹೆಯಾಗಿದೆ. ತಾವು ಅದನ್ನು ಮಾಡಬೇಕು. CBSE ನಲ್ಲಿ ಎಷ್ಟು ಜನರಿಗೆ ಈ ಸಾರಿ ಕೊಡುವುದಕ್ಕಾಗಲಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಅವರು time ಮುಗಿದುಹೋಯಿತು ಎಂದು ಹೇಳಿ ಬಿಟ್ಟಿದ್ದಾರೆ. ಅವರು ರಾಷ್ಟ್ರಮಟ್ಟದಲ್ಲಿರುವಂತಹ syllabus, ಅಂತರರಾಷ್ಟ್ರ ಮಟ್ಟದಲ್ಲಿರುವಂತಹ syllabus ಎಂದು ಅವರು ಹೇಳುತ್ತಿದ್ದಾರೆ. ಈ ಮಕ್ಕಳಿಗೂ ಆ ಗುಣಮಟ್ಟದ ಶಿಕ್ಷಣ ಸಿಗಬೇಕಲ್ಲವೇ? They cannot say no. ಹಾಗಿದ್ದರೆ ask them to go to the court. ಅವರು ಕೋರ್ಟಿಗೆ ಹೋಗಲಿ. ಆ Act ನ್ನು ಚಾಲೆಂಜ್ ಮಾಡಲಿ. ಅವರು ನಮಗೆ applicable ಅಂತ ಅವರು ಹೇಳಲಿ. ಅದಕ್ಕೂ ಮತ್ತು ಇದಕ್ಕೂ ಸಂಬಂಧವಿಲ್ಲ. ನಾವು ಮಾಡಬೇಕಾಗಿರುವಂತಹ ಕೆಲಸವನ್ನು ಮಾಡಿ. ನಮಗೆ ಎಲ್ಲಾ powers ಇದೆ, weapons ಇದೆ. Use the weapons. ಅವರನ್ನು ಬಗ್ಗಿಸಿ ಮಾಡಿ. That is our suggestion. ಅದನ್ನು ಮಾಡುವುದು ಬಿಟ್ಟು ನಾವು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಬೇರೆ ರಾಜ್ಯವನ್ನು ನೋಡುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಬೇರೆಯವರು ಮಾಡುತ್ತಾರೋ, ಬಿಡುತ್ತಾರೋ, ನಮ್ಮ ರಾಜ್ಯದಲ್ಲಿ ನಾವು ಮಾಡೋಣ. ಸಚಿವರು ಏನೂ ಹೇಳುವುದಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ನೀಡಿರುವ ಒಳ್ಳೆಯ ಸಲಹೆಗಳನ್ನು ನಿಶ್ಚಿತವಾಗಿ ಬರುವ ವರ್ಷದಲ್ಲಿ, ಈ ವರ್ಷದ ಅನುಭವದ ಮೇಲೆ ಎಲ್ಲೆಲ್ಲಿ ಕೊರತೆ ಆಗಿದೆ ಅದೆಲ್ಲವನ್ನು ಸರಿಪಡಿಸಿಕೊಂಡು ಮುಂದಿನ ವರ್ಷ ಇನ್ನೂ ಹೆಚ್ಚು ಪರಿಣಾಮಕಾರಿಯಗಿ ನೂರಕ್ಕೆ ನೂರು ಈ ಕಾಯ್ದೆಯಲ್ಲಿರುವಂಥ ಎಲ್ಲಾ ಅಂಶಗಳನ್ನು ನಾವು ಜಾರಿಗೊಳಿಸುವುದಕ್ಕೆ ಬದ್ಧವಾಗಿರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೃಷಿ ಸಚಿವರಾಗಿರುವಂಥ ಶ್ರೀ ಶರದ್ ಪವಾರ್‌ರವರು, ಜಯರಾಂ ರಮೇಶ್‌ರವರು, ಮುಖ್ಯಮಂತ್ರಿಗಳು ಎಲ್ಲರೂ ಕುಳಿತುಕೊಂಡು ಬಹಳ ಸುದೀರ್ಘವಾಗಿ ಕರ್ನಾಟಕ ರಾಜ್ಯದ ಬರಗಾಲದ ಪರಿಸ್ಥಿತಿ ಬಗ್ಗೆ ತುಂಬಾ ಆಸಕ್ತಿಯಿಂದ ಚರ್ಚೆಯಲ್ಲಿ ಭಾಗವಹಿಸಿ ನಮಗೆ ಅನುಕೂಲ ಮಾಡಿಕೊಡುವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದಾರೆ. ಈಗ ನಾವು ಎರಡೇ ನಿಮಿಷ ಸಮಯ ತೆಗೆದುಕೊಳ್ಳುತ್ತೇನೆ. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ outstanding balance under crop loan as 31.3. 2012, 22,29,200 ಜನರಲ್ಲಿ 20,000 ಕೋಟಿ ಸಾಲ ಇವತ್ತು ಬಾಕಿ ಇದೆ. ಮತ್ತೆ approximate recovery under crop loans as on 31.3.2012 renewed accounts 17 ಲಕ್ಷ ಕುಟುಂಬ 18,306 ಕೋಟಿ ರೂಪಾಯಿಗಳು ಇವೆ. ನಾನು ಸಿದ್ದರಾಮಯ್ಯನವರಿಗೆ ಈ ಮನೆಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ನಾವು ಈ ಮನೆ ಕಾರ್ಯಕಲಾಪ ಮುಗಿಸಿ ನಮ್ಮ ಕ್ಷೇತ್ರಗಳಿಗೆ ಹೋಗುತ್ತಿದ್ದೇವೆ. ರೇವಣ್ಣನವರೆ, ಒಂದೇ ನಿಮಿಷ.....

ಶ್ರೀ ಹೆಚ್.ಡಿ. ರೇವಣ್ಣ : ಕೇಂದ್ರ ಸರ್ಕಾರದಿಂದ ಈ ರಾಜ್ಯವನ್ನು ಬರಗಾಲವೆಂದು ಘೋಷಿಸಬೇಕೆಂದು ಇವತ್ತು ನಾನು ಖಾಸಗಿ ನಿರ್ಣಯವನ್ನು ತಂದಿದ್ದೇನೆ. ಒಂದು ವಾರದಿಂದ. . . .

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪುರ್ : ಇದರ ಬಗ್ಗೆ ಖಾಸಗಿ ನಿರ್ಣಯವನ್ನು ರೇವಣ್ಣನವರು ಕೊಟ್ಟಿದ್ದಾರೆ. ಎಲ್ಲರೂ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಎರಡು ನಿಮಿಷ ಮಾತನಾಡಿ ಬಿಡುತ್ತೇನೆ. ನನಗೆ ಕೇಂದ್ರ ಸರ್ಕಾರದ ಸಚಿವರಿಗೆ ಈ ಬಗ್ಗೆ ಕಳಕಳಿ ಇರುವುದರಿಂದ,......

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಶ್ರೀ ದಿನೇಶ್ ಗುಂಡೂರಾವ್ : ಅಧ್ಯಕ್ಷರೆ, Point of Order, ಅಜೆಂಡಾ ಪ್ರಕಾರ ಕಲಾಪ ನಡೆಯಲಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ನಾವು Rule 69 ನಲ್ಲಿ move ಮಾಡಿದ್ದೇವೆ. ಅದು ಅಜೆಂಡಾದಲ್ಲಿದೆ. ಅಜೆಂಡದ ವಿಷಯ ಮುಗಿದ ಮೇಲೆ ತಾವು ಆ ವಿಷಯವನ್ನು ತೆಗೆದುಕೊಳ್ಳಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರೇವಣ್ಣನವರೆ, ನೀವೇ ಪ್ರಸ್ತಾಪ ಮಾಡಿ. ನೀವೇ ಶುರು ಮಾಡಿ, ಆಮೇಲೆ ನಾನು ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ನಿಮಗೆ ಮಾತನಾಡಲಿಕ್ಕೆ ಯಾರು allow ಮಾಡಿದ್ದು, ಪ್ಲೀಸ್.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಅವಕಾಶ ಕೊಟ್ಟರೆ ನಾನೇ ಮಂಡಿಸುತ್ತೇನೆ. ಅವರೇನು ಖಾಸಗಿ ನಿರ್ಣಯ ಮಂಡಿಸುತ್ತಾರೆ. . . .

ಅಧ್ಯಕ್ಷರು : Reply ಮಾಡಲಿಕ್ಕೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಖಾಸಗಿ ನಿರ್ಣಯವನ್ನು ಮಂಡಿಸಲಿಕ್ಕೆ ನಾನು ಒಂದು ವಾರದಿಂದ ಕಾಯುತ್ತಿದ್ದೇನೆ ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯ ಬರಗಾಲದಿಂದ ತತ್ತರಿಸುತ್ತಿದೆ. ಅಧ್ಯಕ್ಷರೆ, ನೀವು ಅನಮತಿ ಕೊಟ್ಟರೆ ಮಂಡಿಸುತ್ತೇನೆ.

ಅಧ್ಯಕ್ಷರು : ಈಗ ಶ್ರೀಯುತರಾದ ಎಂ.ಬಿ. ಪಾಟೀಲ್, ಅಪ್ಪಾ ಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿಯವರು ಡೋಣಿ ನದಿಯ ಪ್ರವಾಹ ನಿಯಂತ್ರಣ, ಹೂಳು ತೆಗೆಯುವ ವಿಚಾರದಲ್ಲಿ ಬೆಳಿಗ್ಗೆ ಚರ್ಚೆ ಮಾಡಿದ್ದಾರೆ. ಈಗ ಉತ್ತರ ಕೊಡಿ. ಎ.ಎಸ್.ಪಾಟೀಲ್ ಐದು ನಿಮಿಷ ಮಾತನಾಡಿ. ಇದಕ್ಕೆ

ಉತ್ತರ ಅಗಬೇಕಲ್ಲವೆ? ನೀವು ಐದು ನಿಮಿಷಕ್ಕೆ ಹೆಚ್ಚು ಮಾತನಾಡಬೇಡಿ, ಪ್ಲೀಸ್.

2) ವಿಷಯ : ಡೋಣಿ ನದಿ ಪ್ರವಾಹ ನಿಯಂತ್ರಣ ಮತ್ತು ಹೂಳು ಎತ್ತುವ ಬಗ್ಗೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) : ಡೋಣಿ ನದಿಯ ಹೂಳೆತ್ತುವ ಬಗ್ಗೆ, ಪುನರ್ ಜೀವನದ ಬಗ್ಗೆ ಬಹುಶಃ ಇದು ಸುಮಾರು ಹತ್ತು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ನಾನು ಮೊದಲನೇ ಬಾರಿಗೆ ಶಾಸಕನಾಗಿ ಬಂದಂಥ ಸಂದರ್ಭದಲ್ಲಿ 2008–09 ರಲ್ಲಿ ಈ ವಿಷಯದ ಬಗ್ಗೆ ಇದೇ ಸದನದಲ್ಲಿ ಅರ್ಧಗಂಟೆ ಚರ್ಚೆಯಾಗಿತ್ತು. ತಾವು ಅನುಮತಿ ಕೊಟ್ಟಿದ್ದೀರಿ, ಆಗ ಸನ್ಮಾನ್ಯ ಜಗದೀಶ್‌ಶೆಟ್ಟರ್‌ರವರು ಅಧ್ಯಕ್ಷರಾಗಿದ್ದರು. ಇದು ಹಿಂದೆ ಕೇಂದ್ರದ NDA ಸರ್ಕಾರ ಇದ್ದಂಥ ಸಂದರ್ಭದಲ್ಲಿ ಲೋಕಸಭೆಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆಯಾಗಿ ಅವತ್ತು ಕೇಂದ್ರದಿಂದ 50.00 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟು ಅದರ ಬಗ್ಗೆ ಒಂದು ಪೈಲಟ್ ಪ್ರಾಜೆಕ್ಟ್ ಅನ್ನು ಕೂಡ ರೆಡಿ ಮಾಡಬೇಕೆಂದು ಹೇಳಿ ರೂ. 5.00 ಕೋಟಿ ಅನುದಾನವನ್ನು ಮಾಡಿ 50.00 ಲಕ್ಷ ರೂಪಾಯಿಗಳ first installment ಅನ್ನು ಕೇಂದ್ರ ಸರ್ಕಾರ ಅವತ್ತಿನ ವಾಜಪೇಯಿಯವರು ಇದ್ದಂಥ ಸಂದರ್ಭದಲ್ಲಿ ಕೂಡ ಆ ಡೋಣಿ ನದಿಯನ್ನು ಪುನರ್ ಜೀವನ ಮಾಡಬೇಕೆಂದು ಹೇಳಿ ಅದಕ್ಕೆ ಹಣವನ್ನು ಕೊಟ್ಟು Agriculture University ಗೆ survey ಮಾಡಬೇಕೆಂದು ಕೊಟ್ಟಿದ್ದರು. ಅವರೂ ಕೂಡ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ಡೋಣಿ ನದಿ 'U' ಆಕಾರಗಳಲ್ಲಿ ತಿರುವುಗಳನ್ನು ಪಡೆದುಕೊಂಡು ಸುಮಾರು 196 ಕಿ.ಮೀ.ಗಳಲ್ಲಿ 146 ಕಿ.ಮೀ. ಬಿಜಾಪುರ ಜಿಲ್ಲೆಗೆ ಹರಿಯುತ್ತದೆ. ಅದು ನನ್ನ ಕ್ಷೇತ್ರದಲ್ಲಿ ಸುಮಾರು 46 ಕಿ.ಮೀ. ಹರಿದು ಬರುತ್ತದೆ. ಇದರಲ್ಲಿ ಬಹಳ simple ಆಗಿ ನಾನು ಕೆಲವು Technical points ಮಾತ್ರ ಹೇಳುತ್ತೇನೆ. ನಮ್ಮ ಸಚಿವರು ಇದ್ದಾರೆ. ಅವರಿಗೆ ಅದರ ಬಗ್ಗೆ ಗೊತ್ತಿದೆ. ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. 'U' ಆಕಾರದ ತಿರುವುಗಳನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಅಲ್ಲಿ Black cotton soil ಇರುವುದರಿಂದ ನೀರು ಹರಿಯುವ ಸಂದರ್ಭದಲ್ಲಿ ಒಂದು ದಡದ ಮಣ್ಣನ್ನು ಕಿತ್ತುಕೊಂಡು ಬಂದು ಇನ್ನೊಂದು